ಸಜ್ಜನರ ಸಂಗಾತಿ
www.sanmarga.com

ಸಂಪುಟ: 33
ಸಂಚಿಕೆ: 09
ಬೆಲೆ ರೂ. 8.00
ಮಂಗಳೂರು

# ಸನ್ಮಾರ್ಗ ವಾರಪತ್ರಿಕೆ

2010 ಮೇ 16 – 22
1431 ಜುಮಾದಿಲ್ ಆಖರ್ 01 – 07






## ಪರೀಕ್ಷಾ ಫಲಿತಾಂಶ?

| ಹೆಸರು | ಊರು | ತರಗತಿ | ಸಾವಿನ ವಿಧಾನ |
|---|---|---|---|
| ಸಂಗೀತಾ | ಹಾಸನ | ಎಸ್.ಎಸ್.ಎಲ್.ಸಿ. | ವಿಷ ಸೇವಿಸಿ ಆತ್ಮಹತ್ಯೆ |
| ಪೂಜಾ | ಶ್ರೀರಂಗಪಟ್ಟಣ | ಎಸ್.ಎಸ್.ಎಲ್.ಸಿ. | ಆತ್ಮಹತ್ಯೆ |
| ಮಂಜಯ್ಯ ಹಿರೇಮಠ | ಬ್ಯಾಡಗಿ | ಎಸ್.ಎಸ್.ಎಲ್.ಸಿ. | ಬೆಂಕಿ ಹಚ್ಚಿ |
| ಆನಂದ ಪೂಜಾರಿ | ಬೆಳಗಾವಿ | ಎಸ್.ಎಸ್.ಎಲ್.ಸಿ. | ನೇಣು ಬಿಗಿದು |
| ಹೇಮ | ಭದ್ರಾವತಿ | ಎಸ್.ಎಸ್.ಎಲ್.ಸಿ. | ಅನ್ನದಲ್ಲಿ ವಿಷ ಬೆರೆಸಿ |
| | (ಈಕೆ ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಕ್ಕೆ ಬೇಸರಗೊಂಡು) | | |
| ರಾಗಿಣಿ | ರಾಮನಗರ | ಎಸ್.ಎಸ್.ಎಲ್.ಸಿ. | ಆತ್ಮಹತ್ಯೆ |
| ಮರಿಯಪ್ಪ | ಬಳ್ಳಾರಿ | ಎಸ್.ಎಸ್.ಎಲ್.ಸಿ. | ರೈಲಿನಡಿಗೆ ತಲೆಕೊಟ್ಟು |
| ಕಾವ್ಯಾ | ಬೆಂಗಳೂರು ಕೆ.ಆರ್. ನಗರ | ಎಸ್.ಎಸ್.ಎಲ್.ಸಿ. | ನೇಣುಬಿಗಿದು |
| ಮಾಲಾ | ಬೆಂಗಳೂರು ಕೆ.ಆರ್. ಪುರಂ | ಎಸ್.ಎಸ್.ಎಲ್.ಸಿ. | ನೇಣುಬಿಗಿದು |
| ಧನಶೇಖರ | ಬೆಂಗಳೂರು | ಪಿ.ಯು.ಸಿ. | ಆತ್ಮಹತ್ಯೆ |
| ಶಿವಾನಂದ ಜೋಗಿ | ಬಿಜಾಪುರ | ಪಿ.ಯು.ಸಿ. | ವಿಷ ಸೇವಿಸಿ |
| ನೇತ್ರಾವತಿ | ಗದಗ | ಪಿ.ಯು.ಸಿ. | ವಿಷ ಸೇವಿಸಿ |
| ಶಾಲಿನಿ | ಮಂಡ್ಯ | ಪಿ.ಯು.ಸಿ. | ಬಾವಿಗೆ ಹಾರಿ |
| ಶ್ರೀನಿವಾಸ | ಬಾಗಲಕೋಟೆ | ಪಿ.ಯು.ಸಿ. | ವಿಷ ಸೇವಿಸಿ |
| ಚನ್ನಬಸಪ್ಪ | ಶಿರಗುಪ್ಪ | ಪಿ.ಯು.ಸಿ. | ರೈಲಿನಡಿಗೆ ತಲೆಕೊಟ್ಟು |
| ಉಲ್ಲಾಸ್ | ತರೀಕೆರೆ | ಪಿ.ಯು.ಸಿ. | ಆತ್ಮಹತ್ಯೆ |
| ರಂಗಮ್ಮ | ಬಾದಾಮಿ | ಪಿ.ಯು.ಸಿ. | ಬೆಂಕಿ ಹಚ್ಚಿ |

ಮತ್ತು ಇನ್ನೂ...

(ಸಂಪಾದಕೀಯ 2ನೇ ಪುಟದಲ್ಲಿ)

## ದಾಳಿಕೋರರು ಇಸ್ರೇಲ್ ಯುವಕರೇ?




ಫೈಝುಲ್ ವಿ.

ಬಂಧಿಸಲ್ಪಟ್ಟಿರುವ ಏಕೈಕ ಭಯೋತ್ಪಾದಕ ಅಜ್ಮಲ್ ಅಮೀರ್ ಕಸಬ್‌ನನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಿ ಮುಂಬೈ ಭಯೋತ್ಪಾದಕ ದಾಳಿ ಪ್ರಕರಣಕ್ಕೆ ಕೊನೆ ಹಾಡುತ್ತಿರುವ ಸಂದರ್ಭದಲ್ಲಿ ಹಲವಾರು ಪ್ರಶ್ನೆಗಳೊಂದಿಗೆ ಈ ದಾಳಿಯಲ್ಲಿ ಗಾಯಗೊಂಡಿರುವ ಬಲಿಪಶುಗಳು ಪ್ರತ್ಯಕ್ಷವಾಗಿದ್ದಾರೆ. ಪ್ರಾಸಿಕ್ಯೂಶನನ್ನು ಲಿಯೋಪೋರ್ಡ್ ಕೆಫೆಯಲ್ಲಿ ನಡೆದಿದ್ದ ದಾಳಿಯಲ್ಲಿ ಗಾಯಗೊಂಡ ಬ್ಯೂಟೀಶಿಯನ್ ಅನಾಮಿಕಾ ಗುಪ್ತ ನಿರಾಕರಿಸುತ್ತಿದ್ದಾರೆ. ಭಯೋತ್ಪಾದನಾ ದಾಳಿಯ ಎರಡು ದಿವಸ ಮೊದಲು ಕೊಲಾಬಾದ ಯಹೂದಿ ಕೇಂದ್ರವಾಗಿರುವ ನಾರಿಮನ್ ಹೌಸ್‌ನಲ್ಲಿ ಕಸಬ್ ಮತ್ತು ಮೂವರನ್ನು ಕಂಡಿರುವುದಾಗಿ ಅವರು ಹೇಳುತ್ತಾರೆ. ನಾರಿಮನ್ ಹೌಸ್ ಕೂಡಾ ಭಯೋತ್ಪಾದನಾ ದಾಳಿಗೀಡಾಗಿತ್ತು. ಭಯೋತ್ಪಾದನೆಯ ಕೇಂದ್ರ ನಾರಿಮನ್ ಹೌಸ್ ಆಗಿದೆ. ಅದಕ್ಕೆ ಸಂಬಂಧಿಸಿದ ಸೂಚನೆಗಳ ಬಗ್ಗೆ ಪೊಲೀಸರು ಕಣ್ಣು ಮುಚ್ಚಿ ಕುಳಿತಿರುವುದೇಕೆಂದು ಆಕೆ ಪ್ರಶ್ನಿಸುತ್ತಾರೆ. ಈ ದಾಳಿ ಪ್ರಕರಣದಲ್ಲಿ ತನ್ನನ್ನೇಕೆ ಸಾಕ್ಷಿಯಾಗಿ (ಕೊನೆಯ ಪುಟಕ್ಕೆ)

## ಅಕ್ರಮಿ, ಅತ್ಯಾಚಾರಿಗೆ ಜೈ, ಗೋವಿಗೆ ಗುಡ್‌ಬೈ


ಗ್ರೆಗರಿ ಪತ್ರಾವೋ ತಮ್ಮ ಗೋವುಗಳೊಂದಿಗೆ

ಎ.ಕೆ. ಕುಕ್ಕಿಲ

ಘಟನೆ ಒಂದು

ಉಡುಪಿ ಜಿಲ್ಲೆಯ ಬಡಗುಪೇಟೆ ಶ್ರೀ ವಾಸುಕಿ ಅನಂತ ಪದ್ಮನಾಭ ದೇವಾಲಯದ ಹೆಬ್ಬಾಗಿಲು ಮತ್ತು ಗೋಪುರವು ಶ್ರೀರಮಣ ಭಟ್ ಎಂಬವರ ಖಾಸಗಿ ಜಾಗದಲ್ಲಿರುವುದು ಸಾಬೀತಾಗಿರುವುದರಿಂದ ಅವರ ಬೇಡಿಕೆಯಂತೆ ಅದನ್ನು ಕೆಡವಿ ಹಾಕಿ ಜಾಗ ಮರಳಿಸಬೇಕೆಂದು ರಾಜ್ಯ ಹೈಕೋರ್ಟು ಆದೇಶಿಸುತ್ತದೆ. ಅದರಂತೆ ಎಪ್ರಿಲ್ 19, 2010ರಂದು ಜೆಸಿಬಿ ಯಂತ್ರದೊಂದಿಗೆ (3ನೇ ಪುಟಕ್ಕೆ)

## ಕಸಬ್‌ನನ್ನು ತಯಾರಿಸಿದ ಕಾರ್ಖಾನೆಯನ್ನು ಸುಡಬೇಕಾಗಿದೆ

ಸಲೀಮ್ ಬೋಳಂಗಡಿ

ಮುಂಬೈ ದಾಳಿ ಪ್ರಕರಣದಲ್ಲಿ ಅಜ್ಮಲ್ ಕಸಬ್‌ಗೆ ಮರಣ ದಂಡನೆ ವಿಧಿಸಲಾಗಿದೆ. ಸುಮಾರು 168 ಮಂದಿಯ ಹತ್ಯೆ ಮತ್ತು 300 ಮಂದಿ ಗಾಯಾಳುಗಳಾದ ಪ್ರಕರಣವು ಖಂಡಿತ ವ್ಯವಸ್ಥಿತ, ಪೂರ್ವಯೋಜಿತ ಎನ್ನುವುದರಲ್ಲಿ ಅನುಮಾನವಿಲ್ಲ. ಹದಿನೇಳು ತಿಂಗಳುಗಳ ನಿರಂತರ ವಿಚಾರಣೆಯ ಬಳಿಕ ಅಜ್ಮಲ್ ಕಸಬ್‌ನನ್ನು ಅಪರಾಧಿಯೆಂದು ಕೋರ್ಟು ತೀರ್ಮಾನಿಸಿದೆ.

ಇಲ್ಲಿ ಚಿಂತಿಸಬೇಕಾದ ವಿಷಯ ಏನೆಂದರೆ ಕಸಬ್‌ನನ್ನು ನೇಣುಗಂಭಕ್ಕೇರಿಸಿದರೆ ಇಲ್ಲಿನ ಸಮಸ್ಯೆ ಬಗೆಹರಿಯುವುದೇ ಎಂಬುದು. ಕಸಬ್‌ನನ್ನು ತಯಾರಿಸಿದ ಕಾರ್ಖಾನೆಯ ಮೂಲವನ್ನು ಕಂಡು ಹಿಡಿಯಬೇಕಾದ ಅವಶ್ಯಕತೆಯಿದೆ. ಈ 22 ವರ್ಷದ ಯುವಕನ ಮೆಂಟಾಲಿಟಿಯನ್ನು ಬದಲಿಸಿದವರಾರು? ಎಳೆಯ ಯುವಕರ ತಲೆಗೆ ವಿಷವನ್ನು ತುಂಬಿ ಅವರ ಜೀವನವನ್ನೂ ಉಳಿದವರ ಪ್ರಾಣವನ್ನೂ ಹಿಂಡುವ ದ್ರೋಹಿಗಳ ಬೇಟೆಯಾಗಬೇಕಿದೆ. ಇದರ ಹಿಂದಿರುವ ನಿಜವಾದ ಸೂತ್ರದಾರರು ಯಾರು ಎಂಬುದರ ಕುರಿತು ಚರ್ಚಿಸುವ ಅಗತ್ಯವಿದೆ. ಇಲ್ಲದಿದ್ದರೆ ಇನ್ನೊಬ್ಬ ಕಸಬ್‌ನ ತಯಾರಿಕೆಯಲ್ಲಿ ಅವರು ನಿರತರಾಗಬಹುದು. ಮಿಲಿಯಕ್ಕೊಬ್ಬರಾದ ಕರ್ಕರೆಯವರಂತಹ





ಅಧಿಕಾರಿಗಳನ್ನು ನಾವು ಕಳೆದುಕೊಳ್ಳಬಹುದು. ಆದರೆ ಇಂದು ಈ ಕುರಿತು ಚರ್ಚೆಯಾಗುತ್ತಿಲ್ಲ. ಕಸಬ್‌ನಿಗೆ ಗಲ್ಲು ಸಿಕ್ಕ ಕುರಿತು ಹರ್ಷೋಲ್ಲಾಸಗಳು ನಡೆಯುತ್ತಿವೆ. ವಿವಿಧ ರೀತಿಯ ಪ್ರತಿಕ್ರಿಯೆಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಿವೆ.

ದಾಳಿ ನಡೆದ ಸಂದರ್ಭದಲ್ಲಿ ಕರ್ಕರೆ ಸಾವಿನ ಬಗ್ಗೆ ಸಮಗ್ರ ತನಿಖೆಗೆ ಆಗ್ರಹಿಸಿದ ಕೇಂದ್ರ ಮಂತ್ರಿ ಅಬ್ದುರ್ರಹ್ಮಾನ್ ಅಂತುಳೆಯವರ ವಿರುದ್ಧವೇ ಇಲ್ಲಿ ಹರಿಹಾಯಲಾಗಿತ್ತು ಎಂಬುದು ಗಮನಾರ್ಹ.

ನಿಜವಾಗಿ ನಮ್ಮ ತನಿಖಾ ವಿಧಾನದ ಬಗ್ಗೆ ಸಾಕಷ್ಟು ದೂರುಗಳಿವೆ. ಅನೇಕ ದಿನ (ಕೊನೆಯ ಪುಟಕ್ಕೆ)

# 1 CAD COMPANY IN ASIA

CADD CENTRE

UDUPI
0820 - 2522741
0820 - 2521374

MANGALORE
0824 - 3256070
0824 - 4285772

INDUSTRY SPECIFIC SPECIALIZED COURSES
• Mechanical CADD • Civil CADD
• Architectural CADD • Electrical CADD • Interior Architecture & Design • 3DS Max • Project Planning & Management using Primavera / M.S. Project. ANSYS

L.C.C. Building Opp. M.G.M. College, Kunjibettu, Udupi - 576102
Ist flr, Prime Towers, Opp. Mangalore Nursing Home, Bendoorwell, Mangalore - 3

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಅನುತ್ತೀರ್ಣ ಎಂಬ ಕ್ರಿಮಿನಲ್ ಅಪರಾಧ

ಶಾಲಾ-ಕಾಲೇಜುಗಳಿಂದ ಹೃದಯ ವಿದ್ರಾವಕ ಫಲಿತಾಂಶ ಹೊರಬಿದ್ದಿದೆ. ಅಲ್ಲಿನ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಲಾದ ಫಲಿತಾಂಶವನ್ನು ನೋಡಿ, ಈಗಾಗಲೇ 20ರಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈವರೆಗೆ ಈ ಸಾವಿನ ಹೊಣೆಯನ್ನು ಸರಕಾರವಾಗಲಿ, ಶಿಕ್ಷಕರು-ಪೋಷಕರಾಗಲಿ, ನೋಟೀಸು ಬೋರ್ಡು- ಪ್ರಶ್ನೆ ಪತ್ರಿಕೆಗಳಾಗಲಿ ಯಾವುದೂ ವಹಿಸಿಕೊಂಡಿಲ್ಲ. 'ಅನುತ್ತೀರ್ಣ' ಎಂಬ ಜೀವ ಇಲ್ಲದ, ದಂಡಿಸಲು ಸಾಧ್ಯವಿಲ್ಲದ ಆರೋಪಿಯ ಮೇಲೆ ಸಾವಿನ ಹೊಣೆಯನ್ನು ಹೊರಿಸಿ ಎಲ್ಲರೂ ಕೈ ತೊಳೆದು ಕೊಳ್ಳುತ್ತಿದ್ದಾರೆ. ಪ್ರತಿ ಸಂತಾಪ, ಶೋಕ, ಸಾಂತ್ವನದ ಹೇಳಿಕೆಗಳಲ್ಲಿ ಈ ವಿದ್ಯಾರ್ಥಿಗಳನ್ನೇ ಅಪರಾಧಿಗಳೆಂದು ಬಿಂಬಿಸುವ ಜಾಣತನ ಕಾಣಿಸುತ್ತಿದೆ. ಇನ್ನು, ಫೇಲ್ ಆಗಿಯೂ ಆತ್ಮಹತ್ಯೆ ಮಾಡಿಕೊಳ್ಳದೇ ಉಳಿದುಕೊಂಡಿರುವ ವಿದ್ಯಾರ್ಥಿಗಳಿಗೆ, ಅದಕ್ಕಿರುವ ಕಾರಣಗಳನ್ನು ಹೇಳಿಕೊಂಡು ಹಗುರವಾಗುವುದಕ್ಕೆ ಮಾಧ್ಯಮಗಳಲ್ಲಿ ಸಣ್ಣದೊಂದು ಸ್ಪೇಸ್ ಕೂಡ ಸಿಗುತ್ತಿಲ್ಲ. ಅವನ್ನೆಲ್ಲಾ 100 ಶೇ. ಫಲಿತಾಂಶ ಪಡೆದ ಶಾಲಾ-ಕಾಲೇಜುಗಳು ಮತ್ತು ಡಿಸ್ಟಿಂಕ್ಷನ್ ಪಡೆದ ಮಕ್ಕಳು ಸಂಪೂರ್ಣವಾಗಿ ಖರೀದಿಸಿಟ್ಟಿದ್ದಾರೆ. 'ಆತ್ಮಹತ್ಯೆ ಮಾಡು, ಸ್ಪೇಸ್ ಕೊಡುವ' ಎಂದು ಅಣಕಿಸುವಂಥ ಧಾಟಿಯಲ್ಲಿ ಸುದ್ದಿ ಮಾಧ್ಯಮಗಳು ಪಾಸು ಮಾರ್ಕು ಪಡೆಯದ ವಿದ್ಯಾರ್ಥಿಗಳೊಂದಿಗೆ ವರ್ತಿಸುತ್ತಿವೆ. ನಿಜವಾಗಿ ಮಾಧ್ಯಮ ಮತ್ತು ಸಮಾಜದ ಸರ್ವ ಅವಮಾನ, ಹೀನೈಕೆಯ ಮಧ್ಯೆಯೂ ಕೇವಲ 20ರಷ್ಟು ವಿದ್ಯಾರ್ಥಿಗಳಷ್ಟೇ ಆತ್ಮಹತ್ಯೆ ಮಾಡಿಕೊಂಡರಲ್ಲಾ, ಅದಕ್ಕಾಗಿ ಈ 'ಸೋತ' ಗುಂಪನ್ನು ಅಭಿನಂದಿಸಬೇಕು.

ನಿಜವಾಗಿ ಓರ್ವ ವಿದ್ಯಾರ್ಥಿ ಫೇಲ್ ಆಗುವುದಕ್ಕೆ ಆತನೋರ್ವನೇ ಕಾರಣ ಆಗಿರುವುದಿಲ್ಲ. ಅದರ ಹಿಂದೆ ಬಡತನ, ಹೆತ್ತವರು, ಶಿಕ್ಷಕರು, ಗೆಳೆಯರು ಮತ್ತು ಇನ್ನೇನೋ ಹಲವಾರು ಕಾರಣಗಳಿರುತ್ತವೆ. ಮನೆಯಲ್ಲಿ ಓದಿಗೆ ಪೂರಕವಾದ ವಾತಾವರಣ ಇಲ್ಲದೇ ಇರಬಹುದು. ಶಿಕ್ಷಕರು ಎಷ್ಟು ಗಮನ ಕೊಡಬೇಕೋ ಅಷ್ಟು ಕೊಡದೇ ಇರಬಹುದು. ವಿದ್ಯಾರ್ಥಿಯ ಅಭಿರುಚಿಗೆ ತಕ್ಕಂಥ ಪ್ರೋತ್ಸಾಹ, ಗುರುತಿಸುವಿಕೆ ನಡೆದಿಲ್ಲದೇ ಇರಬಹುದು. ಆದರೆ ನೋಟೀಸು ಬೋರ್ಡಿನಲ್ಲಿ ಪ್ರಕಟವಾಗುವ ಫಲಿತಾಂಶ, ಇವಾವುದನ್ನೂ ಹೇಳುವುದಿಲ್ಲ. 'ಕಲಿಯದೇ ಇರುವುದರಿಂದ ಆತ ಫೇಲ್ ಆದ' ಎಂಬ ಒಂದು ವಾಕ್ಯದ ಹೊರತಾದ ಯಾವ ಕಾರಣವನ್ನೂ ಮನೆ, ಸಮಾಜ ಖಂಡಿತ ನೀಡುವುದಿಲ್ಲ. ಇಷ್ಟಕ್ಕೂ ಪರೀಕ್ಷೆ ಎಂಬ ಮೂರಕ್ಷರಕ್ಕೆ ವಿದ್ಯಾರ್ಥಿಯ ಸೋಲು ಮತ್ತು ಗೆಲುವನ್ನು ನಿರ್ಣಯಿಸುವ ಹಕ್ಕನ್ನು ನೀಡಿದ್ದಾದರೂ ಯಾರು? ನಾವೇ ಅಲ್ಲವೇ? 'ನೀನು ಈ ಪರೀಕ್ಷೆಯಲ್ಲಿ ಪಾಸ್ ಆಗದಿದ್ದರೆ, ಜಗತ್ತೇನೂ ಮುಳುಗಿ ಹೋಗುವುದಿಲ್ಲ' ಎಂದು ಎಷ್ಟು ಮಂದಿ ಹೆತ್ತವರು ತಮ್ಮ ಮಕ್ಕಳಲ್ಲಿ ಹೇಳಬಲ್ಲರು? ಡಿಸ್ಟಿಂಕ್ಷನ್, ಫಸ್ಟ್ ಕ್ಲಾಸ್ ಎಂದು ಮಕ್ಕಳನ್ನು ಸ್ಪರ್ಧೆಗೆ ಅಣಿಗೊಳಿಸಿ, ಓಟದ ಕುದುರೆಗಳಂತೆ ಶಾಲೆಗೆ ಓಡಿಸುವ ಹೆತ್ತವರು ಎಷ್ಟಿಲ್ಲ ಹೇಳಿ? ಒಂದು ಕಡೆ ತನ್ನ ಹೆತ್ತವರ ಅಪಾರವಾದ ನಿರೀಕ್ಷೆ ಮತ್ತು ಇನ್ನೊಂದು ಕಡೆ ತನ್ನ ಅಸಾಮರ್ಥ್ಯ ಅಂತಿಮವಾಗಿ ವಿದ್ಯಾರ್ಥಿಯನ್ನು ಜಿಗುಪ್ಸೆಗೆ ತಳ್ಳಲಾರದೆಂದು ಹೇಗೆ ಹೇಳುವುದು? ಹಾಗಂತ ಫೇಲ್ ಆಗುವುದು ಅಭಿಮಾನದ ಸಂಗತಿ ಎಂದಲ್ಲ. ಈ ಜಗತ್ತಿನಲ್ಲಿ ಪಾಸು ಮತ್ತು ಫೇಲ್‌ಗೆ ಖಂಡಿತ ವ್ಯತ್ಯಾಸ ಇದೆ. ನಪಾಸಾದ ವಿದ್ಯಾರ್ಥಿಯ ಅಂಕಪಟ್ಟಿಗೂ ಪಾಸಾದ ವಿದ್ಯಾರ್ಥಿಯ ಅಂಕಪಟ್ಟಿಗೂ ಸಮಾನ ಬೆಲೆ ಖಂಡಿತ ಇಲ್ಲ. ಆದರೂ ಅಂಕಪಟ್ಟಿಯೊಂದೇ ಓರ್ವ ವಿದ್ಯಾರ್ಥಿಯ ಬದುಕನ್ನು ರೂಪಿಸುತ್ತದೆಯೇ?

ಓರ್ವ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗುತ್ತಾನೆಂಬುದು ಪತ್ರಿಕೆಗಳಲ್ಲಿ ಒಂದು ಕಾಲಮ್‌ಗೆ ಸೀಮಿತವಾಗಬೇಕಾದ ಸಣ್ಣ ಸುದ್ದಿಯೇನಲ್ಲ. ಯಾಕೆಂದರೆ ಸತ್ತವರನ್ನು ಮತ್ತೆ ಬದುಕಿಸಿ ತರುವುದಕ್ಕೆ ನಮ್ಮ ಪ್ರಶ್ನೆಪತ್ರಿಕೆಗೆ, ನೋಟೀಸು ಬೋರ್ಡಿಗೆ, ಶಿಕ್ಷಣ ವ್ಯವಸ್ಥೆಗೆ ಖಂಡಿತ ಸಾಧ್ಯವಿಲ್ಲ. ಆದ್ದರಿಂದಲೇ ವಿದ್ಯಾರ್ಥಿಯನ್ನು ಆತ್ಮಹತ್ಯೆಗೆ ಪ್ರಚೋದಿಸುವ ಶೈಕ್ಷಣಿಕ ಪದ್ಧತಿ ಗಂಭೀರ ಚರ್ಚೆಗೆ ಒಳಗಾಗಬೇಕಿದೆ. ನಿಜವಾಗಿ ಶಾಲೆ ಎಂಬುದು ಯಾವುದೇ ವಿದ್ಯಾರ್ಥಿಯ ಪಾಲಿಗೆ ತಿಳುವಳಿಕೆಯನ್ನು ಹೆಚ್ಚಿಸುವ, ಜ್ಞಾನ ಆರ್ಜಿಸುವ ಪ್ರಥಮ ಮೆಟ್ಟಿಲು. ಪುಸ್ತಕ, ಚೀಲ, ಕಪ್ಪು ಬೋರ್ಡು, ಚಾಕುಪೀಸು, ಬೆಂಚು, ಡೆಸ್ಕುಗಳೆಲ್ಲ ಅದಕ್ಕೆ ಪೂರಕವಾದ ಉಪಕರಣಗಳು ಮಾತ್ರ. ಓರ್ವ ವಿದ್ಯಾರ್ಥಿಯ ಪಾಲಿಗೆ ಈ ಪುಸ್ತಕಗಳು ಮತ್ತು ಉಪಕರಣಗಳು ಆತ್ಮೀಯ ಜೊತೆಗಾರರಾಗಬೇಕೇ ಹೊರತು ಅದೇ ಆತ್ಮಹತ್ಯೆಗೆ ಪ್ರಚೋದಿಸುವ, ಖಿನ್ನತೆಗೆ ಒಳಗಾಗಿಸುವ ಸಾಧನಗಳಾಗಬಾರದು. ಇಷ್ಟಕ್ಕೂ ಫೇಲ್ ಆಗುವ ವಿದ್ಯಾರ್ಥಿಗಳನ್ನು ಅವರ ಸೋಮಾರಿತನ, ಬೇಜವಾಬ್ದಾರಿತನಕ್ಕಾಗಿ ದೂಷಿಸುವವರು ಇವತ್ತಿನ ಶಿಕ್ಷಣ ಪದ್ಧತಿಯ ಬಗ್ಗೆ ಏನು ಹೇಳುತ್ತಾರೆ? ಅದೇನೂ ಸಂಪೂರ್ಣ ದೋಷ ರಹಿತವೇ? ಸೈನ್ಸ್ ಎಂದರೆ ಮಾರುದೂರ ಓಡುವ ವಿದ್ಯಾರ್ಥಿಗೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ವಿನಾಯಿತಿಯಿದೆಯೇ? ಶಾಲೆಯಲ್ಲಿ ಆತ ಅದನ್ನು ಕಲಿಯುವುದು, ಪರೀಕ್ಷೆ ಬರೆಯುವುದು ಕಡ್ಡಾಯವಲ್ಲವೇ? ಇಷ್ಟವಿಲ್ಲದ ಒಂದು ಸಬ್ಜೆಕ್ಟನ್ನು ಬಲವಂತದಿಂದ ಹೇರಿ, 'ನೀನಿದರಲ್ಲಿ ಪಾಸ್ ಆಗದಿದ್ದರೆ, ಬದುಕೇ ಹೋಯಿತೆಂದು' ಬೆದರಿಸುವುದೂ ಕ್ರೌರ್ಯವೇ ಅಲ್ಲವೇ? ಮ್ಯಾತ್ಸ್ ತಲೆಗೆ ಹತ್ತಿದರೂ ಹತ್ತದಿದ್ದರೂ ಇಂದಿನ ಶಿಕ್ಷಣ ಕ್ರಮದಂತೆ ವಿದ್ಯಾರ್ಥಿಯೋರ್ವ ಅದನ್ನು ಕಲಿಯಲೇಬೇಕು. ಮಾತ್ರವಲ್ಲ, ಇದರಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೂ ಇಲ್ಲದ ವಿದ್ಯಾರ್ಥಿಗಳಿಗೂ ನಿಗದಿಪಡಿಸಿರುವ ತೇರ್ಗಡೆಯ ಅಂಕ ಕೂಡ ಸಮಾನ. ತನಗೆ ಆಸಕ್ತಿ ಇಲ್ಲದ ವಿಷಯದಲ್ಲಿ ಒಂದು ಅಂಕ ಕಡಿಮೆ ಬಂದು ಉಳಿದೆಲ್ಲವುಗಳಲ್ಲಿ ಭರ್ಜರಿ ಅಂಕ ಪಡೆದರೂ ಆತ ಫೇಲ್ ಆದವರ ಪಟ್ಟಿಯಲ್ಲಿರಬೇಕಾಗುತ್ತದೆ. ಇದೇನು ನೂರು ಶೇಕಡಾ ನ್ಯಾಯ ಸಮ್ಮತವೇ?

ಏನೇ ಆಗಲಿ, ಪುಸ್ತಕದಲ್ಲಿ ಏನಿದೆಯೋ ಅವೆಲ್ಲವನ್ನೂ ಕರಗತ ಮಾಡಿಕೊಂಡು ಎರಡ್ಮೂರು ಗಂಟೆಗಳೊಳಗೆ ಪ್ರಶ್ನೆ ಪತ್ರಿಕೆಗೆ ಉತ್ತರಿಸುವುದೇನು ಸಣ್ಣ ಸಾಧನೆಯಲ್ಲ. ಆದ್ದರಿಂದ ತೇರ್ಗಡೆಯಾದ ಮತ್ತು ಉನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸೋಣ. ಆದರೆ ನಮ್ಮ ಅಭಿನಂದನೆಯ ಧಾಟಿ, ಫೇಲ್ ಆದ ವಿದ್ಯಾರ್ಥಿಗಳನ್ನು ನೋಯಿಸುವ, ಅವಮಾನಿಸುವ ರೀತಿಯಲ್ಲಿ ಇರದೇ ಇರಲಿ. ತೇರ್ಗಡೆಯಾದ ಮಕ್ಕಳಿಗಿಂತ, ಸಾಕಷ್ಟು ಶ್ರಮಪಟ್ಟೂ ತೇರ್ಗಡೆಯಾಗದೇ ಹೋದ ಈ ಮಕ್ಕಳೇ ನಮ್ಮ ಸಾಂತ್ವನಕ್ಕೆ, ಪ್ರೋತ್ಸಾಹದ ನುಡಿಗೆ ಹೆಚ್ಚು ಅರ್ಹರು. ಅವರ ಮುಂದಿನ ಬದುಕು ಫೇಲ್ ಅಥವಾ ಪಾಸ್ ಆಗುವುದು ನಮ್ಮ ವರ್ತನೆಯನ್ನು ಅವಲಂಬಿಸಿಕೊಂಡಿದೆ. ನಾವು ಅವರ ಪಾಲಿನ ಖಳನಾಯಕರಾಗುವುದು ಬೇಡ. ಈ ಸಂದರ್ಭದಲ್ಲಿ ಹೆತ್ತವರ ಜವಾಬ್ದಾರಿ ಬಹಳ ದೊಡ್ಡದು. ನಿಮ್ಮ ನಾಲ್ಕು ಪ್ರೀತಿಯ, ಸಾಂತ್ವನದ, ಪ್ರೋತ್ಸಾಹದ ಮಾತುಗಳು ಫೇಲ್ ಆದ ವಿದ್ಯಾರ್ಥಿಯನ್ನು ಭವಿಷ್ಯದ ಯಶಸ್ವೀ ವ್ಯಕ್ತಿಯಾಗಿ ಮಾರ್ಪಡಿಸೀತು. ಆದ್ದರಿಂದ ಫೇಲ್ ಆದವರನ್ನು ಸಾಂತ್ವನಿಸಿ, ಪ್ರೋತ್ಸಾಹಿಸೋಣ. ಪಾಸ್ ಆದವರನ್ನು ಅಭಿನಂದಿಸೋಣ.

## ವಿ ಚಾ ರ ಮ ಣಿ

ಮುಸ್ಲಿಮರೇ, ನಿಮಗೆ ಸಂಪತ್ತು ಮತ್ತು ಪ್ರಾಣ ಇವೆರಡರ ಪರೀಕ್ಷೆಗಳೂ ಮುಂದೆ ಬಂದೇ ತೀರುವುವು ಮತ್ತು ನೀವು ಗ್ರಂಥದವರಿಂದಲೂ ಬಹುದೇವ ವಿಶ್ವಾಸಿಗಳಿಂದಲೂ ಹಲವು ನೋಯುವ ಮಾತುಗಳನ್ನು ಕೇಳುವಿರಿ. ಈ ಸಂದರ್ಭಗಳಲ್ಲೆಲ್ಲ ನೀವು ಸಹನೆ ಮತ್ತು ಧರ್ಮನಿಷ್ಠೆಯ ಮಾರ್ಗದಲ್ಲಿ ಸ್ಥಿರವಾಗಿ ನಿಂತರೆ ಇದೊಂದು ಮಹಾ ಸಾಹಸಕಾರ್ಯವಾಗುವುದು. ಅಲ್ಲಾಹನು ಗ್ರಂಥದವರಿಂದ, "ನೀವು ಗ್ರಂಥದ ಬೋಧನೆಯನ್ನು ಜನರಿಗೆ ಪ್ರಸಾರಮಾಡಬೇಕಾದೀತು ಮತ್ತು ಅವುಗಳನ್ನು ಅಡಗಿಸಬಾರದು ಎಂಬ ಕರಾರನ್ನು ಪಡೆದ ಸಂದರ್ಭವನ್ನು ಅವರಿಗೆ ನೆನಪಿಸಿಕೊಡಿರಿ. ಆದರೆ ಅವರು ಗ್ರಂಥವನ್ನು ಕಡೆಗಣಿಸಿದರು ಮತ್ತು ಅದನ್ನು ಅಲ್ಪ ಬೆಲೆಗೆ ಮಾರಿದರು. ಇವರೆಂತಹ ಕೆಟ್ಟ ವ್ಯವಹಾರ ಮಾಡುತ್ತಿದ್ದಾರೆ! ತಮ್ಮ ಕೃತ್ಯಗಳಿಂದ ಸಂತುಷ್ಟರಾಗಿದ್ದು ನಿಜವಾಗಿ ತಾವು ಮಾಡದಿರುವ ಕಾರ್ಯಗಳ ಪ್ರಶಂಸೆ ತಮಗೆ ಸಲ್ಲಬೇಕೆಂದು ಬಯಸುವವರು ಯಾತನೆಯಿಂದ ಸುರಕ್ಷಿತರೆಂದು ನೀವೆಣಿಸ ಬೇಡಿರಿ. ವಾಸ್ತವದಲ್ಲಿ ಅವರಿಗೆ ವೇದನಾಯುಕ್ತ ಶಿಕ್ಷೆ ಸಿದ್ಧವಿದೆ.

(ಪವಿತ್ರ ಕುರ್‌ಆನ್: 3:186,-188)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಕ್ಷಮಿಸು ಮಗ

ಸಂ. 7ರಲ್ಲಿ ಪ್ರಕಟವಾದ ಏ.ಕೆ. ಕುಕ್ಕಿಲರವರ 'ಕ್ಷಮಿಸು ಮಗನೇ ನಾನೆಲ್ಲಾ ಹಾಳು ಮಾಡಿ ಬಿಟ್ಟೆ' ಎಂಬ ಲೇಖನವು ಅದ್ಭುತವಾಗಿ ಮೂಡಿ ಬಂದಿತ್ತು. ಈ ಲೇಖನವು ಈ ಕಾಲದಲ್ಲಿ ನಾವು ಕೈಗಾರಿಕೆ, ಉಷ್ಣ ವಿದ್ಯುತ್ ಸ್ಥಾವರ ಮುಂತಾದ ಹೆಸರುಗಳಲ್ಲಿ ನಮ್ಮ ಮಣ್ಣು, ನೀರು, ವಾಯುವನ್ನು ಹಾಳು ಮಾಡಿದರೆ ಭವಿಷ್ಯದ ನಮ್ಮ ಮಕ್ಕಳು ಪಡಬೇಕಾದಂತಹ ಪಾಡನ್ನು ಬಹಳ ಮನಮುಟ್ಟುವ ಹಾಗೆ ವಿವರಿಸಿದೆ. ಈ ಲೇಖನವು 'ವಿಶ್ವ ಭೂ ದಿನ'ದಂದು ಕಲಾಮ್‌ರವರು ಕಳುಹಿಸಿದ E-mailನ್ನು ಉಲ್ಲೇಖಿಸಿ ಬರೆದಂತಹದ್ದಾಗಿತ್ತು. ಇಂಥ ಕಾಳಜಿ ನಮ್ಮಂತಹ ಎಲ್ಲಾ ಜನ ಸಾಮಾನ್ಯರಿಗಿರುತ್ತಿದ್ದರೆ ಅಥವಾ ಈ ಲೇಖನವು ಉಂಟುಮಾಡಿದರೆ ಖಂಡಿತವಾಗಿಯೂ ಮುಂದಿನ ಪೀಳಿಗೆಗೆ ಅತ್ಯುತ್ತಮ ಭವಿಷ್ಯವನ್ನು ನೀಡಲು ನಾವು ಶಕ್ತರಾದೇವು.

ಸಂ. 8ರಲ್ಲಿ ಪ್ರಕಟವಾದ ಏ.ಕೆ. ಕುಕ್ಕಿಲರವರ 'ಮೊಬೈಲು, ಮಕ್ಕಳು, ವಾಹನಗಳಂತೆ ಇಬ್ಬರು ತಾಯಿ ಇರುತ್ತಾರಾ?' ಎಂಬ ಲೇಖನವು ಹೃದಯಸ್ಪರ್ಶಿಯಾಗಿತ್ತು. ಗಾಯಕ ಸಮಿ ಯೂಸುಫ್‌ರ ವೀಡಿಯೋ ತುಣುಕನ್ನು ಉಲ್ಲೇಖಿಸಿ ಬರೆದಂತಹ ಈ ಲೇಖನವು ಒಬ್ಬ ತಾಯಿಯು ಮಗನನ್ನು ಬೆಳೆಸಲು ಪಡುವಂತಹ ಕಷ್ಟ, ಸಹಿಸುವಂತಹ ತ್ಯಾಗ ಹಾಗೂ ಅದರ ಬಗ್ಗೆ ಅರಿವಿಲ್ಲದ ಮಗ ತನ್ನ ತಾಯಿಯನ್ನೇ ಬಿಟ್ಟು ಹೋಗುವಂತಹ ಚಿತ್ರಣವು ಈ ಆಧುನಿಕ ಕಾಲಕ್ಕೆ ಹಿಡಿದ ಕನ್ನಡಿಯಂತಿತ್ತು. ಇಂತಹ ಲೇಖನಗಳು ಇನ್ನು ಮುಂದೆಯೂ ಮೂಡಿ ಬರಲಿ.

ಮುಹಮ್ಮದ್ ಇಮ್ರಾನ್ ವಿ.ಕೆ., ವಿಟ್ಲ

### ಹಾರೈಕೆ

ಸಂ. 6ರ ಪ್ರಧಾನ ಲೇಖನ 'ವರದಕ್ಷಿಣೆ ವಿರುದ್ಧ ಫತ್ವಾ' ಒಂದು ಉತ್ತಮ ಪ್ರಯತ್ನದ ಬೆನ್ನು ತಟ್ಟುವಂತಿತ್ತು. ಕಚೇರಿಯಲ್ಲಿ ಕುಳಿತು ಸಂಜೆ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಭಟ್ಟಿ ಇಳಿಸಿ ಓದುಗರಿಗೆ ಹಂಚದೇ ಫತ್ವಾದ ಮೂಲವನ್ನು ಕೆದಕಿ ಅದಕ್ಕೆ ಸಂಬಂಧಿಸಿದವರನ್ನು ಸಂಪರ್ಕಿಸಿ, ಪರರನ್ನೂ ವಿರೋಧಿಗಳನ್ನು ಭೇಟಿಯಾಗಿ, ವರದಿಗೆ ಅಧಿಕೃತ ಮುದ್ರೆಯೆಂಬಂತೆ ಮಂಗಳೂರಿನ ಕಾಝಿ ಅವರನ್ನು ಭೇಟಿಯಾಗಿರುವುದು... ವರದಿ ಎಲ್ಲಿಂದ ಬೇಕಾದರೂ ಉಗಮವಾಗಲಿ ಅದಕ್ಕೆ ಸನ್ಮಾರ್ಗದ ಪ್ರೋತ್ಸಾಹ ಸದಾ ಇರಲಿ ಎಂದು ಬಯಸುತ್ತೇನೆ.

**ಇಬ್ನು ಆಯಿಶಾ, ಉಪ್ಪಿನಂಗಡಿ**

### ಅಮ್ಮಾ ಅಮ್ಮಾ ಹೇಳೊಂದು ಕಥೆಯ

ಸಂ. 8ರಲ್ಲಿ ಪ್ರಕಟವಾದ 'ಮೊಬೈಲು, ಮಕ್ಕಳು, ವಾಹನಗಳಂತೆ ಇಬ್ಬರು ತಾಯಿ ಇರುತ್ತಾರಾ?' ಎಂಬ ಲೇಖನ ಓದಿ ಹೃದಯ ಗದ್ಗದಿತವಾಯಿತು. ಮಾತಾಪಿತರ ತ್ಯಾಗಕ್ಕೆ ಆದಿ ಅಂತ್ಯ ಎಂಬುದುಂಟೇ? ಮಾತನಾಡಲು ಕಲಿಸಿದ, ನಡೆದಾಡಲು ಮಾರ್ಗ ತೋರಿಸಿದ, ಹಸಿವಾದಾಗ ಉಣಿಸಿದ, ರೋಗಿಯಾದಾಗ ನಿದ್ದೆ ಬಿಟ್ಟು ಆರೈಕೆ ಮಾಡಿದ... ಯಾ ಅಲ್ಲಾಹ್. ಏನೂ ಆಗಿಲ್ಲದ ಕಾಲದಲ್ಲಿ, ಮನಸ್ಸು, ದೇಹದ ಸ್ಥಿಮಿತವಿಲ್ಲದ ಬಾಲ್ಯದ ಹೊತ್ತಿನಲ್ಲಿ ವಿಸರ್ಜಿಸಿದ ಮಲಮೂತ್ರಗಳನ್ನೂ ಆನಂದದಿಂದ ಶುಚಿಗೊಳಿಸಿದ ಮಾತೆಯ ಸ್ಥಾನ ತುಂಬಲು ಯಾರಿಗಾದರೂ ಸಾಧ್ಯವುಂಟೇ? ಆದರೆ ಇಂದು ಅಂತಹ ಮಹಾತ್ಯಾಗಿಗಳಾದ ಎಷ್ಟೋ ಮಾತೆಯರು ಬೀದಿಗಳಲ್ಲಿ ಭಿಕ್ಷೆ ಬೇಡುತ್ತಾ ಅಲೆದಾಡುತ್ತಿರುವುದು ಕಾಣುವಾಗ ಅದರ ಹಿಂದೆ ಸಂತಾನದ ದ್ರೋಹಗಳು ಇರಲಾರದೇ? ಸ್ವಾರ್ಥದ ಹಿಂದೆ ಬಿದ್ದು ತನ್ನ ಗೌರವ, ಅಂತಸ್ತುಗಳಿಗೆ ಮಾತಾಪಿತರು ಕುಂದು ಎಂದು ನೆನೆದು ಅದೇ ಮಕ್ಕಳು ಮಾತಾಪಿತರನ್ನು ಅನಾಥ ಸ್ಥಿತಿಗೆ ತಳ್ಳಿದ ನೂರಾರು ಕಥೆಗಳು ನಮ್ಮ ಮಧ್ಯೆ ಇವೆ. ಏ.ಕೆ. ಕುಕ್ಕಿಲರವರ ಲೇಖನ ಈ ಕಾಲದ ಇಂತಹ ಕೃತಘ್ನ ಮಕ್ಕಳ ಕಣ್ಣು ತೆರೆಸುವಂತಿದೆ. ಲೇಖನ ಓದುತ್ತಾ, ಅರಿವಿಲ್ಲದೆ ಹರಿದ ಅಶ್ರುಧಾರೆಯು ಕವನವೊಂದರ ತುಣುಕನ್ನು ನೆನಪಿಸಿತು. ಅಮ್ಮ ಅಮ್ಮ ಹೇಳೊಂದು ಕಥೆಯ, ಬದುಕಿನಾಟ ಪಾಠದ ಕಥೆಯ...

ಅಹ್ಮದ್ ಅನ್ವರ್ ಮಂಗಳೂರು

### ಅಮ್ಮ

ಸಂ. 8ರಲ್ಲಿ ಪ್ರಕಟವಾದ ಮೊಬೈಲು, ಮಕ್ಕಳು... ಇಬ್ಬರು ತಾಯಿ ಇರುತ್ತಾರಾ? ಎಂಬ ಏ.ಕೆ. ಕುಕ್ಕಿಲರವರ ಲೇಖನ ಅತ್ಯುತ್ತಮವಾಗಿತ್ತು. ಓದುತ್ತಾ ಹೃದಯ ಭಾರವಾಯಿತು.

ರಿಯಾಝ್ ಅಹ್ಮದ್, ರೋಣ

**ಇಸ್ಲಾಮ್: ಸಂಶಯ ನಿವಾರಣೆ ಬಯಸುವಿರಾ?**

ಇಸ್ಲಾಮ್, ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ), ಜಿಹಾದ್, ಇತ್ಯಾದಿ ವಿಷಯಗಳ ಕುರಿತು ನಿಮ್ಮ ಸಂಶಯಗಳು ಮತ್ತು ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಬಯಸುವಿರಾ?

ಹಿಂದೂ, ಕ್ರೈಸ್ತ ಮತ್ತಿತರ ದೇಶ ಬಾಂಧವರಿಗೆ ಓದಲು ಉಚಿತವಾಗಿ ಪುಸ್ತಕಗಳನ್ನು ರವಾನಿಸಲಾಗುವುದು.

ಸಂಪರ್ಕಿಸಿರಿ : ISMIKA, P.B. No. 229, Mangalore

# ಅಕ್ರಮಿ, ಅತ್ಯಾಚಾರಿಗೆ ಜೈ, ಗೋವಿಗೆ ಗುಡ್‌ಬೈ

(ಮುಖಪುಟದಿಂದ)

ಉಪನೋಂದಣಾಧಿಕಾರಿಗಳು ಸ್ಥಳಕ್ಕೆ ಆಗಮಿಸುತ್ತಾರೆ. ತಕ್ಷಣ ಪ್ರತ್ಯಕ್ಷರಾದ ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ ಮತ್ತು ಮಠಾಧೀಶರು, 'ಇದು ನಾಗದೇವರ ಕಾರಣಿಕದ ದೇವಸ್ಥಾನ. ಪತ್ರಿಕಾಗೋಷ್ಠಿಯಲ್ಲಿ ವಿವರಿಸುವ ಯಡಿಯೂರಪ್ಪರಿಗೆ ರೈತರ ಬಗ್ಗೆ ಅಷ್ಟೊಂದು ಕಾಳಜಿ ಇದ್ದಿದ್ದೇ ಆಗಿದ್ದರೆ, ಪತ್ರಾವೊ ಪರ ಸುಪ್ರೀಮ್ ಕೋರ್ಟ್‌ಗೆ ಮನವಿ ಸಲ್ಲಿಸಬಹುದಿತ್ತಲ್ಲವೇ? ಕನಿಷ್ಠ ಬೆಳೆ ಕಟಾವು ಆಗುವವರೆಗಾದರೂ ಬುಲ್ಡೋಜರನ್ನು ಹರಿಸದಂತೆ ಆದೇಶಿಸುವುದಕ್ಕೆ ಅವರಿಗೆ ಯಾವ ಅಡ್ಡಿಯಿತ್ತು? ಇಷ್ಟಕ್ಕೂ ಗ್ರೆಗರಿಯೇನೂ ಅಭಿವೃದ್ಧಿ ವಿರೋಧಿಯಲ್ಲ. ಅವರು ಈ ಹಿಂದೆ ಕೊಂಕಣ ರೈಲ್ವೆಗಾಗಿ ಭೂಮಿ ಬಿಟ್ಟು ಪರ ಇರುವ ಸೆಝ್ ಕಾನೂನುಗಳನ್ನು ತಿದ್ದದೇ ಯಾವ ಸೆಝ್‌ಗೂ ಅನುಮತಿ ನೀಡಬಾರದೆಂದು ಸರಕಾರವನ್ನು ಆಗ್ರಹಿಸಿತ್ತು. ಈ ದೇಶವು ಹೂಡಿಕೆದಾರರಲ್ಲಿ ಆಕರ್ಷಿಸುವುದಕ್ಕಾಗಿ ಸೆಝ್ ಕಾನೂನುಗಳಲ್ಲಿ ಎಷ್ಟು ಉದಾರತೆ ತೋರಿತೆಂದರೆ, 10 ವರ್ಷಗಳ ವರೆಗೆ ತೆರಿಗೆ ವಿನಾಯಿತಿ ಘೋಷಿಸಿತು. ನೀರು ಮತ್ತು ವಿದ್ಯುತ್ತಿಗೆ ಸಬ್ಸಿಡಿ ನಿಗದಿಪಡಿಸಿತು. ಸೆಝ್ ಕಾನೂನಿನ ಪ್ರಕಾರ 100 ಎಕರೆ ಭೂಮಿಯಲ್ಲಿ ಯೋಜನೆಗೆ ಬಳಸುವುದು 30-35 ಎಕರೆ 1800 ಎಕರೆ ಭೂಮಿಯನ್ನು ಸ್ವಾಧೀನ ಪಡಿಸುವ ನಕ್ಷೆಯೊಂದಿಗೆ ಹೊರಟ ಸೆಝ್ ಅಧಿಕಾರಿಗಳು ಅಸಾಂವಿಧಾನಿಕ ರೂಪದಲ್ಲಿ ರೌಡಿಗಳನ್ನು, ಬಾಡಿಗೆ ಗೂಂಡಾಗಳನ್ನು ಬಳಸಿ, ಒಬ್ಬೊಬ್ಬರೇ ರೈತರನ್ನು ಬೆದರಿಸಿ ಒಕ್ಕಲೆಬ್ಬಿಸಿದರು. ಆಮಿಷ ಒಡ್ಡಿದರು. ಮಣಿಯದ ಗ್ರೆಗರಿ ಮತ್ತು ಒಂದಿಷ್ಟು ರೈತರನ್ನು ಅಭಿವೃದ್ಧಿ ವಿರೋಧಿಗಳು ಎಂದು ಬಿಂಬಿಸಿದರು. 'ಎಲ್ಲರೂ ಭೂಮಿ ಕೊಟ್ಟಿದ್ದಾರೆ, ಗ್ರೆಗರಿ ಮಾತ್ರ ಅಡ್ಡಗಾಲಾಗಿದ್ದಾನೆ' ಎಂದು ಕರೆದಾರು?

**ಅಂದಹಾಗೆ**

ಈ ದೇಶದಲ್ಲಿ ಅಧಿಕೃತವಾಗಿ ಅನುಮತಿ ಸಿಕ್ಕಿದ ಎರಡೇ ವರ್ಷದೊಳಗೆ 500ರಷ್ಟು ಸೆಝ್‌ಗಳು ಪ್ರಸ್ತಾಪಗೊಂಡವು. 220ರಷ್ಟು ಯೋಜನೆಗಳು ವಿವಿಧ ಹೆಸರುಗಳಲ್ಲಿ ಕೆಲಸ ಪ್ರಾರಂಭಿಸಿದುವು. ಈ ಪರಿಯ ವೇಗವನ್ನು ಕಂಡು ವಿಶ್ವ ಬ್ಯಾಂಕೇ ಅಚ್ಚರಿ, ದಿಗಿಲು ವ್ಯಕ್ತಪಡಿಸಿತ್ತು. ಒಂದು ವೇಳೆ, ಸೆಝ್‌ನ ಕುರಿತಂತೆ ಈ ದೇಶದಲ್ಲಿ ರೂಪಿಸಲಾದ

ಕೆಡವಿದರೆ ಅಪಾಯ ಕಟ್ಟಿಟ್ಟ ಬುತ್ತಿ' ಎಂದು ಜೆಸಿಬಿ ಚಾಲಕನನ್ನು ಬೆದರಿಸುತ್ತಾರೆ. ಆತ ಇಳಿದು ಹೋಗುತ್ತಾನೆ. ಈ ವಿಷಯವನ್ನು ಹೈಕೋರ್ಟು ಗಮನಕ್ಕೆ ತರುತ್ತೇನೆಂದು ಹೇಳಿ ಅಧಿಕಾರಿ ಹೊರಟು ಹೋಗುತ್ತಾರೆ.

**ಘಟನೆ ಎರಡು**

ದಕ್ಷಿಣ ಕನ್ನಡ ಜಿಲ್ಲೆಯ ಕಳವಾರು ಗ್ರಾಮದ ಸರ್ವೆ ನಂಬ್ರ 23, 58, 65, 92ರಲ್ಲಿ ಗ್ರೆಗರಿ ಪತ್ರಾವೊ ಎಂಬ ಶ್ರಮಜೀವಿಗೆ 14.28 ಎಕರೆ ಭೂಮಿಯಿದೆ. ನಾಲ್ಕು ಎಕರೆ ಗದ್ದೆ ಮತ್ತು 4 ಎಕರೆ ಅಡಿಕೆ ತೋಟ. ಎರಡಂತಸ್ತಿನ ಹೆಂಚಿನ ಮನೆ. ಕಳೆದ 94 ವರ್ಷಗಳಿಂದ ಪರಂಪರಾಗತವಾಗಿ ಬದುಕುತ್ತಾ ಬಂದ ಪತ್ರಾವೊರ ಮನೆ ಮತ್ತು ಕೃಷಿ ಭೂಮಿಯನ್ನು ಸೆಝ್‌ಗಾಗಿ ವಶಪಡಿಸಿಕೊಳ್ಳಬಹುದೆಂದು ಹೈಕೋರ್ಟು ಆದೇಶಿಸುತ್ತದೆ. ಅದರಂತೆ ಎಪ್ರಿಲ್ 28, 2010ರಂದು ಬೆಳ್ಳಂಬೆಳಗ್ಗೆ ಅಧಿಕಾರಿಗಳು ಜೆಸಿಬಿಯೊಂದಿಗೆ ಆಗಮಿಸುತ್ತಾರೆ. ಸ್ಥಳೀಯ ಉಸ್ತುವಾರಿ ಸಚಿವ ಪಾಲೇಮಾರ್‌ರ ಮೊಬೈಲ್ ಸ್ವಿಚ್ಡ್ ಆಫ್ ಆಗಿರುತ್ತದೆ. 'ಕಟಾವಿಗೆ ಬಂದ ಬೆಳೆ ಮತ್ತು ಮನೆಯನ್ನು ನಾಶ ಮಾಡಬೇಡಿ' ಎಂದು ಗೋಗರೆದರೂ ಅಧಿಕಾರಿಗಳು ಜಗ್ಗುವುದಿಲ್ಲ. ಕಾರಣಿಕದ ಬಗ್ಗೆ ಭಯ ಹುಟ್ಟಿಸಿ ಚಾಲಕನನ್ನು ಓಡಿಸುವುದಕ್ಕೆ ಅಲ್ಲಿ ಯಾವ ಧರ್ಮಗುರುಗಳೂ ಇರಲಿಲ್ಲ. ಇದೀಗ ಗ್ರೆಗರಿಯವರು, 6 ದನ, ಒಂದು ಜೋಡಿ ಎತ್ತು, 4 ನಾಯಿ, 60 ಕೋಳಿಗಳು ಮತ್ತು 6 ಮಂದಿ ಕುಟುಂಬ ಸದಸ್ಯರೊಂದಿಗೆ ಬೀದಿಗೆ ಬಿದ್ದಿದ್ದಾರೆ.

ವ್ಯವಸ್ಥೆಯ ಕ್ರೌರ್ಯವನ್ನು ಮತ್ತು ಜನಪ್ರತಿನಿಧಿಗಳ ದ್ವಂದ್ವವನ್ನು ಯಾವ ಪದ ಬಳಸಿ ಖಂಡಿಸಬೇಕೋ ಗೊತ್ತಾಗುತ್ತಿಲ್ಲ. ನಮ್ಮ ಮನ್‌ಮೋಹನ್ ಸಿಂಗ್, ಸೆಝ್ ಕಾನೂನು, ಯಡಿಯೂರಪ್ಪ, ಅಧಿಕಾರಿಗಳು ಮತ್ತು ಜೆಸಿಬಿ ಹುಟ್ಟುವುದಕ್ಕಿಂತ ಮೊದಲೇ ಬಾಳಗ್ರಾಮದಲ್ಲಿ ಪತ್ರಾವೊ ಕುಟುಂಬ ವಾಸಿಸುತ್ತಿದೆ. ಎರಡು ಎಕರೆ ಗದ್ದೆಯಲ್ಲಿ ಎರಡು ಬೆಳೆ, ಇನ್ನೆರಡು ಎಕರೆಯಲ್ಲಿ ಮೂರು ಬೆಳೆ ಬೆಳೆಯುತ್ತಿದ್ದ ಮತ್ತು ವರ್ಷಕ್ಕೆ 20 ಕ್ವಿಂಟಾಲ್‌ನಷ್ಟು ಅಕ್ಕಿ ಮತ್ತು 20 ಕ್ವಿಂಟಾಲ್‌ನಷ್ಟು ಅಡಿಕೆ ಬೆಳೆಯುತ್ತಿದ್ದ ಅಪ್ಪಟ ನೇಗಿಲ ಯೋಗಿಯನ್ನು ಹಾಳೂಮೂಳೂ ಅಭಿವೃದ್ಧಿಯ ನೆಪದಲ್ಲಿ ಬೀದಿಪಾಲಾಗಿಸುವುದು ಎಷ್ಟು ಸರಿ? ಚೀನಾಕ್ಕೋ ಮಲೇಶ್ಯಾಕ್ಕೋ ಭೇಟಿ ಕೊಟ್ಟು, ಅಲ್ಲಿಯ ರೈತರ ದುಡಿಮೆಯನ್ನೂ ಕೃಷಿಯಲ್ಲಿ ಅವರಿಗಿರುವ ಉತ್ಸಾಹವನ್ನೂ



ಕೊಟ್ಟಿದ್ದರು. MRPL ಕಂಪೆನಿಗಾಗಿಯೂ ಜಾಗ ಕೊಟ್ಟಿದ್ದರು. ಇದೀಗ ಅಳಿದುಳಿದ ಕೃಷಿ ಜಮೀನನ್ನೂ ಕಿತ್ತುಕೊಂಡು, ದೇಶದ್ರೋಹಿಯಂತೆ ನಡೆಸಿಕೊಳ್ಳುವುದು ಸರಿಯೇ? ಬಾಳ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ಗ್ರೆಗರಿಗೇ ಇಂಥ ಸ್ಥಿತಿ ಬಂದಿರುವಾಗ ಇನ್ನು ಸಾಮಾನ್ಯ ರೈತನೊಬ್ಬ ಈ ವ್ಯವಸ್ಥೆಯಲ್ಲಿ ಯಾವ ಭರವಸೆ ಇರಿಸಬೇಕು? ಒಂದು ಕಡೆ ರೈತ ಪ್ರೇಮಿ ಬಜೆಟ್‌ನ ಬಗ್ಗೆ ಘೋಷಿಸುತ್ತಾ ಇನ್ನೊಂದು ಕಡೆ ರೈತರನ್ನು ಹಂತಹಂತವಾಗಿ ಬೀದಿಪಾಲು ಮಾಡುವುದು, ಅಭಿವೃದ್ಧಿ ವಿರೋಧಿಗಳೆಂದು ಬಿಂಬಿಸುವುದು ಏನನ್ನು ಸೂಚಿಸುತ್ತದೆ?

**ಸೆಝ್**

ಚೀನಾದ ಅಧ್ಯಕ್ಷ ಡೆಂಗ್ ಕ್ಸಿಯಾಪಿಂಗ್ 1980ರಲ್ಲಿ ಪರಿಚಯಿಸಿದ ಈ ಅಭಿವೃದ್ಧಿ ಕಲ್ಪನೆಯನ್ನು ಜಗತ್ತಿನ ಹತ್ತಾರು ರಾಷ್ಟ್ರಗಳು ಪ್ರಯೋಗಿಸಿ ನೋಡಿದ್ದರೂ ಅಮೇರಿಕ ಇನ್ನೂ ಅದಕ್ಕೆ ತೆರೆದುಕೊಂಡಿಲ್ಲ. ಇರಾನ್‌ನ ಮಹ್‌ಶರ್, ಸರಾಖ್, ಅಮಿರಾಬಾದ್, ಬುಶೇರ್‌ಗಳಲ್ಲಿ ಸೆಝ್‌ಗಳಿವೆ. ಪಾಕಿಸ್ತಾನದ ಲಾಹೋರ್, ಕರಾಚಿ, ಗುಜ್ರನ್‌ವಾಲಾ, ಫೈಸಲಾಬಾದ್ ಸಹಿತ 10ಕ್ಕಿಂತಲೂ ಅಧಿಕ ಪ್ರದೇಶಗಳು ಸೆಝ್‌ಗೆ ಒಳಪಟ್ಟಿವೆ. ಬ್ರೆಝಿಲ್, ಜೋರ್ಡಾನ್, ಫಿಲಿಪ್ಪೀನ್ಸ್, ಪೋಲಾಂಡ್, ಯು.ಎ.ಇ., ಉಕ್ರೈನ್, ಕಾಂಬೋಡಿಯಾ, ಉ. ಕೊರಿಯಾ, ಕಝಕಿಸ್ತಾನ್‌ನಂಥ ಹತ್ತಾರು ರಾಷ್ಟ್ರಗಳಲ್ಲಿ ವಿಶೇಷ ವಿತ್ತ ವಲಯಗಳಿವೆ. ಅಂದಹಾಗೆ, ವಿದೇಶಿ ನೆಲದಲ್ಲಿರುವ ಸೆಝ್ ಕಾನೂನು ಮತ್ತು ಭಾರತದ ಸೆಝ್ ಕಾನೂನೂ ಒಂದೇ ರೀತಿಯಾಗಿವೆ ಎಂದು ಖಂಡಿತ ಹೇಳುವಂತಿಲ್ಲ. ಪಶ್ಚಿಮ ಬಂಗಾಲದ ನಂದಿಗ್ರಾಮದಲ್ಲಿ ಸೆಝ್ ವಿರುದ್ಧ ಸ್ಫೋಟಿಸಿದ ನಾಗರಿಕ ದಂಗೆಯ ಹಿನ್ನೆಲೆಯಲ್ಲಿ ರಚನೆಗೊಂಡ ಪಾರ್ಲಿಮೆಂಟರಿ ಅಧ್ಯಯನ ಸಮಿತಿಯು, ಕಾರ್ಪೊರೇಟ್

ಯನ್ನು ಮಾತ್ರ. ಉಳಿದದ್ದನ್ನು ಮನೆ ನಿರ್ಮಾಣಕ್ಕೆ, ಮಾಲ್‌ಗಳಿಗೆ, ಮಲ್ಟಿಪ್ಲೆಕ್ಸ್‌ಗಳಿಗಾಗಿ ಬಳಸಬಹುದು. ಕೇಂದ್ರ ಸರಕಾರ ಬಿಡುಗಡೆ ಮಾಡಿರುವ 54 ಪುಟಗಳ ಸೆಝ್ ಕಾನೂನನ್ನು ಓದುವಾಗ, ತಲೆ ಚಿಟ್ಟು ಹಿಡಿಯುತ್ತದೆ. ದೇಶದ ಸಂವಿಧಾನವನ್ನು ಇಡಿಯಾಗಿ ಅವಮಾನಿಸುವ, 2005 ಜೂನ್ 23ಕ್ಕೆ ರಾಷ್ಟ್ರಪತಿಯವರ ಅನುಮೋದನೆ ಸಿಕ್ಕಿ, 2006 ಫೆ. 10ರಂದು ಜಾರಿಗೆ ಬಂದ ಈ ಕಲ್ಪನೆ ಇವತ್ತು ಗ್ರೆಗರಿಯಂಥ ಸಾವಿರಾರು ರೈತರ ಕಣ್ಣೀರಿಗೆ, ಬೀದಿಪಾಲಿಗೆ ಕಾರಣವಾಗಿದೆ. ಇಷ್ಟಕ್ಕೂ ಬದುಕಿರುವವರನ್ನೇ ಸತ್ತವರ ಪಟ್ಟಿಗೆ ಸೇರಿಸಿ ಸರ್ಟಿಫಿಕೇಟು ಕೊಡುವಷ್ಟು ಚತುರ ಅಧಿಕಾರಿಗಳಿರುವ ಈ ದೇಶದಲ್ಲಿ ಕೃಷಿ ಭೂಮಿಯು ಬಂಜರು ಭೂಮಿಯಾಗಿ, ಜನವಸತಿ ಪ್ರದೇಶಗಳು ವನ್ಯಜೀವಿ ತಾಣಗಳಾಗಿ ಗುರುತಿಸಿಕೊಳ್ಳುವುದಕ್ಕೇನು ಕಷ್ಟವೇ?

**ಇದು ಯಡಿಯೂರಪ್ಪರಿಗೂ ಗೊತ್ತು**

ರೈತನೊಬ್ಬ ಇನ್ನೊಬ್ಬರ ಮನೆಯಲ್ಲಿ ಚಾಕರಿ ಮಾಡುವುದನ್ನು ಎಂದೂ ಇಷ್ಟಪಡುವುದಿಲ್ಲ. ರೈತರ ಮಟ್ಟಿಗೆ ಅವರ ಭೂಮಿ ಸ್ವಾಭಿಮಾನದ ಸಂಕೇತ. ಇಷ್ಟಕ್ಕೂ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಗಣಿದೊರೆಗಳು ಮತ್ತು ಮಾನಭಂಗ ಮಾಡಿದ ಹಾಲಪ್ಪರ ಪರ ನಿಲ್ಲುವುದಕ್ಕೆ ಮುಖ್ಯಮಂತ್ರಿಗಳಿಗೆ ಸಾಧ್ಯವೆಂದಾದರೆ, ಗ್ರೆಗರಿಯ ಪರ ನಿಲ್ಲುವುದಕ್ಕೇನು ತೊಂದರೆ? ತಾನೇ ಉತ್ತು, ಬಿತ್ತು, ಕೊಯ್ಲು ಮಾಡುವ; ಸಾವಯವ ಗೊಬ್ಬರವನ್ನು ಮಾತ್ರ ಬಳಸುವ ಅಪ್ಪಟ ದೇಶೀ ಕೃಷಿಕ ಗ್ರೆಗರಿಗಿಂತ ಯಡಿಯೂರಪ್ಪರಿಗೆ ಅತ್ಯಾಚಾರಿಗಳು, ಲೂಟಿಕೋರರೇ ಮುಖ್ಯರಾದರೇ? ತನ್ನ ಕೃಷಿ ಭೂಮಿಯನ್ನು ಸ್ವಾಧೀನಪಡಿಸುವ ನೋಟೀಸನ್ನು ವಿರೋಧಿಸಿ, ಸಂವಿಧಾನದ ಪ್ರಕಾರ 6 ವರ್ಷಗಳ ಹಿಂದೆ ಗ್ರೆಗರಿ ಕೋರ್ಟಿಗೆ ಹೋದರು. ಆದರೆ ಕೋರ್ಟಿನ ಮುಂದೆ ಸುಳ್ಳು ಹೇಳಿದರು. ಹೊರನೋಟದ ಈ ಸತ್ಯವನ್ನೇ ಅಂತಿಮ ಎಂದು ಕೋರ್ಟೂ ನಂಬಿ ಬಿಟ್ಟಿತು. ಹಾಗಾದರೆ ಗ್ರೆಗರಿ ತನ್ನ ಪ್ರತಿಭಟನೆಗೆ ಪ್ರಜಾತಾಂತ್ರಿಕ ಮಾರ್ಗವನ್ನು ಆಯ್ದುಕೊಂಡದ್ದೇ ತಪ್ಪಾಯಿತೇ? ಆತ ಕೂಡ ಸುಪಾರಿ ಕೊಟ್ಟೋ, ಬಾಡಿಗೆ ಗೂಂಡಾಗಳನ್ನು ಬಳಸಿಯೋ ಅಧಿಕಾರಿಗಳ ಮತ್ತು ಸ್ಥಾವರಗಳ ಮೇಲೆ ದಾಳಿ ಮಾಡಿಸಬೇಕಿತ್ತೇ? ಜಿಲ್ಲಾಧಿಕಾರಿ ಕಚೇರಿ ಮುಂದೆ ತನ್ನ ದನ, ಎತ್ತು, ಕೋಳಿ, ನಾಯಿಗಳನ್ನು ಮತ್ತು ಮುದಿ ತಾಯಿಯನ್ನು ಕೂರಿಸಿ ಪ್ರತಿಭಟಿಸುವುದಕ್ಕಿಂತ ನಂದಿಗ್ರಾಮದಲ್ಲಾದಂತೆ ಆಯುಧಗಳನ್ನು ಬಳಸಿ ವ್ಯವಸ್ಥೆಯ ಮೇಲೆ ಮುಗಿಬೀಳಬೇಕಿತ್ತೇ? ಒಂದು ಕಡೆ ವ್ಯವಸ್ಥೆ ನಕ್ಸಲೀಯರನ್ನು ದೇಶದ್ರೋಹಿಗಳು, ಅಭಿವೃದ್ಧಿ ವಿರೋಧಿಗಳು ಎಂದು ಕರೆಯುತ್ತದೆ. ಇನ್ನೊಂದೆಡೆ ಯಾರು ಅನ್ಯಾಯವನ್ನು ಪ್ರಜಾತಾಂತ್ರಿಕ ವಿಧಾನದಲ್ಲಿ ಪ್ರತಿಭಟಿಸುತ್ತಾರೋ ಅವರನ್ನು ಕೈಲಾಗದವರಂತೆ ನಡೆಸಿಕೊಳ್ಳುತ್ತದೆ. ಗೂಂಡಾಗಳನ್ನು ಬಳಸಿ ಸದೆಬಡಿಯುತ್ತದೆ. ಇದು ಯಾವ ರೀತಿಯ ಪ್ರಜಾತಂತ್ರ? ತಲೆತಲಾಂತರದಿಂದ ಬಾಳಿ ಬದುಕಿದ, ಕನಸು ಕಂಡ, ನಿದ್ರಿಸಿದ, ಓಡಾಡಿದ ತನ್ನ ಮನೆ ಬುಲ್ಡೋಜರ್‌ಗೆ ಸಿಕ್ಕಿ ಕುಸಿಯುತ್ತಿರುವುದನ್ನು ನೋಡಲಾಗದೇ ಬಿಕ್ಕಿಬಿಕ್ಕಿ ಅತ್ತ ಪತ್ರಾವೊರ ತಾಯಿ, ಈ ವ್ಯವಸ್ಥೆಯನ್ನು 'ನಕ್ಸಲೀಯ' ಎಂದಲ್ಲದೇ ಇನ್ನೇನೆಂದು ಕಾನೂನು ತೀರಾ ಸಡಿಲ ಮತ್ತು ನೆಲ-ಜಲ ವಿರೋಧಿ ಅಲ್ಲದೇ ಇರುತ್ತಿದ್ದರೆ, ಇಷ್ಟು ಭಾರೀ ಪ್ರಮಾಣದಲ್ಲಿ ವಿದೇಶಿ ಹೂಡಿಕೆಗಳು ಹರಿದು ಬರುತ್ತಿತ್ತೇ? ಅದು ಬಿಡಿ, ಗ್ರೆಗರಿಯಂಥ' ರೈತರನ್ನು ಬೀದಿಪಾಲಾಗಿಸುವುದಕ್ಕಿಂತ ಸೆಝ್ ಕಾನೂನಿಗೇ ತಿದ್ದುಪಡಿ ತರಬಹುದಲ್ಲವೇ? ಈ

**ಏ.ಕೆ. ಕುಕ್ಕಿಲ**

ದೇಶದಲ್ಲಿ ಅಭಿವೃದ್ಧಿಯಾಗದ, ಕೈಗಾರಿಕೆಗಳಿಲ್ಲದ ಧಾರಾಳ ಕೃಷಿಯೇತರ ಒಣ ಭೂಮಿಯಿದೆ. ಈ ಪಿಡುಗನ್ನು ಅಲ್ಲಿಗೆ ಸಾಗಿಸುವುದಕ್ಕೇನು ಅಡ್ಡಿ? ಕೃಷಿಯನ್ನು ಕೊಂದೇ ಕೈಗಾರಿಕೆ ಸ್ಥಾಪಿಸುತ್ತೇವೆಂಬ ಹಠವಾದರೂ ಯಾಕೆ? ಇಷ್ಟಕ್ಕೂ, ಗೋವುಗಳ ರಕ್ಷಣೆಗಾಗಿ ಗೋಹತ್ಯಾ ನಿಷೇಧ ಮಸೂದೆಯನ್ನು ಮಂಡಿಸಿರುವ ಸರಕಾರ, ಬೀದಿಗೆ ಬಿದ್ದ ಗ್ರೆಗರಿಯ ಗೋವುಗಳ ಬಗ್ಗೆ ಏನು ಹೇಳುತ್ತದೆ? ಗೋವುಗಳಿಂದಾಗುವ ಲಾಭ ಮತ್ತು ರಕ್ಷಣೆಯ ಬಗ್ಗೆ ಗಂಟಲು ಒಣಗುವಷ್ಟು ಮಾತಾಡುವ ಯಡಿಯೂರಪ್ಪ ಮತ್ತು ಅವರ ಸೆಝ್ ಪ್ರೇಮಿ ಪ್ರತಿನಿಧಿಗಳು ಬೀದಿ ಪಾಲಾದ ಗ್ರೆಗರಿಯ ಹಾಲು ಕೊಡುವ ಮೂರು ಗೋವುಗಳ ಬಳಿ ಹೋಗಿ ನಿಲ್ಲಲಿ.

ತುಳಿಯದಿದ್ದರೆ ಹೇಳಿ.

akkukkila@gmail.com

ಕಳೆದ ಕೆಲವು ವರ್ಷಗಳಿಂದ ಹಜ್ಜ್ ಮತ್ತು ಉಮ್ರಾ ಪ್ರವಾಸಗಳನ್ನು ಸಂಘಟಿಸುತ್ತಿದ್ದ "ಸಹಾರಾ ಇಂಟರ್‌ನ್ಯಾಶನಲ್ ಟೂರ್ಸ್ ಮತ್ತು ಟ್ರಾವೆಲ್ಸ್" ಎಂಬ ಸಂಸ್ಥೆಯ ಹೆಸರನ್ನು "ಅಲ್ ಮುನವ್ವರ್ ಇಂಟರ್‌ನ್ಯಾಶನಲ್ ಟೂರ್ಸ್ ಮತ್ತು ಟ್ರಾವೆಲ್ಸ್" ಎಂದು ಬದಲಾಯಿಸಿದ್ದೇವೆ. ಗ್ರಾಹಕರು ಎಂದಿನಂತೆಯೇ ಸಹಕರಿಸಬೇಕಾಗಿ ವಿನಂತಿ.

**ಹಜ್ಜ್ ಮತ್ತು ಉಮ್ರಾ ಪ್ರವಾಸಗಳು**

ಹಜ್ಜ್ ಪ್ರವಾಸ: ರೂ. 1,95,000/-
ಉಮ್ರಾ ಪ್ರವಾಸ: 6ನೇ ಬ್ಯಾಚ್
ಮೇ 25, ರೂ. 44,000/-



**ಮಂಗಳೂರಿನಿಂದ ಮಂಗಳೂರಿಗೆ**

ಬುಕ್ಕಿಂಗ್‌ಗಾಗಿ ಕೂಡಲೇ ಸಂಪರ್ಕಿಸಿರಿ

ಹಾಜಿ ಝಾಕಿರ್ ಹುಸೈನ್ - 9886132465

Head Office:
AL- MUNAWWAR INTERNATIONAL TOURS & TRAVELS
Shop No. 2, IInd Floor, Singala Chambers
Maidan 4th Cross, Mangalore - 575001 Ph: 4272465

**ವಿದೇಶರಂಗ**

# ಮೈ ನೇಮ್ ಈಸ್ ಶಹಝಾದ್

**ಎ.ಆರ್. ಫಾರೂಕ್**

ಇತ್ತೀಚೆಗೆ ನಡೆದ ನ್ಯೂಯಾರ್ಕ್ ಟೈಮ್‌ಸ್ಕ್ವೇರ್ ಕಾರು ಬಾಂಬ್ ಪ್ರಕರಣದಲ್ಲಿ ಬಂಧಿಸಲ್ಪಟ್ಟಿರುವ ಪಾಕ್ ಮೂಲದ ಅಮೇರಿಕನ್ ಪೌರ ಫೈಝಲ್ ಶಹಝಾದ್‌ನ ಕುರಿತು ಅಮೇರಿಕಾ ಅನೇಕ ಕಥೆಗಳನ್ನು ಹೊರಬಿಡುತ್ತಿದೆ. ಕಾಶ್ಮೀರದ ಉಗ್ರರೊಂದಿಗೆ ಸಂಬಂಧವಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದ್ದು ಅವನು ಲಶ್ಕರೆ ತ್ವಯಿಬಾ, ಜೈಶೆ ಮುಹಮ್ಮದ್‌ನಂತಹ ಉಗ್ರ ಸಂಘಟನೆಗಳಿಗಾಗಿ ಕೆಲಸ ಮಾಡುತ್ತಿದ್ದನೆಂದು ತನಿಖಾ ವೇಳೆ ಒಪ್ಪಿಕೊಂಡಿರುವುದಾಗಿ ಹೇಳಲಾಗಿತ್ತು. ಪೇಶಾವರದ ಈ ಯುವಕ ಇಂತಹ ಕೃತ್ಯ ಮಾಡಿರುವನೆಂದು ಅವನ ಊರವರಿಗೆ ಇನ್ನೂ ನಂಬಿಕೆಯಿಲ್ಲ. ಸೌಮ್ಯ ವ್ಯಕ್ತಿ ಈತನೆಂದು ಊರವರು ಹೇಳುತ್ತಿರುವುದಾಗಿ ಪಾಕಿಸ್ತಾನದ ಡಾನ್ ಪತ್ರಿಕೆ ವರದಿಮಾಡಿದೆ.

ಅಮೇರಿಕಾದಲ್ಲಿ ಮುಸ್ಲಿಮ್ ಯುವಕರೇ ಯಾಕೆ ಬಾಂಬು ಇಡುವುದು ಎಂಬ ಪ್ರಶ್ನೆಗೆ ಅಮೇರಿಕಾ ಯಾವಾಗಲೂ ನೀಡುವ ಉತ್ತರ ಅಸ್ಪಷ್ಟವಾಗಿರುತ್ತದೆ. ಅಲ್ಲಿನ ಸೆನೆಟ್ ಇತ್ತೀಚೆಗೆ ಇಸ್ಲಾಮ್ ಭಯೋತ್ಪಾದಕರ ಧರ್ಮ ಅಲ್ಲವೆಂದು ಘೋಷಿಸಿತ್ತು. ಆದರೂ ಭಯೋತ್ಪಾದನಾ ವಿರೋಧಿ ಹೋರಾಟವೆಂದು ಹೆಸರಿಸುತ್ತಾ ಅದು ಕಾರ್ಯವೆಸಗುತ್ತಿರುವುದು ಒಂದೋ ಮುಸ್ಲಿಮ್ ವ್ಯಕ್ತಿಗಳ ಹಿಂದೆ ಅಥವಾ ಮುಸ್ಲಿಮ್ ರಾಷ್ಟ್ರಗಳ ವಿರುದ್ಧವಾಗಿದೆ. ಪಾಕಿಸ್ತಾನಕ್ಕೆ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗೆಂದು ಹಣ ಕೊಟ್ಟು ಇನ್ನೊಂದು ಕಡೆಯಿಂದ ಪಾಕಿಸ್ತಾನಿ ಮೂಲದವರನ್ನು ಭಯೋತ್ಪಾದಕರಾಗಿ ಗುರುತಿಸುವ ಪ್ರಕ್ರಿಯೆಯಂತೂ ಸರಾಗವಾಗಿ ನೆರವೇರುತ್ತಿದೆ. ಶಹಝಾದ್‌ನ ಕುರಿತು ಹೊರಬೀಳುವ ಕಥೆ ಅವನು ತನಿಖೆಗೆ ಸಹಕರಿಸುತ್ತಿದ್ದಾನೆಂದು ಅವನ ಸೌಮ್ಯ ಸ್ವಭಾವಕ್ಕೆ ಫೋಕಸ್ ನೀಡುತ್ತಿರುವುದನ್ನೆಲ್ಲ ಅಮೇರಿಕವನ್ನು ನಂಬದ ಜಗತ್ತು ಕುತೂಹಲದಿಂದ ಕಣ್ಣಿಟ್ಟು ನೋಡುತ್ತಿದೆ.

ಶಹಝಾದ್ ಪಾಕಿಸ್ತಾನದ ಪೇಶಾವರದಿಂದ 1999ರಲ್ಲಿ ವಿದ್ಯಾರ್ಥಿ ವೀಸಾವನ್ನು ಪಡೆದು ಅಮೇರಿಕಾಕ್ಕೆ ತೆರಳಿದ್ದನು. ಈತ ಅಲ್ಲಿನ ಬ್ರಿಡ್ಜ್ ಪೋರ್ಟ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಪದವಿ ಪಡೆದುಕೊಂಡಿದ್ದ. ಆ ನಂತರ ಅಮೇರಿಕಾದ ಯುವತಿಯನ್ನು ವಿವಾಹವಾದುದರಿಂದ ಈತನಿಗೆ ಅಮೇರಿಕನ್ ಪೌರತ್ವವು ಲಭಿಸಿತ್ತು. ಕೊಲರಾಡದಲ್ಲಿ ಬಂಧುಗಳ ಜೊತೆ ವಾಸಿಸುತ್ತಿದ್ದ ಸಂದರ್ಭದಲ್ಲಿ ಅವನನ್ನು ಟೈಂಸ್‌ಸ್ಕ್ವಾರ್ ಕಾರು ಬಾಂಬು ಸ್ಫೋಟ ಪ್ರಕರಣದಲ್ಲಿ ಬಂಧಿಸಿ ಜೈಲಿನೊಳಗಿರಿಸಲಾಗಿದೆ.

ಕಾರು ಸ್ಫೋಟಿಸುವ ಮುಂಚೆಯೇ ಪತ್ತೆ ಹಚ್ಚಲಾದುದಕ್ಕೆ ಅಮೇರಿಕಾದ ಅಧ್ಯಕ್ಷರಿಂದ ಶಾಬಾಸ್ ಗಿರಿಯನ್ನು ಪಡೆದುಕೊಂಡಿರುವ ಪೋಲೀಸರು ದಿನಕ್ಕೊಂದು ರೀತಿ ಹೇಳಿಕೆಯನ್ನು ನೀಡುತ್ತಿರುವುದು ಪೋಲಿಸರ ಕುರಿತೇ ಅನುಮಾನ ಪಡುವಂತಾಗಿದೆ. ಪಾಕಿಸ್ತಾನದ ವಝೀರಿಸ್ತಾನದಲ್ಲಿರುವ ಭಯೋತ್ಪಾದಕರ ಕ್ಯಾಂಪ್‌ನಲ್ಲಿ ಶಹಝಾದ್ ತರಬೇತಿ ಪಡೆದಿರುವುದಾಗಿ ಒಪ್ಪಿಕೊಂಡಿರುವನೆಂದು ಹೇಳುತ್ತಿದ್ದ ಪೋಲೀಸರು, ಅವನಿಗೆ ಅಲ್ ಕಾಯಿದಾ ಸಂಬಂಧವಿರುವುದು ದೃಢಪಟ್ಟಿದೆಯೆಂದು ಬಹಿರಂಗಪಡಿಸಿದ್ದರು. ಆದರೆ ಈಗ ಪೋಲೀಸರು ಬೇರೆಯೇ ಕತೆಯನ್ನು ಹೆಣೆಯುತ್ತಿದ್ದಾರೆ. ಈಗ ಯಮನ್‌ನಲ್ಲಿ ವಾಸಿಸುತ್ತಿರುವ ವಿವಾದಾಸ್ಪದ ವಿದ್ವಾಂಸರಾದ ಅನ್ವರ್ ಔಲಾಕಿಯವರ ಆನ್‌ಲೈನ್ ಭಾಷಣವು ಶಹಝಾದ್‌ನನ್ನು ಭಯೋತ್ಪಾದಕನಾಗಿ ರೂಪಿಸಿತೆಂದು ನ್ಯೂಯಾರ್ಕ್ ಟೈಮ್ಸ್ ವರದಿ ತಿಳಿಸಿದೆ.

ನಿಜವಾಗಿ ಅಮೇರಿಕದ ತನಿಖಾ ತಂಡಗಳು ಯುವಕರನ್ನು ಹಿಡಿದು ನಂತರ ಬಿಡುಗಡೆಗೊಳಿಸುವ ಕಥೆಗಳಂತೆ ಶಹಝಾದ್ ಪ್ರಕರಣದಲ್ಲಿಯೂ ಮುಂದುವರಿಯುತ್ತಿದೆ. ಯಾವುದೇ ತನಿಖಾ ಸಂಸ್ಥೆ ಅಪರಾಧಿಗಳನ್ನು ಹಿಡಿದು ತನಿಖಾ ವಿವರವನ್ನು ಕಾಲಕಾಲಕ್ಕೆ ಚುನಾವಣಾ ಫಲಿತಾಂಶದಂತೆ ಬಿಡುಗಡೆಗೊಳಿಸುವ ಅವಶ್ಯಕತೆಯಿದೆಯೇ ಎಂಬ ವಿಚಾರವನ್ನು ಅಪರಾಧ ತಜ್ಞರು ನಿರಾಕರಿಸುತ್ತಾರೆ. ಅಂದರೆ ದಿನಕ್ಕೊಂದು ಕತೆಯನ್ನು ಹೇಳುವ ಮೂಲಕ ವ್ಯಕ್ತಿಯನ್ನು ನಿಜವಾದ ಅಪರಾಧಿಯೆಂದು ಜಗತ್ತು ಭಾವಿಸಲಿ ಎಂಬ ಅಮೇರಿಕಾದ ತಂತ್ರವಿದೆಂದು ಅವರ ಅಂಬೋಣವಾಗಿದೆ. ಪಾಕಿಸ್ತಾನದಿಂದ ಮಾತ್ರವಲ್ಲ ಬಹುತೇಕ ಮುಸ್ಲಿಮ್ ಯುವಕರನ್ನು ಅದರಲ್ಲೂ ವಿದ್ಯಾವಂತ ಯುವಕರನ್ನು ಯಾವುದಾದರೂ ಪ್ರಕರಣದಲ್ಲಿ ಸಿಲುಕಿಸಿ ಹಾಕಿ ಮುಸ್ಲಿಮ್ ವಿದ್ಯಾವಂತರೇ ಭಯೋತ್ಪಾದಕರಾಗಿದ್ದಾರೆಂದು ಅಮೇರಿಕಾ ಹಲವು ಸಲ ಸಾಬೀತು ಪಡಿಸಲು ಪ್ರಯತ್ನಿಸಿತ್ತು. ವಿಜ್ಞಾನಿ ಅಫೀಫಾ ಸಿದ್ದೀಕಿ ಎಂಬ ಮಹಿಳೆಯನ್ನು ಅಫಘಾನಿಸ್ತಾನದ ಕುಖ್ಯಾತ ಬಗ್ರಾಮ್ ಜೈಲಿನೊಳಗೆ ಪೀಡಿಸುತ್ತಿರುವ ಕಥೆಯ ಹಿನ್ನೆಲೆಯಲ್ಲಿ ಕೂಡಾ ಅಮೇರಿಕಾಕ್ಕೆ ಇದೇ ಉದ್ದೇಶವಿದೆ. ಅಮೇರಿಕಕ್ಕಾಗಿ ಕೆಲಸ ಮಾಡಲು ನಿರಾಕರಿಸುವವರೆಲ್ಲ ಇಂತಹ ದೌರ್ಜನ್ಯಗಳಿಗೆ ತುತ್ತಾಗಿದ್ದಾರೆಂಬುದರಲ್ಲಿ ಅತಿಶಯವಾದದ್ದೇನೂ ಇಲ್ಲ. ಕಂಡ ಕಂಡವರನ್ನೆಲ್ಲ ಎತ್ತಿಕೊಂಡು ಹೋಗಿ ಗ್ವಾಂಟನಾಮೋದಂತಹ ಕರಾಳ ಕಾರಾಗೃಹದಲ್ಲಿರಿಸಿ ಪೀಡಿಸುವ ಕಥೆ ಜಗತ್ತಿನಲ್ಲೇ ಕುಖ್ಯಾತವಾಗಿರುವ ನಗ್ನ ಸತ್ಯವಾಗಿದೆ. ಶಹಝಾದನನ್ನು ಕೂಡಾ ಅಮೇರಿಕಾ ಇದೇ ರೀತಿ ವಂಚಿಸಲು ನೋಡುತ್ತಿದೆಯೇ ಎಂಬ ಪ್ರಶ್ನೆ ಪಾಕಿಸ್ತಾನದ ಮಾನವ ಹಕ್ಕುಗಳ ಹೋರಾಟಗಾರರ ನಡುವೆ ಸುಳಿದಾಡುತ್ತಿದೆ.

ಪಾಕಿಸ್ತಾನದ ತಾಲಿಬಾನ್ ಮೂಲಗಳು ತನಗೂ ಶಹಝಾದನಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದೆ. ಆತ ಒಂದು ಭಾಷಣದಿಂದಲೋ, ಯಾರ ಪ್ರಚೋದನೆಯಿಂದಲೋ ವಶವಾಗುವಷ್ಟು ಅವಿವೇಕಿ ಅಲ್ಲವೆಂದು ಶಹಝಾದ್‌ನೊಂದಿಗೆ ಒಡನಾಡಿದವರು ಹೇಳುತ್ತಿದ್ದಾರೆ.

ಮೈ ನೇಮ್ ಈಸ್ ಖಾನ್ ಎಂಬ ಸಿನಿಮಾದ ಕಥಾ ಪಾತ್ರದಂತೆ ಶಹಝಾದ್‌ನ ಕುರಿತು ಅವರ ವಿವರಣೆ ಸಾಗುತ್ತಿರುವುದು ಆಶ್ಚರ್ಯಕಾರಿಯಾಗಿದೆ. ಊರಿನವರ ಪ್ರಕಾರ ಶಹಝಾದ್ ಸಾಕಷ್ಟು ಸ್ಥಿತಿವಂತನಲ್ಲದ ವ್ಯಕ್ತಿ. ಬಾಂಬಿಡುವುದು ಬಿಡಿ, ಕಾರನ್ನು ಕೂಡಾ ಖರೀದಿಸಲು ಸಮರ್ಥನಲ್ಲ ಎಂದು ಅವನನ್ನು ತಿಳಿದವರು ಸೂಚಿಸುತ್ತಿದ್ದಾರೆಂದು ಪಾಕಿಸ್ತಾನದ ವರದಿಗಳು ತಿಳಿಸುತ್ತವೆ. ಆದರೆ ಪಾಕಿಸ್ತಾನದಿಂದ ಅವನಿಗೆ ಹಣ ತಲುಪಿಸಲಾಗಿದೆಯೆಂದು ಅಮೇರಿಕದ ಪೋಲಿಸರು ಹೇಳುತ್ತಿದ್ದಾರೆ. ಪೋಲೀಸರ ಪ್ರಕಾರ ಓರ್ವ ನಿರ್ದಿಷ್ಟ ವ್ಯಕ್ತಿ ಈ ಕೆಲಸ ಮಾಡಿದ್ದಾನೆ. ಆದರೆ ಯಾರು ಅದೆಂದು ಅವರಿಗೆ ತನಿಖೆಯಿಂದ ಗೊತ್ತಾಗಬೇಕಿದೆ. ಇದನ್ನು ತನಿಖೆಯ ವೇಳೆ ಸ್ವತಃ ಶಹಝಾದನೇ ಹೇಳಿರುವುದಾಗಿ ಎಪಿ ವಾರ್ತಾ ಸಂಸ್ಥೆ ವರದಿ ಮಾಡಿದೆ.

ಕಾರು ಬಾಂಬ್ ಪತ್ತೆಯಾಗಿರುವುದು ಟೈಮ್ಸ್ ಸ್ಕ್ವೇರ್‌ನಲ್ಲಿಯಾದರೂ ಯುಎಇಗೆ ಪ್ರಯಾಣಿಕನಾಗಿದ್ದ ಶಹಝಾದನನ್ನು ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಅಲ್ಲಿಂದ ಅಮೇರಿಕಾದ ಪೋಲಿಸರ ಕತೆಗಳು ಜಗತ್ತಿನಾದ್ಯಂತ ಕಥೆಗಳಾಗಿ ಹರಡುತ್ತಿವೆ. ಮುಂದೊಮ್ಮೆ ಅವರು ಶಹಝಾದ್‌ನನ್ನು ಮರಿ ಲಾದೆನ್ ಎಂದು ಚಿತ್ರಿಸಿದರೂ ಚಿತ್ರಿಸಬಹುದು. ವಾಸ್ತವದಲ್ಲಿ ಅಮೇರಿಕಾದ ತನಿಖೆಯಲ್ಲಿ ಇಂದು ಜನಸಾಮಾನ್ಯರಿಗೆ ವಿಶ್ವಾಸವಿಲ್ಲ. ಆದ್ದರಿಂದ ಶಹಝಾದ್ ನಿರಪರಾಧಿಯಾಗಿದ್ದರೂ ಅಮೇರಿಕಾದ ತನಿಖೆ ಸಂಸ್ಥೆಗಳು ಅವನನ್ನು ಹೇಗೆ ಅಪರಾಧಿ ಮಾಡಬಹುದೆಂಬುದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡಬಹುದು. ಭಾರತದಿಂದ ಮೈನೇಮ್ ಈಸ್ ಖಾನ್ ಎನ್ನುವ ಸಿನೆಮಾದ ಮೂಲಕ ಶಾರೂಕ್ ಖಾನ್ ಎಂಬ ನಟ ಅಮೇರಿಕಾದ ಅಧ್ಯಕ್ಷರಿಗೆ ಅಮಾಯಕರ ಮೇಲೆ ನಿಮ್ಮ ತನಿಖಾ ಸಂಸ್ಥೆಗಳು ಗೂಬೆ ಕೂರಿಸುತ್ತಿವೆ ಎಂದು ಸಂದೇಶ ರವಾನಿಸಿದುದಕ್ಕೆ ಬದಲಿಯಾಗಿ ಮುಗ್ಧರು ಮತ್ತು ಅಮಾಯಕರೆನ್ನಿಸಿಕೊಂಡವರೇ ಭಯೋತ್ಪಾದಕರಾಗಿದ್ದಾರೆ ಎಂಬ ಸಂದೇಶವನ್ನು ತಿರುಗಿ ಕಳಿಸಲು ಶಹಝಾದ್ ನಂತವರು ಬಲಿಯಾಗಲೂ ಬಹುದು.

ಇರಾಕ್‌ನಲ್ಲಿ ಇಲ್ಲದ ಅಸ್ತ್ರವನ್ನು ಇದೆ ಎಂದು ಸದ್ದಾಮ್‌ರ ಕುಟುಂಬವನ್ನು ಸದೆಬಡಿಯಲು ಅಮೇರಿಕಕ್ಕೆ ಯಾವ ಕಷ್ಟವಾಗಿಲ್ಲವೆಂದಾದರೆ, ಶಹಝಾದ್‌ನಂತವರನ್ನು ಅಪರಾಧಿಯಾದರೂ ಅಲ್ಲದಿದ್ದರೂ ಭಯೋತ್ಪಾದಕನಾಗಿ ಮಾಡುವುದಕ್ಕೆ ಅದೇ ಅಮೇರಿಕಾದಿಂದ ಸಾಧ್ಯವಿಲ್ಲವೇ? ಈ ಕುರಿತು ಶಾರೂಕ್ ಖಾನ್ ಇನ್ನೊಂದು ಸಿನೆಮಾವನ್ನೇ ತಯಾರಿಸಬೇಕಾಗಬಹುದು. ಅದೇ ವೇಳೆ ಶಾರೂಕ್‌ರನ್ನು ಅಮೇರಿಕಾ ಅಲ್ ಖಾಯಿದಾ ಸಂಪರ್ಕವಿದೆ ಎಂದು ಜೋಡಿಸದಿದ್ದರೆ ಅವರ ಮಹಾ ಭಾಗ್ಯವೆಂದು ಹೇಳಬಹುದು.

ಶಹಝಾದ್ ಅಪರಾಧಿಯೋ, ನಿರಪರಾಧಿಯೋ, ಅವನೇ ಟೈಮ್ಸ್‌ಸ್ಕ್ವೇರ್‌ನಲ್ಲಿ ಕಾರು ಬಾಂಬಿಟ್ಟಿದ್ದಾನೆಯೋ ಎಂಬುದು ತನಿಖೆಯಿಂದ ತಿಳಿಯಬೇಕಾಗಿದೆ ಎಂಬ ವಿಚಾರದಲ್ಲಿ ಎರಡು ಮಾತಿಲ್ಲ. ವಿಧ್ವಂಸಕಾರಿ ಕೃತ್ಯ ಯಾರಿಂದಲೂ ಆಗಬಾರದು. ಆದರೆ ಇಲ್ಲಿನ ಪ್ರಮುಖ ಪ್ರಶ್ನೆ ಪೋಲೀಸ್ ಇಲಾಖೆ ನಕಲಿ ಎನ್ ಕೌಂಟರ್‌ನಂತವುಗಳಿಗೆ ಕುಖ್ಯಾತವಾಗಿರುವ ಈ ದಿನಗಳಲ್ಲಿ, ಅವರಿಗೊಂದು ಕಾರನ್ನು ಸಂಪಾದಿಸಿ ಅದರೊಳಗೆ ಬಾಂಬನ್ನು ಹೋಲುವ ವಸ್ತುವನ್ನು ಇಟ್ಟು ಆ ಪ್ರಕರಣದಲ್ಲಿ ಯಾರನ್ನಾದರೂ ಸಿಕ್ಕಿಸಿ ಹಾಕಲು ಸಾಧ್ಯವಿಲ್ಲವೇ ಎಂಬುದಾಗಿದೆ. ಮುಖ್ಯವಾಗಿ ತನಿಖೆ ಚಲಾವಣೆಯಲ್ಲಿರುವಾಗ ಅಮೇರಿಕಾ ಅದರ ಬೆಳವಣಿಗೆಯ ಕಾಮೆಂಟ್ರಿಯನ್ನು ಯಾಕೆ ಜಗತ್ತಿನ ಮುಂದೆ ಬಿತ್ತರಿಸುತ್ತಿದೆ? ಸೆ. 11ರ ನಂತರ ಅಮೇರಿಕಾದಲ್ಲಿ ಅಲ್ಲಿನ ಪೋಲೀಸರು ಯಾವ ಬುಡಮೇಲು ಕೃತ್ಯಕ್ಕೂ ಅವಕಾಶ ನೀಡಿಲ್ಲ ಎಂದು ಹೇಳಿ ತಿರುಗಾಡುವ ವೇಳೆ ಈ ಕಾರು ಬಾಂಬು ಅಲ್ಲಿ ಪತ್ತೆಯಾಗಿದೆ. ಅಂದರೆ ಅಮೇರಿಕಾದಲ್ಲಿ ಅಂತಹ ಕುಕೃತ್ಯ ನಡೆಸುವವರಿದ್ದಾರೆ. ಅವರನ್ನು ಬಾಲ ಬಿಚ್ಚುವ ಮುಂಚೆ ಮಟ್ಟ ಹಾಕಲಾಗಿದೆ ಎಂದು ಜಗತ್ತಿಗೆ ಅಮೇರಿಕಾದ ಪೋಲೀಸರು ಸಂದೇಶ ರವಾನಿಸಲು ಬಯಸಿದ್ದಾರೆ ಎಂದಾದರೆ ಖಂಡಿತವಾಗಿಯೂ ಟೈಮ್ಸ್‌ಸ್ಕ್ವೇರ್‌ನಲ್ಲಿ ಪತ್ತೆಯಾಗಿರುವುದು ಕಾರ್ ಬಾಂಬೇ ಎಂಬ ವಿಚಾರದಲ್ಲಿ ಸಂದೇಹ ಪಡಬೇಕಾಗುತ್ತದೆ. ಯುಎಇ ಪ್ರಯಾಣಕ್ಕೆ ಹೊರಟ ಯುವಕ ವಿಮಾನ ನಿಲ್ದಾಣದಲ್ಲಿ ಎಮಿಗ್ರೇಶನ್ ತನಿಖೆಯಲ್ಲಿ ಕುಖ್ಯಾತ ಭಯೋತ್ಪಾದಕನಾಗಿ ಬಿಡುವುದು ಕಥೆಯಂತಿದೆ ಎಂಬುದು ಬಾಲಿಶ ವಿಚಾರವಲ್ಲ.



## ಇರಾನ್‌ನಲ್ಲಿ ಮಹಿಳಾ ಹಕ್ಕುಗಳಿಗೆ ಅತ್ಯಧಿಕ ಮಾನ್ಯತೆ



**ಟೆಹ್ರಾನ್: "ಮಹಿಳಾ ಹಕ್ಕುಗಳು ಇರಾನಿನಲ್ಲಿ ಅತ್ಯಧಿಕ ಗೌರವಕ್ಕೆ ಅರ್ಹವಾಗಿವೆ. ಅದೇ ವೇಳೆ ಪಾಶ್ಚಾತ್ಯರಲ್ಲಿ ಮಹಿಳೆಯರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ" ಎಂದು ಅಧ್ಯಕ್ಷ ಮಹ್ಮೂದ್ ಅಹ್ಮದ್ ನಜಾದ್ ಹೇಳಿದರು.**

**ಮಹಿಳೆಯರಿಗೆ ಸಂಬಂಧಿಸಿ ಇರಾನ್ ತುಂಬಾ ಕಟು ಧೋರಣೆಯನ್ನು ಹೊಂದಿದೆ ಎಂದು ಆರೋಪಿಸಿ, ಮಹಿಳಾ ಸ್ಥಾನಮಾನ ಗಳ ಕುರಿತು ಮಾನವ ಹಕ್ಕು ಸಂಘಟನೆಗಳು ಇರಾನ್ ಚುನಾವಣೆಯ ವಿರುದ್ಧ ವಿಶ್ವಸಂಸ್ಥೆಯ ಕಚೇರಿಯ ಮುಂದೆ ರ್‍ಯಾಲಿ ನಡೆಸಿತ್ತು. ಅದನ್ನು ಅನುಸರಿಸಿ ಇರಾನ್ ಅಧ್ಯಕ್ಷರು ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತಾಡಿದರು.**

**"ಪಶ್ಚಿಮದಲ್ಲಿ ಮಹಿಳೆಯ ಸ್ಥಾನಮಾನ ಏನು ಉಳಿದಿದೆ? ಅಲ್ಲಿ ಯಾವ ಪೀಳಿಗೆ ಉಳಿದಿದೆ ಹೇಳಿ? ಅಲ್ಲಿ ಮಮತೆ, ಕರುಣೆ, ಪ್ರೀತಿಯೇನಾದರೂ ಉಳಿದಿದೆಯೇ?" ಎಂದು ಅಧ್ಯಕ್ಷರು ಪ್ರಶ್ನಿದರು. "ಮಹಿಳೆಯರ ಸ್ಥಾನಮಾನವನ್ನು ಪಶ್ಚಿಮದಲ್ಲಿ ವಿಶೇಷತಃ ಯುರೋಪಿನಲ್ಲಿ ಎಷ್ಟಂಶ ಗೌರವಿಸಲಾಗುತ್ತಿದೆ? ವಸ್ತುತಃ ಮಹಿಳೆಯರು ಭೂಮಿಯಲ್ಲಿ ಸೌಂದರ್ಯದ ಚಿಹ್ನೆಗಳಾಗಿದ್ದಾರೆ" ಎಂದು ಪ್ರತಿಕ್ರಿಯಿಸಿದ ಅವರು, "ಸುಮಾರು 70% ಮಹಿಳೆಯರು ಪತಿಯಂದಿರಿಂದ ತುಳಿತಕ್ಕೊಳಗಾಗುತ್ತಿರುವ ಯುರೋಪಿಗಿಂತ ಇರಾನಿನ ಮಹಿಳೆಯರು ಎಷ್ಟೋ ಪಾಲು ಉತ್ತಮ ಸ್ಥಿತಿಯಲ್ಲಿದ್ದಾರೆ" ಎಂದು ಖಾರವಾಗಿ ನುಡಿದರು.**

**ಇರಾನ್ ಎಂದಿಗೂ ಮಹಿಳೆಯರ ವಿರುದ್ಧ ಭೇದಭಾವ ಅಳಿಸುವ ಸಮಿತಿ(CEDAW)ಗೆ ಸೇರುವುದಿಲ್ಲ ಎಂದು ಹೇಳಿದ ನಜಾದ್‌ರವರು, "ನಮ್ಮ ಸಂಸ್ಕೃತಿ ನಮ್ಮದು, ನಮ್ಮ ನಂಬಿಕೆಗಳು ನಮ್ಮವು. ನಾವು ಎಂದಿಗೂ ಮಹಿಳೆಯನ್ನು ಅಳಿವಿನಂಚಿಗೆ ತಳ್ಳುವಂತಹ ಯಾವುದೇ ಅಳತೆಗೋಳನ್ನು ಅನುಸರಿಸಲಾರೆವು" ಎಂದು ನುಡಿದರು. ಇರಾನ್ ಮಹಿಳೆಯರಿಗೆ ರಾಜಕೀಯ ಮತ್ತು ಶೈಕ್ಷಣಿಕ ರಂಗಗಳಲ್ಲಿ ಗೌರವಾರ್ಹ ಸ್ಥಾನಮಾನವನ್ನು ನೀಡಿದೆ. ಅವರೊಂದಿಗೆ ಎಂದೂ ಮನೆಕೆಲಸದಾಳೆಂಬಂತೆ ನೋಡಿಕೊಳ್ಳಲಾಗುತ್ತಿಲ್ಲ ಎಂದೂ ಅವರು ಹೇಳಿದರು.**

# ಇಲ್ಲಿ ಶಿಕ್ಷೆ ಕತ್ತೆಗೆ ಮಾತ್ರವಾ ಕುದುರೆಗ್ಯಾಕಿಲ್ಲ?




"ಬಡವನೆಂದರೆ ಹಸಿವಿಗಾಗಿ ಎಲ್ಲವನ್ನೂ ನಾಶ ಮಾಡುವ ಪ್ರಾಣಿ" ಇದು ಬಡವನ ಬಗೆಗಿರುವ ಬಂಡವಾಳಶಾಹಿಗಳ ನಿಲುವು. ಇದೆಷ್ಟು ಸತ್ಯವೋ ಸುಳ್ಳೋ ಎನ್ನುವುದಕ್ಕಿಂತ ಇತ್ತೀಚಿನ ದಿನಗಳಲ್ಲಿ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿ ವರೆಗಿನ ವಿದ್ಯಮಾನಗಳನ್ನು ಗಮನಿಸಿದರೆ ಖಂಡಿತ ಪ್ರಜಾಪ್ರಭುತ್ವದ, ಪ್ರಜೆಗಳಿಂದ, ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರಕಾರ ಎಂಬ ಹಳಸಲು ಘೋಷಣೆಯ ಅರಿವಾಗುತ್ತದೆ.

ಬಿಹಾರ, ಅಸ್ಸಾಂ, ಮಿಜೋರಾಂ, ನಾಗಲ್ಯಾಂಡ್, ಜಮ್ಮುಕಾಶ್ಮೀರ, ಕರ್ನಾಟಕ, ಪಶ್ಚಿಮ ಬಂಗಾಳ, ಪಂಜಾಬ್ ಯಾವ ರಾಜ್ಯವನ್ನೂ ಪಟ್ಟಿಯಿಂದ ಹೊರಗಿಡಲು ಸಾಧ್ಯವಾಗದಂತಹ ಭೂಪಟದಲ್ಲಿ ಬದುಕುತ್ತಿದ್ದೇವೆ. ಒಂದಂತೂ ಸತ್ಯ. ಎಲ್ಲಾ ಹೋರಾಟಗಳು ಬಳಿಕ ದಾರಿತಪ್ಪಿದರೂ ಅದರ ಹುಟ್ಟಿಗೆ ಮೂಲ ಕಾರಣ ಸಾಮಾಜಿಕ ಅಸಮಾನತೆ. ಪ್ರತ್ಯೇಕ ರಾಜ್ಯ ಬೇಡಿಕೆ, ಪ್ರತ್ಯೇಕ ತಾಲೂಕಿನ ಬೇಡಿಕೆ ಮುಂದುವರಿದು ಪ್ರತ್ಯೇಕ ರಾಷ್ಟ್ರದ ಬೇಡಿಕೆಯ ಬಗ್ಗೆ ಇದು ಸರಿಯೋ ತಪ್ಪೋ ಚರ್ಚಿಸುವುದರ ಬದಲು ಈ ಬೇಡಿಕೆಗಿರುವ ಅಗತ್ಯಗಳನ್ನು ಪೂರೈಸುವುದರ ಬಗ್ಗೆ ಸದಾ ನಿರ್ಲಕ್ಷ್ಯ ವಹಿಸುವುದು ಸಾಮಾನ್ಯ ವಾಗಿರುತ್ತದೆ.

ಒಂದು ಸಣ್ಣ ಉದಾಹರಣೆ: ಮೂರೋ ಐದೋ ಸೆಂಟ್ಸ್ ಸ್ಥಳದಲ್ಲಿ ಮನೆ ಕಟ್ಟಿಸುವವರಿಗೆ ಸದ್ಯದ ಸ್ಥಿತಿಯಲ್ಲಿ ಮಂಗಳೂರು ಮಹಾನಗರ ವ್ಯಾಪ್ತಿಗೆ ಸಂಬಂಧಿಸಿ ಹೇಳುವುದಾದರೆ ಅನುಮತಿ ಪತ್ರ ಪಾಲಿಕೆ ನೀಡುವುದಿಲ್ಲ. ಅಸಹಾಯಕವಾಗಿ, ಅನಿವಾರ್ಯತೆಯಿಂದ ಫ್ಲಾಟ್‌ನ ಬದುಕಿಗೆ ಶರಣು ಹೋಗಲು ಈ ರೀತಿಯ ಪರಿಸ್ಥಿತಿ ಸೃಷ್ಟಿಸಲಾಗಿದೆಯೆಂಬ ಮಾತನ್ನು ನಿರಾಕರಿಸಲು ಸಾಧ್ಯವಿಲ್ಲ. ಇನ್ನು ಸರಕಾರಿ ಕಛೇರಿಯಲ್ಲಿ ಆದಾಯ ಪ್ರಮಾಣ ಪತ್ರ, ಪಹಣಿ ಪತ್ರಿಕೆ, ಕನ್ವರ್ಷನ್, ರಿಜಿಸ್ಟ್ರೇಷನ್ ಬಿಡಿ, ವಿವಾಹ ನೊಂದಣಿ ಕಛೇರಿಯಲ್ಲೂ ನಿಮ್ಮ ಕೆಲಸವಾಗಬೇಕಿದ್ದರೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಸರಿಯಿದ್ದರೂ ಸಿಬ್ಬಂದಿಯೋ ಅಧಿಕಾರಿಯೋ ಕೇಳಿದ ಲಂಚವೆನ್ನುವ ದಕ್ಷಿಣೆ ನೀಡದೆ ಯಾವ ಕಾರ್ಯವೂ ನಡೆಯುವುದಿಲ್ಲವೆನ್ನುವುದು ಸರ್ವೇ ಸಾಮಾನ್ಯವಾಗಿದೆ. ಹೀಗಿರುವಾಗ ಇಲ್ಲಿ ಸ್ವಾತಂತ್ರ್ಯದ ಕಲ್ಪನೆಯೇ ಅರ್ಥಹೀನವೆಂದೆನಿಸುತ್ತದೆ. ಈಗಲೂ ಓರ್ವ ಜನಸಾಮಾನ್ಯ ನಿರಪರಾಧಿಯಾದರೂ ಅಥವಾ ಪಾಸ್‌ಪೋರ್ಟ್‌ಗೆ ಸಂಬಂಧಪಟ್ಟ ವಿಷಯಕ್ಕೂ ಠಾಣೆಗೆ ಹೋದರೆ ಕೈ ಕಟ್ಟಿ ವಿನಮ್ರವಾಗಿ ಅಧಿಕಾರಿಯೆದುರು ನಿಲ್ಲಬೇಕು. ಬ್ರಿಟಿಷರ ಕಾಲದಲ್ಲಿದ್ದ ಬಡವನಿಗೂ ಈಗಿನ ಕಾಲದ ಬಡವನಿಗೂ ವ್ಯತ್ಯಾಸವೇನಿಲ್ಲ.

ಕೋರ್ಟು, ಠಾಣೆ, ತೀರ್ಪು ತಿರ್ಮಾನ ಎಲ್ಲವೂ ಬಡಜನರ ವಿರುದ್ಧವೇ. ಎಲ್ಲೋ ಬೆರಳೆಣಿಕೆಯ ತೀರ್ಪುಗಳು ಇದಕ್ಕೆ ಅಪವಾದವಾಗಿರಬಹುದು. ಶ್ರೀಮಂತ ಕೊಲೆ ಮಾಡಿದರೆ ಪಾರಾಗಲು ಹಲವು ದಾರಿ. ಅದೇ ಏನೋ ಸಣ್ಣ ಪುಟ್ಟ ತಗಾದೆಗಳು ನಡೆದರೂ ವರುಷಗಟ್ಟಲೆ ಓರ್ವ ಬಡವರನ್ನು ಜೈಲಿನಲ್ಲಿರಿಸುವ ಮಾನಸಿಕ ಸ್ಥಿತಿಯ ಅಧಿಕಾರ ವರ್ಗದ ಸಮಾಜವಿದು.

**ಅಬೂರುಖಈಮಾ, ಪಕ್ಕಲಡ್ಕ**

ಇದಕ್ಕೆ ಅತ್ಯಾಚಾರದ ಪ್ರಕರಣಗಳು ಸಿರಿವಂತನೋ ರಾಜಕರಣಿಯು ಮೇಲೋ ಆರೋಪ ಹೊರಿಸಲ್ಪಟ್ಟಿರೆ ಆತ ಅದನ್ನು ದೃಶ್ಯ ಮಾಧ್ಯಮದ ಮುಂದೆ ನಗುನಗುಲ್ತೇ ಪೋಸುಕೊಟ್ಟು, ಹಾಗೆ ಹೀಗೆ ಎಂದು ಸೃಷ್ಟೀಕರಣ ನೀಡುತ್ತಾ ಜಾರಲು ಸಾಕಷ್ಟು ಅವಕಾಶ ನೀಡಲಾಗುತ್ತದೆ. ಬಡವನಾದರೆ ಕ್ಷುಲ್ಲಕ ಅಪರಾಧಕ್ಕಾಗಿ ಒಳ ಚಡ್ಡಿಯಲ್ಲಿ ದಿನಗಟ್ಟಲೆ. ಪೊಲೀಸ್ ಠಾಣೆಯಲ್ಲಿ ಕೂರಿಸುತ್ತದೆ. ಹಾಲಪ್ಪ ಪ್ರಕರಣವನ್ನೇ ಎತ್ತಿಕೊಳ್ಳಿ. ಕಾರಣ ವಿವರಣೆ ಬೇಕಿಲ್ಲ. ಹಾಲಪ್ಪ ಬಡವರಲ್ಲ. ಇಲ್ಲೇ ಯಾವುದೇ ಕಾಯ್ದೆ ಕಾನೂನು ಕೇವಲ ಬಡವನ ಬಗ್ಗೆ ಮಾತ್ರ ದೀಡೀರ್ ಕ್ರಮ ಕೈಗೊಳ್ಳಲು ಸಹಾಯಕವಾಗಿದೆ.

ಇನ್ನು ಎಲ್ಲಾ ವಿರೋಧಿಸುವ, ಪ್ರತಿಭಟಿಸುವ ಶಕ್ತಿಯು ಶೋಷಿತರ ರಟ್ಟೆಗೆ ಬಂದರೆ ಕೂಡಲೇ ಅದುಮಲು ಶೋಷಿತರ ಸೈನ್ಯವನ್ನೇ ಬಳಸಲಾಗುತ್ತದೆ. ಎಲ್ಲೋ ಗ್ರಾಮದ ಮೂಲೆ ಮೂಲೆಗಳಿಂದ ಐದಂಕೆಯ ಸಂಬಳದ ಆಸೆಗಾಗಿ ಸೈನ್ಯ ತೊರೆದ ಬಡವನನ್ನೇ ಪ್ರತಿಭಟಿಸುವವರ ವಿರುದ್ಧ ಛೂ ಬಿಟ್ಟು ಬಡವ ಬಡವರ ಮಧ್ಯೆ ಯುದ್ಧದ ಸ್ಥಿತಿ ನಿರ್ಮಾಣ ಮಾಡುತ್ತದೆ. ಇಲ್ಲಿ ಯಾವುದೇ ರೀತಿ ಹಿಂಸಾತ್ಮಕ ಪ್ರತಿಭಟನೆಯಾಗಲಿ, ಹೋರಾಟವನ್ನಾಗಲಿ ಖಂಡಿತ ಬೆಂಬಲಿಸುತ್ತಿಲ್ಲ. ಛತ್ತೀಸ್‌ಗಡದ ಮಾವೋವಾದಿಗಳು ಬಡಜನರಾಗಿದ್ದರೆ ಅವರಿಗೆ ಬಲಿಯಾದ ಸೈನಿಕರೂ ಬಡವರೇ.

ಯಾವ ಬೆಲೆ ತೆತ್ತಾದರೂ ನಕ್ಸಲರನ್ನು ಬಗ್ಗು ಬಡಿಯಬೇಕು? ಎಂಬುದು ಚಿದಂಬರಮ್‌ರ ತಾಕೀತು. ಇಲ್ಲಿರುವ ಪ್ರಶ್ನೆ ಬೆಲೆ ಯಾರು ತೆರಬೇಕು ಪಾರ್ಲಿಮೆಂಟ್‌ನ ಸದಸ್ಯರ ಮೊಮ್ಮಕ್ಕಳು, ಮಕ್ಕಳು, ಅಳಿಯಂದಿರು, ಸುಖದ ಸುಪ್ಪತ್ತಿನಲ್ಲಿ ಓಲಾಡುತ್ತಿರಬೇಕು. ಅಸೆಂಬ್ಲಿಯ ಸದಸ್ಯರುಗಳು ಕ್ರೀಡಾಪಂದ್ಯ ವೀಕ್ಷಿಸುವ ತಾರೆ ತಮ್ಮ ಕುಟುಂಬದೊಂದಿಗೆ ಟಿ.ವಿ. ಎದುರು ಕೂತು ಬಡ ಸೈನಿಕರು ಬಡ ಮಾವೋಯಿಸ್ಟ್‌ಗಳ ಕಾದಾಟವನ್ನು ವೀಕ್ಷಿಸುತ್ತಿರಬೇಕು. ಆ ಕಡೆ ಈ ಕಡೆಯ ಶವದ ಲೆಕ್ಕಾಚಾರ ಮಾಡುತ್ತಿರಬೇಕು. ಎರಡು ಕಡೆ ಬಡವರ ಕೊರತೆ ಕಂಡು ಬಂದರೆ ಇನ್ನಷ್ಟು ಮಂದಿ ದೂರದ ಊರಿಂದ ನೇಮಕಾತಿಯೆಂಬ ಸುಂದರ ಹೆಸರಿಟ್ಟು ಬಂದೂಕಿನ ನಳಿಕೆಯೆದುರು ತಂದು ನಿಲ್ಲಿಸಬೇಕು. ಇಷ್ಟು ಮಾಡುವುದು ಬಿಟ್ಟು ಗ್ರಹಚಾರದ ಮಂತ್ರಿಗಳಿಗೆ ಬೇರೇನೂ ಮಾಡಲು ಸಾಧ್ಯವಿಲ್ಲ.

ವಿಧವೆಯರಾದದ್ದು ಮಾವೋಯಿಸ್ಟ್‌ಗಳ ಪತ್ನಿಯಂದಿರೋ, ಸೈನಿಕರ ಪತ್ನಿಯಂದಿರೋ, ಬಡ ಪೊಲೀಸರ ಪತ್ನಿಯಂದಿರೋ, ಆದಿವಾಸಿಗಳ ಇಲ್ಲವೇ ನಾಗರಿಕರ ಪತ್ನಿಯಂದಿರೋ ಹೊರತು ಯಾವ ಅಸೆಂಬ್ಲಿ ಸದಸ್ಯನ, ಪಾರ್ಲಿಮೆಂಟ್‌ನ ಸದಸ್ಯನ ಕುಟುಂಬಸ್ಥರಲ್ಲ. ರಾಷ್ಟ್ರ ಪ್ರೇಮವೆಂಬ ಕಪಟ ನಾಟಕದ ಗೋಸುಂಬೆ ರಾಜಕಾರಣಿಗಳ ಪುತ್ರ ಪುತ್ರಿಯರೂ ಅಲ್ಲ.

ಎಲ್ಲಾ ಬಿಟ್ಟು ಅಂಕಿ ಅಂಶಗಳನ್ನು ಗಮನಕ್ಕೆ ತೆಗೆಯೋಣ. ಜೈಲಿನಲ್ಲಿರುವವರ ಪೈಕಿ 80%ಕ್ಕೂ ಮಿಕ್ಕಿ (ಇಡೀ ದೇಶದಲ್ಲಿ) ಬಡವರು ಇದ್ದಾರೆ. ಅದರಲ್ಲಿ 65% ಎಲ್ಲಾ ಕೆಡುಕಿಗೆ ಮೂಲ ಕಾರಣ ಬಡತನವಾಗಿದೆ. ಬೆರಳೆಣಿಕೆಯ ಜನ ಸುಖ ಸುಪ್ಪತ್ತಿಗೆಯಲ್ಲಿರುವುದನ್ನೇ ನೋಡಿ ಸಹಿಸಲಾರದ ಅಸಮಾನತೆಯ ಬೇಗೆಯಲ್ಲಿ ಬೆಂದ ಜನರೇ ಹೆಚ್ಚಾಗಿ ಕಳ್ಳತನ ಸುಲಿಗೆಯಲ್ಲಿ ಕೈ ಹಾಕುತ್ತಾರೆಂದು ಹೆಚ್ಚಿನ ಮನಶಾಸ್ತ್ರಜ್ಞರ ಅಭಿಪ್ರಾಯ.

ಇಲ್ಲಿ ಪ್ರಭಾವಿ, ರಾಜಕಾರಣಿ, ಸಿರಿವಂತ, ಸಾಹುಕಾರ, ಉದ್ದಿಮೆದಾರ, ಪ್ರಜಾಪ್ರಭುತ್ವದ ಸ್ವತಂತ್ರ ಸರಕಾರದಲ್ಲಿ ಅತ್ಯಾಚಾರ, ಕೊಲೆ, ಸುಲಿಗೆ, ವಂಚನೆ, **(13ನೇ ಪುಟಕ್ಕೆ)**

## ಸನ್ಮಾರ್ಗಕ್ಕೆ 32...

**1978ರ ಏಪ್ರೀಲ್ 23ರಂದು ತನ್ನ ಪ್ರಥಮ ಹೆಜ್ಜೆಯನ್ನಿಟ್ಟ ಪತ್ರಿಕೆ, ಪತ್ರಿಕಾರಂಗದಲ್ಲಿ ದಾಪುಗಾಲಿಡುತ್ತಾ ಇದೇ 23ಕ್ಕೆ 32 ಪೂರೈಸಿದ್ದು ಅತ್ಯಂತ ಸಂತಸದ ವಿಷಯ.**

ಹೆಸರಿಗೆ ತಕ್ಕಂತೆ ಸನ್ಮಾರ್ಗದಲ್ಲಿ ನಡೆದು, ಸಮಾಜದ ಕೆಡುಕುಗಳಿಂದ ತನ್ನನ್ನು ರಕ್ಷಿಸಿಕೊಂಡು ತನ್ನ ಘನತೆ ಬೆಳೆಸಿಕೊಂಡದ್ದು ಅದರ- ಗಾಂಭೀರ್ಯಕ್ಕೆ, ಪ್ರೌಢತ್ವಕ್ಕೆ, ವಿವೇಚನೆಯ ವಿವೇಕಕ್ಕೆ ಅದುವೇ ಸಾಟಿಯಾದುದಾಗಿದೆ. ಮಾನನೀಯ ಜ॥ ಇಬ್ರಾಹೀಮ್ ಸಯೀದ್‌ರ ದಕ್ಷ ಸಂಪಾದಕತ್ವದಲ್ಲಿ ಅರಳಿ ಬಂದ ಸನ್ಮಾರ್ಗದ ಹಾದಿ ಸುಗಮವಾದದ್ದೇನಲ್ಲ. ಪರಿಸ್ಥಿತಿಯ ಎಲ್ಲ ಒತ್ತಡಗಳನ್ನು ಎದುರಿಸಿ, ಪ್ರವಾಹದ ವಿರುದ್ಧ ಈಜಿ, ದಡ ಮುಟ್ಟಿದ, ಸಾಫಲ್ಯ ಕಂಡ, ಸಾರ್ಥಕ ಭಾವ ಸನ್ಮಾರ್ಗಕ್ಕೆ ಮೂಡಿ ಬರಬೇಕಾದರೆ ಅನೇಕ ಮಹನೀಯರ ಶ್ರಮದ ಬೆವರು ನದಿಯಂತೆ ಹರಿದಿದೆಯೆಂದರೆ ಉತ್ಪ್ರೇಕ್ಷೆಯ ಮಾತಲ್ಲ.

ಸತ್ಯವೇ ಪತ್ರಿಕೆಯ ಜೀವಾಳವಾದಾಗ, ನೈತಿಕತೆಯೇ ಅದರ ಪ್ರಮುಖ ಅಸ್ತ್ರವಾದಾಗ, ಏನೆಲ್ಲ ಎದುರಿಸಿ ಪ್ರಾಬಲ್ಯ ತೋರಿಸಬೇಕಾಗುತ್ತದೆ ಎನ್ನುವುದು ಓದುಗರಿಗೆ, ಶ್ರೀ ಸಾಮಾನ್ಯರಿಗೆ ಅರ್ಥವಾಗುವುದು ಕಠಿಣ ವಿಷಯ. ವಾರಕ್ಕೊಮ್ಮೆ ಪತ್ರಿಕೆ ಕೈ ಸೇರಿದಾಗ ಅದರ ಸತ್ವ ಹೀರುತ್ತಾ, ಸಾರ-ಜೀರ್ಣಿಸಿಕೊಳ್ಳುತ್ತಾ ವ್ಯಕ್ತಿತ್ವ ನಿರ್ಮಿಸಿಕೊಳ್ಳುವುದರಲ್ಲಿ ಸಿಗುವ ಆನಂದ ಅದರ ಕುರಿತು ನಡೆಯುವ ಚರ್ಚೆ, ಟೀಕೆ, ಟಿಪ್ಪಣಿ ಎಲ್ಲವೂ ಗಮನಾರ್ಹವೇ... ಸತತವಾಗಿ ಧರ್ಮದ ಕುರಿತು, ಧರ್ಮಸೂಕ್ಷ್ಮಗಳ ಕುರಿತು, ಅಪಾರ್ಥ... ತಪ್ಪು ಕಲ್ಪನೆಗಳ ಕುರಿತು ಮುಕ್ತ ಚರ್ಚೆಯ, ಸಂವಾದದ.. ಚಿಂತನ-ಮಂಥನದ ಒಂದು ಸಮರ್ಥ ವೇದಿಕೆಯಾಗಿ ಓದುಗರ ಹೆಮ್ಮೆಯ ವಿಷಯವಾಗಿ ನಾಡಿಗೆ ನಾಡೇ ಪ್ರಶಂಸಿಸುವ ಪತ್ರಿಕೆಯಾಗಿ ಹೊರಹೊಮ್ಮಿದ್ದು ಇದರ ಹೆಚ್ಚುಗಾರಿಕೆ.

ಈಗಿನ ಜಟಿಲ ವ್ಯವಸ್ಥೆಯಲ್ಲಂತೂ ಪತ್ರಿಕೆಯ ಮಹತ್ವ ಹಾಗೂ ಹೊಣೆಗಾರಿಕೆ ಇನ್ನೂ ಹೆಚ್ಚಿವೆ. ಸೂಕ್ಷ್ಮ ವಿಷಯಗಳನ್ನೆಲ್ಲಾ ಅಷ್ಟೇ ನವಿರಾದ ಶೈಲಿಯಲ್ಲಿ ಪ್ರಸ್ತುತಪಡಿಸಿ ಮನಸ್ಸನ್ನು ಹಗುರಗೊಳಿಸುವ, ಒತ್ತಡವನ್ನು ಕಡಿಮೆಗೊಳಿಸುವ ನಿರ್ಬಲರ ಧ್ವನಿಯಾಗಿ ನಿಂತು ಎತ್ತರದ ಧ್ವನಿಯಲ್ಲಿ ಸತ್ಯವನ್ನು ಬಿತ್ತರಿಸುವ ಕೆಲಸ ಸನ್ಮಾರ್ಗ ಕೈಗೊಂಡಿದ್ದು ನಿಜಕ್ಕೂ ಹೊಗಳಿಕೆಗೆ ತಕ್ಕುದಾದುದಾಗಿದೆ.

**□ ಡಾ॥ ಅಮಿರುದ್ದೀನ್ ಖಾಜಿ**

ಇಂದಿನ ಈ ಕಲುಷಿತ ವಾತಾವರಣದಲ್ಲಿ ಕೋಮು ಭಾವನೆ ಕೆರಳಿಸುವ ಎರಡು ಕೋಮುಗಳ ನಡುವೆ ಕಿಚ್ಚು ಹಚ್ಚುವ, ಪರಸ್ಪರ ದ್ವೇಷಿಸುವಂತೆ ಪರಿಸ್ಥಿತಿ ನಿರ್ಮಿಸುವ, ಅನಾವಶ್ಯಕವಾಗಿ ಟೀಕಿಸುವ ಇಡೀ ಜನಾಂಗದ ಮೇಲೆಯೇ ಸಂಶಯ ಹುಟ್ಟುವ ಹಾಗೆ ನೋಡಿಕೊಳ್ಳುವ, ಇಡೀ ಸಮುದಾಯದಲ್ಲಿ ಕೀಳರಿಮೆ ಹುಟ್ಟುವ ಹಾಗೆ ಬರಹಗಳು ಬರುತ್ತಿರುವಾಗ ಅವುಗಳಿಗೆ ಅಷ್ಟೆ ಸಮರ್ಥವಾಗಿ ಸುಳ್ಳಿನ ಪೊಳ್ಳನ್ನು ಹೊರಗೆಡವಿ, ಸುಳ್ಳನ್ನು ಸುಳ್ಳೆಂದು ಸಾಬೀತು ಪಡಿಸಿ, ಸತ್ಯದ ಧ್ವಜವನ್ನು ಎತ್ತಿ ಹಿಡಿಯುವ ಕೆಲಸವನ್ನು ಸನ್ಮಾರ್ಗ ಮಾಡುತ್ತಾ ಬಂದಿರುವುದು ಸ್ಪಷ್ಟಗೋಚರ, ಸಮಸ್ಯೆಯನ್ನು ಇಡಿಯಾಗಿ ಗ್ರಹಿಸಿ ಅದರ ಸೂಕ್ತ ಪರಿಹಾರವನ್ನು ಸ್ಪಷ್ಟಪಡಿಸುವ ನಿರ್ಭಿಡೆಯ ದಿಟ್ಟ ಹೆಜ್ಜೆ ಸನ್ಮಾರ್ಗದ್ದು.

ಭಯೋತ್ಪಾದನೆ, ಮೂಲಭೂತವಾದ, ಜಿಹಾದ್ ಇತ್ಯಾದಿಗಳ ವಿಶ್ಲೇಷಣೆ ವಂದೇ ಮಾತರಂ ವಿರೋಧವೇಕೆ? ಹಿಂಸೆ, ಅಹಿಂಸೆ, ಪ್ರಾಣಿದಯೆ ಇತ್ಯಾದಿ ಚರ್ಚಾ ವಿಷಯಗಳನ್ನು ಸಮರ್ಥವಾಗಿ ಉತ್ತರಿಸಿ ಸಮಾಧಾನಿಸುವ ಸನ್ಮಾರ್ಗವನ್ನು ಧ್ಯಾನಿಸದಿದ್ದರೆ ಹೇಗೆ?

ಇದು ಸದಭಿರುಚಿಯನ್ನೂ, ಸಾಹಿತ್ಯದ ಒಲವನ್ನು ಬೆಳೆಸುವ ತಕ್ಕಡಿ ನಡುವಿನ ಮುಳ್ಳಿನಂತೆ ನ್ಯಾಯಪರ, ನಿಷ್ಪಕ್ಷಪಾತ ಪತ್ರಿಕೆ. ಕುರ್‌ಆನ್ ವ್ಯಾಖ್ಯಾನ. ಪ್ರವಾದಿ ವಚನರತ್ನಗಳನ್ನು, ಓದುಗರ ಸಂಶಯ ಪರಿಹರಿಸುವ ಪ್ರಶ್ನೋತ್ತರಗಳನ್ನೂ ಮನಸ್ಸಿಗೆ ಮುದ ನೀಡುವ, ಬದುಕಿಗೆ ಹದ ನೀಡುವ ಮೌಲ್ಯಾಧಾರಿತ ಲೇಖನ, ಕತೆ-ಕವಿತೆ ಮಹಿಳಾ ವೇದಿಕೆ ಚಿಣ್ಣರ ಪುಟ ನಾಡಿನಾದ್ಯಂತ ಜರಗುವ ಕಾರ್ಯಕ್ರಮಗಳ ಮಾಹಿತಿ, ಸಮಾಜ ಮುಖಿ ಚಿಂತನೆ, ದಿಟ್ಟ ಸಂಪಾದಕೀಯ ಯೋಚನೆಗೆ ತೊಡಗಿಸುವ, ಪಾ. ಸಂಜೀವ ಬೋಳಾರರ ಲೇಖನಗಳು.... ನಾಡಿನ ಹಿರಿಯ ಪ್ರಾಜ್ಞವಿದ್ವಾಂಸರ ಪ್ರತಿಕ್ರಿಯೆಗಳಿಂದ ಮನೆ ಮಾತಾದ ಸನ್ಮಾರ್ಗವೀಗ ಯುವ ಪಡೆಯ ಕೈಯಲ್ಲಿ ಹೊಸರೂಪದಲ್ಲಿ ಹೊರ ಹೊಮ್ಮುತ್ತಿರುವುದು ಸ್ವಾಗತಾರ್ಹ, ಜ॥ ಇಬ್ರಾಹಿಮ್ ಸಈದ್‌ರು ಹಾಕಿ ಹೋದ ಹೆದ್ದಾರಿಯಲ್ಲಿ ಸುಗಮವಾಗಿ ಸಾಗಲಿ, ಓದುಗರ ವಿಶ್ವಾಸಗೆಲ್ಲಲಿ, ಸದಭಿರುಚಿಯ ಈ ಪಯಣ ಗಾವುದ ಗಾವುದ ದೂರ ಸಾಗಲಿ ಅದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯ, ಯುಕ್ತಿ ಅರ್ಥ ಎಲ್ಲವನ್ನೂ ಅಲ್ಲಾಹನು ದಯಪಾಲಿಸಲಿ.

ಅಮೀನ್

# ಬೆಂಗಳೂರಿನ ಮೌಲಾನ ಅಬ್ದುರ್ರಕೀಬ್ ಸಲಫಿ



## ಆಂದೋಲನದ ಹರಿಕಾರರು

**ನಿರೂಪಣೆ: ನೂರುಲ್ ಅಮೀನ್, ಪಕ್ಕಲಡ್ಕ**

"ಮೌಲಾನಾ ಅಬ್ದುಲ್ ರ್ರಕೀಬ್‌ರವರನ್ನು ಒಳಗೊಳ್ಳದ ಹರಿಕಾರರ ಲೇಖನಮಾಲೆ ಅಪೂರ್ಣವಾದೀತು" ಎಂದು ಕಾರ್ಯಕರ್ತ ನೋರ್ವ ಸಲಹೆ ನೀಡಿದಾಗ ವಿಷಯ, ಗಂಭೀರವಾಗಿ ಹೇಳಿದ್ದೋ ಅಥವಾ ತಮಾಷೆಯಾಗಿಯೋ ಎಂದು ಪರಿಗಣಿಸದೆ ನೇರ ಆ ಹಿರಿಯರ ಭೇಟಿ-ಅನುಭವದ ಹಂಚಿಕೆಗಾಗಿ ಅವರ ಮನೆಯತ್ತ ಹೋದೆ."

ಶಿವಾಜಿನಗರ ಬೆಂಗಳೂರಿನ ದೊಡ್ಡ ವ್ಯಾಪಾರ ಕೇಂದ್ರ. ಲಾಲ್ ಮಸ್ಜಿದ್‌ನಿಂದ ಫರ್ಲಾಂಗಿನಷ್ಟು ದೂರದಲ್ಲಿರುವ ಮೌಲಾನರ ಮನೆ ಪಕ್ಕಕ್ಕೆ ತಾಗಿ ಕೊಂಡಿರುವ 'ದಾವಾ ಬುಕ್ ಸ್ಟಾಲ್' ತುಂಬಾ ಹಳತಾದ ಕೆಲವು ಪುಸ್ತಕಗಳು ಅಲ್ಲಿ ಕಂಡು ಬಂದ ಕಾರಣ ಈ ಮಳಿಗೆಗೆ ಎಷ್ಟು ಪ್ರಾಯವೆಂದು ಪ್ರಶ್ನಿಸಿದೆ. 50 ವರ್ಷ ಕಳೆಯಿತೆಂದರು.

1930ರ ಡಿಸೆಂಬರ್ 30ರಂದು ಜನಿಸಿದ ಮೌಲಾನರಿಗೆ ಈಗ 80ರ ಹರೆಯ ಕಳೆದ 50 ವರ್ಷಗಳಿಂದ ಇಸ್ಲಾಮೀ ಸಾಹಿತ್ಯದ ಮಳಿಗೆಯೊಂದನ್ನು ನಡೆಸುತ್ತಿದ್ದಾರೆ. ಯುವಕರನ್ನು ನಾಚಿಸುವ ಲವಲವಿಕೆ. ಈಗಲೂ ಸ್ವಯಂತಾನೇ ಬೆಳಿಗ್ಗೆ ಪುಸ್ತಕ ಮಳಿಗೆ ತೆರೆದು ರಾತ್ರಿ ಒಂಭತ್ತರ ವರೆಗೂ ನಡೆಸುತ್ತಾರೆ. ಅನುಭವ ಹಂಚಿಕೆಯಿಂದ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ಹಚ್ಚಬಹುದೆಂದಾಗ ಸ್ವಲ್ಪ ಹೊತ್ತು ಬಿಡುವು ಮಾಡಿ ಗತಕಾಲದ ನೆನಪಿನ ಪುಟಗಳಿಂದ ತೊಡಗಿ ಪ್ರಸಕ್ತ ಆಂದೋಲನದ ನಡೆಯತ್ತ ನೋಟ ಹರಿಯ ಬಿಟ್ಟರು.

ತಂದೆ ರಫೀಉದ್ದೀನ್ ಮೂಲತಃ ತಮಿಳು ನಾಡಿನವರು. ತಾಯಿ ಬೆಂಗಳೂರಿನವರು ಮೂವರು ಸಹೋದರರು, ಓರ್ವ ತಂಗಿ ಭೂ ಮಾಲಿಕ ಕುಟುಂಬ ಮಾತ್ರವಲ್ಲ ಪ್ರತಿಷ್ಠಿತ (ಧಾರ್ಮಿಕ ವಿದ್ಯಾಭ್ಯಾಸ) ಕೌಟುಂಬಿಕ ಹಿನ್ನೆಲೆಯಲ್ಲಿ ಮೌಲಾನರು ಪಾರಂಗತರೇ. ಆಂದೋಲನಕ್ಕೆ ಎಲ್ಲಾ ದಿಕ್ಕಿನಿಂದ ಎಲ್ಲಾ ಕರ್ಮಶಾಸ್ತ್ರಿಯ ವರ್ಗದಿಂದ ಅಲ್ಲದೆ ತಬ್ಲೀಗ್ ಜಮಾಅತ್, ಅಹ್ಲೆ ಹದೀಸ್ ಸಂಘಟನೆಗಳಿಂದಲೂ ವಿದ್ವಾಂಸರು ಸಾಮಾನ್ಯ ಜನರು, ಸುಶಿಕ್ಷಿತರು ಹರಿದು ಬರುತ್ತಿದ್ದ ಆರಂಭಿಕ ಕಾಲಘಟ್ಟ ಮೌಲಾನ ಅಬ್ದುರ್ರಕೀಬ್ ಸಾಹೇಬರದ್ದು.

ತಂದೆಯನ್ನೊಳಗೊಂಡ ಇಡೀ ಕುಟುಂಬವೇ ಅಹ್ಲೆ ಹದೀಸ್‌ನ ವಕ್ತಾರರು. ಆದ ಕಾರಣ ಕಂದಾಚಾರ, ಮೌಢ್ಯ, ನವೀನಾಚಾರ ಇವೆಲ್ಲವನ್ನೂ ಎದುರಿಸುವ ಪ್ರತಿರೋಧಿಸುವ ಸಂದರ್ಭ ಎದುರಾಗಲಿಲ್ಲ. ಆದರೆ ವೈಚಾರಿಕ ಸಂಘರ್ಷ ವಿದ್ವಾಂಸರ ನಡುವಿನ ಓರ್ವ ಮೌಲಾನ ಎಂಬ ನೆಲೆಯಲ್ಲಿ ಅಹ್ಲೆ ಹದೀಸ್‌ನವರೊಂದಿಗೆ ತುಂಬಾ ಬಾರಿ ವಾದ ವಿವಾದದ ಮೂಲಕ ಆಂದೋಲನದ ಮೂಲ ಉದ್ದೇಶ ಮನವರಿಕೆ ಮಾಡುವ ಅನಿವಾರ್ಯತೆ ಎದುರಾಗುತಿತ್ತು.

ಈಗಿನಂತಿರಲಿಲ್ಲ ಆಗಿನ ಪರಿಸ್ಥಿತಿ. ಮೌಲಾನ ಅಬುಲ್ ಆಲಾ ಮೌದೂದಿಯವರು ಸಮಗ್ರ ಇಸ್ಲಾಮನ್ನು ಮಂಡಿಸಿದಾಗ ಆಂಶಿಕವಾಗಿ ಅಂಗೀಕರಿಸುತ್ತಿದ್ದವರೂ, ತಾವು ಯಾವ ಸಂಘಟನೆಯಲ್ಲಿ ಸಕ್ರಿಯರಾಗಿದ್ದೇವೆಯೋ ಅದು ಆಂಶಿಕವಾಗಿ ಮಾತ್ರ ಇಸ್ಲಾಮನ್ನು ಪರಿಚಯಿಸುತ್ತದೆ ಎಂದು ಮನಗಂಡವರ ಪೈಕಿ ಮೌಲಾನ ಅತಾವುಲ್ಲಾ ಉಮರಿ ಓರ್ವರಾಗಿದ್ದರು. ಈ ಮೊದಲು "ನಾನು ಶೇಖುಲ್ ಹದೀಸ್ ಇಸ್ಮಾಈಲ್ ಸಾಬ್ ಉಮರಾಬಾದ್ ಇವರ ಗರಡಿಯಲ್ಲಿ ದೀನಿ ವಿದ್ಯಾಭ್ಯಾಸ ಪಡೆದೆ. ಬೆಂಗಳೂರಿಗೆ ತಂದೆಯವರು ವರ್ಗವಾದ ಬಳಿಕ ನನ್ನನ್ನು ಮೌಲಾನ ಅತಾವುಲ್ಲಾ ಉಮರಿಯವರ ಸಂಪರ್ಕಕ್ಕೆ ಬಿಟ್ಟರು. ಅವರ 10 ಮಂದಿ ಶಿಷ್ಯರ ಪೈಕಿ ನಾನೂ ಒಬ್ಬ" ಎಂದು ಹೇಳಿದರು.

ಮೌಲಾನ ಅತಾವುಲ್ಲಾ ಉಮರಿಯವರು ಇಸ್ಲಾಮೀ ಆಂದೋಲನದ ಕರೆಗೆ ಓಗೊಟ್ಟು ಅದರ ಆರಂಭಿಕ ಸದಸ್ಯತ್ವ ಪಡೆದವರಾಗಿದ್ದರು. ಬದುಕಿನ ಕೊನೆವರೆಗೂ ಆರಾಧನಾ ಕ್ರಮದಲ್ಲಿ ಅಹ್ಲೆ ಹದೀಸ್ ಕರ್ಮಶಾಸ್ತ್ರವನ್ನು ಅಂಗೀಕರಿಸುತ್ತಿದ್ದರು. ಮೈಸೂರು ಹಲ್ಕಾವೆಂದು ಸಂಘಟನೆಯಲ್ಲಿ ಗುರುತಿಸುತ್ತಿದ್ದ ಕಾಲದಲ್ಲಿ 1951ರ ವರೆಗೆ ರೋಗ ಗ್ರಸ್ತರಾಗುವವರೆಗೂ ಅಮೀರ್‌ನ ಹುದ್ದೆಯನ್ನು ವಹಿಸಿದ್ದರು. ಮದ್ರಾಸ್, ಮೈಸೂರು (ಕರ್ನಾಟಕ) ಪ್ರದೇಶಗಳನ್ನೊಳಗೊಂಡ ಒಂದು ಹಲ್ಕಾ(ಘಟಕ) ಚಾಲ್ತಿಯಲಿತ್ತಂದು. ಡಾ। ಝಿಯವುಲ್ ಹುದಾ ಬಿಹಾರದ ಪಟ್ನಾದಿಂದ ಬಂದವರು, ಒಂದು ವರ್ಷದ ಅವಧಿಗೆ ಅಧ್ಯಕ್ಷರಾಗಿದ್ದರು. ನಾನೂ ಅತಾವುಲ್ಲಾ ಉಮರಿಯವರಿಂದ ಆಂದೋಲನದ ಧ್ಯೇಯ ಧೋರಣೆಗಳನ್ನು ಕೇಳಿ ಪ್ರಭಾವಿತನಾದೆ. ಮೌಲಾನರವರು ಲಾಲ್ ಮಸ್ಜಿದ್‌ನಲ್ಲಿ ವಾರದ ಇಜ್ತಿಮಾ (ಸಭೆ) ನಡೆಸುತ್ತಿದ್ದರು. ಹೊಸ ಹೊಸ ಕ್ರಾಂತಿಕಾರಿ ವಿಚಾರಗಳನ್ನು ಪ್ರಸಕ್ತ ಸನ್ನಿವೇಶಕ್ಕೆ ಹೊಂದಿಸಿಕೊಂಡು ಇಸ್ಲಾಮೀ ದೃಷ್ಟಿಕೋನವನ್ನು ಮಂಡಿಸುತ್ತಿದ್ದರು. 1947ರಿಂದ 1951ರ ವರೆಗಿನ ಸ್ಥಿತಿಯಲ್ಲಿ ಜಮಾಅತ್ ಕೇವಲ ಸೇವೆ ಮತ್ತು ತಪ್ಪು ತಿಳುವಳಿಕೆಗಳನ್ನು ದೂರೀಕರಿಸುವುದಕ್ಕೇನೇ ಸಮಯ ವ್ಯಯಿಸಬೇಕಾದ ಅನಿವಾರ್ಯತೆ ಎದುರಾಯಿತು. ದೇಶ ವಿಭಜನೆಯಾದಾಗ ಸಂಘಟನೆ, ಧ್ಯೇಯ ಧೋರಣೆ ದೇಶದ ಸಂವಿಧಾನಕ್ಕೆ ವಿರೋಧವಾಗಿರಬಾರದಂತಹ ಒಂದು ಸತ್ವ ಪರೀಕ್ಷೆಯ ಕಾಲಘಟ್ಟವಾಗಿತ್ತು. ಒಂದೆಡೆ ರಕ್ತಪಾತ, ಇನ್ನೊಂದೆಡೆ ಕೋಮುದಳ್ಳುರಿ, ಅಪನಂಬಿಕೆಗಳ ಗುಡಾರ, ಫ್ಯಾಸಿಸ್ಟ್ ಶಕ್ತಿಗಳ ಬೇಳೆ ಬೇಯಿಸುವಿಕೆ ಎಲ್ಲಿಯ ವರೆಗೆಂದರೆ ಅದೆಷ್ಟೋ ಉಲಮಾಗಳು(ಇಸ್ಲಾಮೀ ವಿದ್ವಾಂಸರು) ಖುತುಬಾಗಳಲ್ಲಿ, ಭಾಷಣಗಳಲ್ಲಿ ಸಂಘಟನೆಯ ಅವಸಾನವಾಗಿದೆಯೆಂಬ ಹೇಳಿಕೆಯನ್ನು ನೀಡುತ್ತಿದ್ದರು. (ಮುಂದುವರಿಯುವುದು)

## ಅವರು ಕೇಳೋದು ಒಂದಿಷ್ಟು ಪ್ರೀತಿ, ಅದೂ ಇಲ್ಲವಾ?

**✍ ಅಬೂ ಝೀಶಾನ್, ರಿಯಾದ್**

ಒಂದು ದೊಡ್ಡ ಸೇಬಿನ ಮರವಿತ್ತು. ಒಂದು ಸಣ್ಣ ಮಗು ಆ ಮರದೊಂದಿಗೆ ಯಾವಾಗಲೂ ಆಟವಾಡುತ್ತಿತ್ತು. ಕೆಳಗೆ ಬಿದ್ದ ಸೇಬನ್ನು ತಿನ್ನುತ್ತಿತ್ತು. ಅದರ ಬುಡದ ನೆರಳಿನಲ್ಲಿ ಮಲಗುತ್ತಿತ್ತು. ಹೀಗೆ ದಿನಗಳುರುಳುತ್ತಿದ್ದವು. ಮಗು ದೊಡ್ಡದಾಯಿತು. ಅದು ಈಗ ಆ ಸೇಬಿನ ಮರದೊಂದಿಗೆ ಆಟ ವಾಡುತ್ತಿರಲಿಲ್ಲ. ಒಂದು ದಿನ ಆ ಬಾಲಕ ಸೇಬಿನ ಮರದ ಹತ್ತಿರ ಬರುತ್ತಾನೆ. ಆಗ ಮರ ಹೇಳಿತು. "ಬಾ ನನ್ನೊಂದಿಗೆ ಆಟವಾಡು." ಬಾಲಕ ಉತ್ತರಿಸಿದ "ನಿನ್ನೊಂದಿಗೆ ಆಟವಾಡಲು ನಾನು ಈಗ ಚಿಕ್ಕ ಮಗು ಅಲ್ಲ. ನಾನೀಗ ಆಟಿಕೆಯೊಂದಿಗೆ ಆಟ ವಾಡುತ್ತೇನೆ. ನನಗೆ ಆಟಿಕೆ ಖರೀದಿಸಲು ಹಣ ಬೇಕು. ಆಗ ಮರ "ನನ್ನೊಂದಿಗೆ ಹಣ ಇಲ್ಲ, ಆದರೆ ನನ್ನ ಮರದ ಲ್ಲಿರುವ ಸೇಬನ್ನು ತೆಗೆದು ಮಾರಾಟ ಮಾಡು ನಿನಗೆ ಹಣ ಸಿಗುತ್ತದೆ." ಬಾಲಕ ಎಲ್ಲ ಸೇಬುಗಳನ್ನು ಕಿತ್ತುಕೊಂಡು ಹೊರಟು ಹೋದ. ಆತ ಆ ಸೇಬುಗಳನ್ನು ಮಾರಿ, ಅದರಿಂದ ಆಟಿಕೆಗಳನ್ನು ಖರೀದಿಸಿದ ನಂತರ ಆತ ಮರದ ಹತ್ತಿರ ತಿರುಗಿಯೂ ಬರಲಿಲ್ಲ. ಸೇಬಿನ ಮರ ತುಂಬಾ ದುಃಖಿಸಿತು. ದಿನಗಳುರುಳಿದುವು. ಆ ಬಾಲಕ ಮತ್ತೊಮ್ಮೆ ಮರದ ಹತ್ತಿರ ಬಂದ ಆತ ಈಗ ಯುವಕನಾಗಿದ್ದ. ಮರ ಹೇಳಿತು, "ನಾನೀಗ ಒಬ್ಬಂಟಿಯಾಗಿದ್ದೇನೆ. ನನ್ನ ನೆರಳಿನಲ್ಲಿ ಬಂದು ಕುಳಿತುಕೋ!" ಆತ ಉತ್ತರಿಸಿದ, "ನನಗೆ ಸಮಯ ಇಲ್ಲ, ನಾನು ನನ್ನ ಕುಟುಂಬಕ್ಕಾಗಿ ದುಡಿಯುತ್ತಿದ್ದೇನೆ. ಅವರಿಗಾಗಿ ಮನೆ ಕಟ್ಟಿಸಲಿಕ್ಕಿದೆ. ಅದಕ್ಕಾಗಿ ಹಣ ಬೇಕಾಗಿದೆ." ಮರ ಹೇಳಿತು, "ನನ್ನ ಹತ್ತಿರ ಹಣ ಇಲ್ಲ. ಆದರೆ ನೀನು ನನ್ನ ರೆಂಬೆಗಳನ್ನು ಕತ್ತರಿಸಿ ಅದರಿಂದ ಮನೆ ಕಟ್ಟು." ಆತ ತುಂಬಾ ಸಂತೋಷ ಪಟ್ಟ. ಆ ಮರದ ಎಲ್ಲ ರೆಂಬೆಗಳನ್ನು ಕತ್ತರಿಸಿ ಮನೆ ಕಟ್ಟಿಸಿದ ಆ ನಂತರ ಆತ ಅನೇಕ ಸಮಯ ಕಳೆದರೂ ತಿರುಗಿ ಬರಲಿಲ್ಲ. ಮರ ಒಂಟಿಯಾಯಿತು. ವರುಷಗಳುರುಳಿದುವು. ಆತ ಮತ್ತೆ ತಿರುಗಿ ಮರದ ಹತ್ತಿರ ಬಂದ. ಈಗ ಆತ ಮುದುಕನಾಗಿದ್ದ, ಮುಖ ಕಳೆಗುಂದಿತ್ತು ತುಂಬಾ ಬೇಸರದಲ್ಲಿದ್ದ.

ಮರ ಕೇಳಿತು, "ನೀನೇಕೆ ತುಂಬಾ ಬೇಸರದಲ್ಲಿದ್ದಿಯಾ? ಬಹುಶಃ ನಾನು ನಿನಗೆ ಸಹಾಯ ಮಾಡಲು ಆಗಿರುತ್ತಿದ್ದರೆ... ನನ್ನಲ್ಲೀಗ ಸೇಬುಗಳಿಲ್ಲ, ರೆಂಬೆಗಳಿಲ್ಲ ಹಾಗೂ ನಿನಗೆ ಕುಳಿತುಕೊಳ್ಳಲು ನೆರಳು ಕೂಡಾ ಇಲ್ಲ. ನಿನಗೆ ಕೊಡಲು ನನ್ನ ಬಳಿ ಏನೂ ಇಲ್ಲ." ಆತ ಉತ್ತರಿಸಿದ, "ನಾನು ನನ್ನ ಜೀವನದಿಂದ ತುಂಬಾ ಬಳಲಿದ್ದೇನೆ. ನಾನೀಗ ಒಬ್ಬಂಟಿ. ನನಗೆ ನಿನ್ನ ಅಗತ್ಯವಿದೆ. ನಾನು ನಿನ್ನ ಬುಡದಲ್ಲಿ ಕುಳಿತುಕೊಳ್ಳಲೇ?" ಆತ ಅದರ ಬುಡದಲ್ಲಿ ಕುಳಿತುಕೊಂಡ ಹಾಗೂ ಇಬ್ಬರೂ ಸಂತೋಷದಿಂದ ಕಣ್ಣೀರಿಳಿಸಿದರು.

ಆ ಬಾಲಕ ಸ್ವಾರ್ಥಿ ಹಾಗೂ ಕ್ರೂರನಾಗಿದ್ದನೇ? ಇಲ್ಲ, ನಾವೆಲ್ಲರೂ ನಮ್ಮ ತಂದೆ ತಾಯಿಯರೊಂದಿಗೆ ವರ್ತಿಸುವ ರೀತಿಯೇ ಹೀಗೆ. ಆ ಸೇಬಿನ ಮರ ನಮ್ಮ ತಂದೆ-ತಾಯಿಯರ ಹಾಗೆ ನಾವು ಸಣ್ಣದಿರುವಾಗ ಅವರೊಂದಿಗೆ ಆಟ ವಾಡಲು ನಮಗೆ ತುಂಬಾ ಸಂತೋಷವಾಗು ತ್ತದೆ. ನಾವು ದೊಡ್ಡವರಾದಾಗ ಅವರನ್ನು ಒಬ್ಬಂಟಿಯಾಗಿ ಬಿಟ್ಟು ಹೋಗುತ್ತೇವೆ. ನಾವು ಕಷ್ಟದಲ್ಲಿರುವಾಗ ಮಾತ್ರ ಅವರನ್ನು ನೆನಪಿಸುತ್ತೇವೆ. ತಂದೆ ತಾಯಿಯರಿಗಾಗಿ ನಮಗೆ ಸಮಯವಿರುವುದಿಲ್ಲ. ಆದರೆ ಎಲ್ಲ ಪರಿಸ್ಥಿತಿಯಲ್ಲೂ ಮಾತಾಪಿತರು ಅವರಲ್ಲಿರುವ ಎಲ್ಲವನ್ನೂ ಕೊಡುತ್ತಾರೆ. ನಮ್ಮ ಸಂತೋಷಕ್ಕಾಗಿ ನಮ್ಮ ಕಷ್ಟಗಳ ಪರಿಹಾರಕ್ಕಾಗಿ ಅವರು ಏನು ಬೇಕಾದರೂ ಮಾಡುತ್ತಾರೆ. ಅದರ ಬದಲಿಗೆ ಅವರಿಗೆ ಬೇಕಾಗಿರುವುದು ಸ್ವಲ್ಪ ಸಮಯ ಹಾಗೂ ಸದ್ವರ್ತನೆ. ಮಾತಾಪಿತರನ್ನು ಪ್ರೀತಿಸ ಬೇಕು ಹಾಗೂ ಅವರಿಗಾಗಿ ಸಮಯ ಕೊಡ ಬೇಕು. ನಾವು ಸಂತೋಷವಾಗಿದ್ದರೆ ಅವರಿಗೆ ಅಷ್ಟೇ ಸಾಕು. ಅವರನ್ನೆಂದೂ ಮರೆಯಬಾರದು. ಒಂದು ವಿಷಯ ಸದಾ ನೆನಪಿನಲ್ಲಿಡಬೇಕು. ಮಕ್ಕಳನ್ನು ಅಲ್ಲಾಹನು ಎಷ್ಟು ಬೇಕಾದರೂ ದಯಪಾಲಿಸಬಹುದು. ಆದರೆ ಮಾತಾಪಿತರನ್ನು ಕೇವಲ ಒಮ್ಮೆ ಮಾತ್ರ ಅಲ್ಲಾಹನು ದಯಪಾಲಿಸುವುದು.

## ಜ್ಞಾನ ದಿಗಂತದ...

ಅಭಿವೃದ್ಧಿಯ ಪಥದಲ್ಲಿ
ಆವರಿಸುತ್ತಿದೆ ತಮಸ್ಸು
ಉಳ್ಳವರ ಹಿಡಿತಕ್ಕೆ
ನಲುಗಿ ಹೋಗಿದೆ
ಭವಿಷ್ಯತ್ತಿನ ಕನಸು

ವ್ಯಾಪಾರೀಕರಣಗೊಂಡಿದೆ ಸಮಾಜ
ಅರಿತುಕೊಳ್ಳುತ್ತಿಲ್ಲ ಶಿಕ್ಷಿತ ಮನುಜ
ತಗ್ಗಿದ್ದ ಕಡೆ ನೀರು ಹರಿಯುವಂತೆ
ಕೆಲವರ ಕಡೆ ಬರಿ ನೋಟಿನ ಕಂತೆ
ಬಡವರಿಗೆ ಚಿಂತೆಯ ಮೇಲೆ ಚಿಂತೆ

ಬಿಕರಿಯಾಗುತ್ತಿದೆ ಜ್ಞಾನ
ಎಲ್ಲೆಲ್ಲೂ ಕಾಂಚಾಣವೇ ಪ್ರಧಾನ
ಉಳ್ಳವರಿಗೆ ಎಲ್ಲೆಡೆ ಮನ್ನಣೆ
ಇಲ್ಲದವರ ಬಾಳು ಮುರಿದ
ಬಾಳೆಯ ಗೊನೆ

ಕಲುಷಿತಗೊಂಡಿದೆ ಪ್ರತಿ ಕ್ಷೇತ್ರ
ಎಲ್ಲೆಲ್ಲೂ ಜಾತಿ ಕಲಹದ ಕುರುಕ್ಷೇತ್ರ
ತೋರಿಸುವರ್‍ಯಾರು ಇವರಿಗೆ
ಜ್ಞಾನ ದಿಗಂತದ ಸುಕ್ಷೇತ್ರ

**ಮಹಾಂತೇಶ, ಬಾದಾಮಿ**

# ಪ್ರವಾದಿ ಯೂಸುಫ್(ಅ) ಮತ್ತು ಸುಳ್ಳು?

**ಮುಹಮ್ಮದ್ ಅಹ್ಮದ್, ಮಂಗಳೂರು**

**● ಕುರ್‌ಆನ್ ಅಧ್ಯಯನ ನಡೆಸುತ್ತಾ ಇರುವಾಗ ಒಂದು ಸಂದೇಹ ಮೂಡಿತು. ಸೂರಾ ಯೂಸುಫ್‌ನ 70ನೇ ಸೂಕ್ತದಲ್ಲಿ ಯೂಸುಫ್‌ರು(ಅ) ತಮ್ಮ ಸಹೋದರರ ಸಾಮಾನುಗಳನ್ನು ಹೇರಿಸುತ್ತಿರುವಾಗ ತಮ್ಮ ತಮ್ಮನ ಸರಕಿನಲ್ಲಿ ಒಂದು ಲೋಟವನ್ನು ಇಟ್ಟರು. ತರುವಾಯ ಕೂಗುವವನೊಬ್ಬನು 'ಓ ಯಾತ್ರಿಕ ತಂಡದವರೇ, ನೀವು ಕಳ್ಳರಾಗಿರುತ್ತೀರಿ' ಎಂದು ಕೂಗಿದನು. ಇಲ್ಲಿ ಸಂಶಯವೇನೆಂದರೆ, ಯೂಸುಫ್‌ರು ತಾನೇ ಲೋಟವನ್ನಿರಿಸುವುದು ಮತ್ತು ಕಳ್ಳತನದ ಆರೋಪ ಹೊರಿಸುವುದು ವಸ್ತುಸ್ಥಿತಿಗೆ ವಿರುದ್ಧವಲ್ಲವೇ? ಅದು ಸುಳ್ಳು ಹೇಳಿದಂತೆ ಮತ್ತು ಸುಳ್ಳಿನ ಕೃತ್ಯದಂತೆ ಅಲ್ಲವೇ? ಓರ್ವರು ಪ್ರವಾದಿಯಾಗಿದ್ದೂ ಸುಳ್ಳು ಹೇಳ ಬಲ್ಲರೇ? ನಾವು ಎಲ್ಲ ಪ್ರವಾದಿಗಳನ್ನು ಸತ್ಯಸಂಧರೆಂದು ನಂಬಿದ್ದೇವೆ. ಅವರ ಮೇಲೆ ವಿಶ್ವಾಸವಿರಿಸುವುದೇ ಅವರು ಸತ್ಯವಂತರೆಂಬ ಹಾಗೂ ಎಂದೂ ಸುಳ್ಳು ಅವರಿಂದ ಪ್ರಕಟವಾಗುವುದಿಲ್ಲ ಎಂಬ ಕಾರಣಕ್ಕೆ. ಆದ್ದರಿಂದ ಈ ಗೊಂದಲವನ್ನು ನಿವಾರಿಸ ಬೇಕಾಗಿ ವಿನಂತಿಸುತ್ತೇನೆ.**

❍ ಪವಿತ್ರ ಕುರ್‌ಆನನ್ನು ಮೇಲಿಂದ ಮೇಲೆ ಅರ್ಥಸಹಿತ ಓದುವುದರಿಂದ ಇಂತಹ ಸಂದೇಹಗಳು ಮೂಡುವುದರಲ್ಲಿ ಸಂಶಯವಿಲ್ಲ. ಕುರ್‌ಆನ್ ಓದಿ ಅದರ ಮೇಲೆ ಚಿಂತನೆ ನಡೆಸುವಂತೆ ಸ್ವಯಂ ಕುರ್‌ಆನ್ ಕರೆ ಕೊಡುತ್ತದೆ, 'ಅಫಲಾ ಯತದಬ್ಬರೂನಲ್ ಕುರ್‌ಆನ್' (ಇವರೇನು ಕುರ್‌ಆನಿನ ಬಗ್ಗೆ ಚಿಂತನೆ ನಡೆಸುವುದಿಲ್ಲವೇ?) (ಅನ್ನಿಸಾ: 82)

ಮೊತ್ತಮೊದಲಾಗಿ, ಯೂಸುಫ್(ಅ) ತನ್ನ ತಮ್ಮನನ್ನು ತನ್ನ ಬಳಿ ಹಿಡಿದಿರಿಸಲಿಕ್ಕಾಗಿ ಒಂದು ಯೋಜನೆ ತಯಾರಿಸಿ ಅದರಲ್ಲಿ ಯಶಸ್ವಿಯಾದರೆಂದು ಕುರ್‌ಆನ್ ಹೇಳುವುದಿಲ್ಲ. ಅಲ್ಲಿ ಒಂದು ಪ್ರಕರಣ ನಡೆದಿರುವುದಂತೂ ಸತ್ಯ. ಆದರೆ ಅದನ್ನು ಯೂಸುಫ್‌ರ ಯೋಜನೆಯೆಂದು ಹೇಳದೆ ಕುರ್‌ಆನ್, ಅಲ್ಲಾಹನು ತನ್ನ ಯೋಜನೆಯ ಮೂಲಕ ಯೂಸುಫ್‌ರನ್ನು ಸಮರ್ಥಿಸಿದನು ಎಂದು ಹೇಳುತ್ತದೆ. "ಹೀಗೆ ನಾವು ನಮ್ಮ ಯುಕ್ತಿಯಿಂದ ಯೂಸುಫ್‌ರನ್ನು ಸಮರ್ಥಿಸಿದೆವು." (12:76)

ಎರಡನೆಯದಾಗಿ, ಯೂಸುಫ್‌ರು ತಾನೇ ಇರಿಸಿದ್ದ ಲೋಟವನ್ನು ತನ್ನ ಸಹೋದರರ ಚೀಲಗಳಲ್ಲಿ ಹುಡುಕಿದರು. ಕೊನೆಯಲ್ಲಿ ಬಿನ್‌ಯಮೀನ್ ಎಂಬ ತನ್ನ ಕಿರಿಯ ಹಾಗೂ ಖಾಸಾ ಸಹೋದರನ ಚೀಲದಲ್ಲಿ ಸಿಕ್ಕಿತು ಎಂಬುದು ಸರಿಯಲ್ಲ. ಕುರ್‌ಆನ್ ಅದನ್ನು ಸ್ಪಷ್ಟವಾಗಿ ಸಾರಿಲ್ಲ. ಕಳ್ಳತನದ ಆರೋಪವನ್ನು ಯೂಸುಫ್‌ರು ಹೊರಿಸಲಿಲ್ಲ. ಬದಲಾಗಿ ಹುಡುಕಾಟ ನಡೆಸಿದ್ದು 'ನೀವು ಕಳ್ಳರಾಗಿರುತ್ತೀರಿ' ಎಂದು ಘೋಷಿಸಿದವನು ಎಂದು ಕುರ್‌ಆನಿನಿಂದ ತಿಳಿಯುತ್ತದೆ. ಅದು ಬುದ್ಧಿಗೆ ನಿಲುಕುವಂತಹ ಸಮರ್ಥನೆಯಾಗಿದೆ.

ಮೂರನೆಯದಾಗಿ, ಯಾವ ವಸ್ತು ಅಲ್ಲಿ ಕಾಣೆಯಾಗಿತ್ತೋ ಮತ್ತು ಯಾವುದನ್ನು ಬಿನ್‌ಯಮೀನ್‌ರ ಚೀಲದಲ್ಲಿ ಇರಿಸಲಾಗಿತ್ತೋ ಅವೆರಡೂ ಒಂದೇ ಅಲ್ಲ. ಬದಲಾಗಿ ಅವು ಎರಡು ಪ್ರತ್ಯೇಕ ವಸ್ತುಗಳಾಗಿವೆ. ಚೀಲದಲ್ಲಿರಿಸಲಾದ ವಸ್ತುವನ್ನು ಕುರ್‌ಆನ್ 'ಸಿಕಾಯಃ' (ನೀರು ಕುಡಿಯುವ ಲೋಟ) ಎಂದು ಹೇಳಿದ್ದರೆ, ಕಾಣೆಯಾಗಿದ್ದ ವಸ್ತುವಿಗೆ ಕುರ್‌ಆನ್ 'ಸುವಾಲ್' (ಅಳತೆ ಮಾಡುವ ಪಾತ್ರೆ) ಎಂಬ ಪದವನ್ನು ಬಳಸಿದೆ. ಸುವಾಲ್ ಕಾಣೆಯಾಗಿದೆಯೆಂದು ಸರಕಾರಿ ಸಿಬ್ಬಂದಿಗಳು ಹೇಳಿದ್ದರೇ ಹೊರತು ಯೂಸುಫ್(ಅ) ಅದು ಕಳವಾಗಿದೆಯೆಂದು ಹೇಳಿರಲಿಲ್ಲ.

ಯೂಸುಫ್(ಅ) ಒಂದು ದೊಡ್ಡ ಸಾಮ್ರಾಜ್ಯದ ಆಡಳಿತಾಧಿಕಾರಿಯಾಗಿದ್ದರು. ಅಲ್ಲಿಗೆ ಊರಿನಿಂದಲೂ ಪರವೂರುಗಳಿಂದಲೂ ಜನರು ಧಾನ್ಯಕ್ಕಾಗಿ ಬರುತ್ತಲೇ ಇದ್ದರು. ಧಾನ್ಯ ಅಳೆದು ಕೊಡಲಿಕ್ಕಾಗಿ ನೀರು ಕುಡಿಯುವ ಲೋಟ (ಸಿಕಾಯಃ)ವನ್ನೇ ಉಪಯೋಗಿಸಲಾಗುತ್ತಿತ್ತೆಂಬುದು ಬುದ್ಧಿಗೆ ನಿಲುಕದ ವಿಷಯ. ಸರಕಾರಿ ಸಿಬ್ಬಂದಿಗಳ ಹೇಳಿಕೆಯ ಪ್ರಕಾರ, ಕಾಣೆಯಾಗಿರುವುದು ಅಳೆಯುವ ಪಾತ್ರೆಯಾಗಿತ್ತು. ಆದರೆ ಬಿನ್‌ಯಮೀನ್‌ನ ಚೀಲದಲ್ಲಿ ಸಿಕ್ಕಿದ್ದು ನೀರು ಕುಡಿಯುವ ಲೋಟ (ಸಿಕಾಯಃ) ಆಗಿತ್ತು.

ಯೂಸುಫ್‌ರ ಸಹೋದರರು ಧಾನ್ಯ ಖರೀದಿಸಲಿಕ್ಕಾಗಿ ಮೊದಲ ಬಾರಿ ಬಂದಿದ್ದಾಗ ಬಿನ್‌ಯಮೀನ್‌ರನ್ನು ಕರೆತರಲಿಲ್ಲ. ಅವರನ್ನು ತಂದೆ ಕಳಿಸಿರಲಿಲ್ಲ. ಏಕೆಂದರೆ ಯೂಸುಫ್‌ರನ್ನು ಆ ಸಹೋದರರು ಈ ಹಿಂದೆ ಏನು ಮಾಡಿದ್ದರೆಂಬ ಅನುಭವ ಅವರಿಗಿತ್ತು. ಆ ಸಂದರ್ಭದಲ್ಲಿ ಸಹೋದರರು ಕೊಟ್ಟಿದ್ದ ಹಣದ ಗಂಟನ್ನು ಅವರ ಚೀಲದಲ್ಲೇ ಇರಿಸಿ ಯೂಸುಫ್ ಕಳಿಸಿದ್ದರು. ಅದು ಅವರಿಗೆ ತಿಳಿದಿರಲಿಲ್ಲ. ಮನೆಗೆ ಬಂದಾಗ ತಿಳಿಯಿತು. ಇದು 'ಅರಸನ ಔದಾರ್ಯ'ವೆಂದು ಅವರು ಹೇಳಿಕೊಂಡರು. ಇನ್ನೊಮ್ಮೆ ಬರುವಾಗ ಸಣ್ಣ ಸಹೋದರರನ್ನು ಕರೆ ತರಬೇಕೆಂಬ ಯೂಸುಫ್‌ರ ಎಚ್ಚರಿಕೆಯಿಂದಾಗಿ ಎರಡನೆ ಬಾರಿಯ ಪ್ರಯಾಣದಲ್ಲಿ ಬಿನ್‌ಯಮೀನ್‌ರನ್ನು ಜೊತೆಗೊಯ್ದರು.

ಅವರು ಬಂದಾಗ ಯೂಸುಫ್(ಅ)ರು ಬಿನ್‌ಯಮೀನ್‌ರಿಗೆ ತನ್ನನ್ನು ಪರಿಚಯಿಸಿದರು. ಧಾನ್ಯ ಕೊಟ್ಟು ಕಳಿಸುವ ದಾರಿಯಲ್ಲಿ ನೀರು ಕುಡಿಯಲಿಕ್ಕಾಗಬಹುದೆಂಬ ಉದ್ದೇಶದಿಂದ ಒಂದು ಲೋಟವನ್ನು ಅವರ ಚೀಲದಲ್ಲಿರಿಸುವಂತೆ ಯೂಸುಫ್‌ರು ತನ್ನ ಭಟರಿಗೆ ತಿಳಿಸಿರಬೇಕು. ಅವರು ಬಿನ್‌ಯಮೀನ್‌ರ ಮೇಲೆ ಆರೋಪ ಹೊರಿಸಲಿಲ್ಲ. ಅವರನ್ನು ತಡೆದಿರಿಸುವ ಯೋಜನೆಯನ್ನೂ ಹಾಕಿರಲಿಲ್ಲ. ಅಲ್ಲಾಹನು ಯಾವುದಾದರೂ ಮಾರ್ಗ ತೋರುವನೆಂಬ ಭರವಸೆಯನ್ನು ಮಾತ್ರ ಹೊಂದಿದ್ದರು. ಹಾಗೆ ಸಹೋದರರ ತಂಡವನ್ನು ಅವರು ಕಳಿಸಿಕೊಟ್ಟರು.

**ಕೇಳಿದಿರಾ? ಕೇಳಿ**
**ಮುಜೀಬ್**

ಅವರು ಹೋಗಿ ಸ್ವಲ್ಪ ಹೊತ್ತಾದಾಗ ಧಾನ್ಯ ಅಳೆಯುವ ಸರಕಾರಿ ಪಾತ್ರೆ ಕಾಣೆಯಾಗಿತ್ತು. ಜನರು ಬರುತ್ತಾ ಇದ್ದಾರೆ. ಅವರಿಗೆ ಅಳೆದು ಕೊಡುವುದು ಹೇಗೆಂದು ಸಿಬ್ಬಂದಿಗಳು ಚಿಂತೆಗೀಡಾದರು. ಆಗ ಅವರಿಗೆ ಈಗಷ್ಟೇ ಇಲ್ಲಿಂದ ಧಾನ್ಯ ಕೊಂಡುಹೋದ ತಂಡದ ನೆನಪಾಯಿತು. ಕೂಡಲೇ ಅವರ ಹುಡುಕಾಟಕ್ಕಾಗಿ ಭಟರನ್ನು ಕಳಿಸಲಾಯಿತು. ಅವರ ಪೈಕಿ ಒಬ್ಬನು, 'ಯಾತ್ರಿಕರ ತಂಡದವರೇ ನೀವು ಕಳ್ಳರಾಗಿರುತ್ತೀರಿ' ಎಂದು ಕೂಗಿ ಕರೆದನು. ಅವರು, ನಿಮ್ಮದೇನು ಕಳೆದು ಹೋಗಿದೆಯೆಂದು ಕೇಳಿದಾಗ ಸಿಬ್ಬಂದಿಗಳು ರಾಜನ ಲೋಟ (ಸುವಾಲ್) ಕಳೆದು ಹೋಗಿದೆಯೆಂದು ಹೇಳಿದರು. ಅಷ್ಟೇ ಅಲ್ಲ, ಅದನ್ನು ಹುಡುಕಿ ಕೊಟ್ಟವರಿಗೆ ಒಂದು ಒಂಟೆ ಹೇರುವಷ್ಟು ಧಾನ್ಯ ಬಹುಮಾನವಾಗಿ ನೀಡಲಾಗುವುದು (12:71-73) ಎಂಬ ಆಮಿಷವನ್ನೂ ಒಡ್ಡಿದರು. ಆಗ ಅವರು ನಾವು ಗಲಭೆ ಹುಟ್ಟಿಸಲು ಅಥವಾ ಕದಿಯಲು ಬಂದವರಲ್ಲವೆಂದು ಹೇಳಿದಾಗ, ಒಂದು ವೇಳೆ ನೀವು ಸುಳ್ಳು ಹೇಳುತ್ತೀರೆಂದಾದರೆ ಕಳ್ಳನಿಗೇನು ಶಿಕ್ಷೆ ಎಂದು ಬೆದರಿಕೆ ಹಾಕಿದರು. ಆ ನಾಡಿನ ರೂಢಿಯ ಪ್ರಕಾರ, ಯಾರ ವಸ್ತುವಿನಲ್ಲಿ ಕಳ್ಳತನದ ಸಾಮಾನು ಸಿಗುವುದೋ ಅವನನ್ನೇ ತಡೆದಿರಿಸಲಾಗುತ್ತಿತ್ತು. ಹಾಗೆ ಅವರ ಚೀಲಗಳ ತಪಾಸಣೆ ನಡೆಸಿದಾಗ ಬಿನ್‌ಯಮೀನ್‌ರ ಚೀಲದಲ್ಲಿ ಒಂದು ಲೋಟ ಸಿಕ್ಕಿತು. ಅದು ಅಳತೆ ಮಾಪಕವಾಗಿರಲಿಲ್ಲ. ಒಟ್ಟಿನಲ್ಲಿ ಅವರದಲ್ಲದ ವಸ್ತುವೊಂದು ಸಿಕ್ಕಿರುವುದು ಉದ್ದೇಶಪೂರ್ವಕವಾಗಿ ಅಲ್ಲ,

(8ನೇ ಪುಟಕ್ಕೆ)


اسلامیہ عربک کالج

**ಇಸ್ಲಾಮಿಯಾ ಅರೆಬಿಕ್ ಕಾಲೇಜು** (ವಸತಿ ಶಾಲೆ)

ಮನ್ಸೂರಾ ಎಜುಕೇಶನಲ್ & ವೆಲ್ಫೇರ್ ಟ್ರಸ್ಟ್‌ನ ಆಶ್ರಯದಲ್ಲಿ

**1. ಧಾರ್ಮಿಕ ಮತ್ತು ಸೆಕ್ಯುಲರ್ ಶಿಕ್ಷಣದ ಸಮನ್ವಯ**

ಇಸ್ಲಾಮಿಯಾ ಅರೆಬಿಕ್ ಕಾಲೇಜು ದಕ್ಷಿಣ ಭಾರತದ ಒಂದು ವಿಶಿಷ್ಟ ವಸತಿ ಶಾಲೆಯಾಗಿದೆ. ದೇಶದ ವಿವಿಧೆಡೆಗಳ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸೆಕ್ಯುಲರ್ ಶಿಕ್ಷಣದ (5ರಿಂದ 10ನೇ ತರಗತಿ ವರೆಗೆ) ಜೊತೆ ಧಾರ್ಮಿಕ ಶಿಕ್ಷಣದಲ್ಲಿ ಕಾಲೇಜು ಮಟ್ಟದ ಶಿಕ್ಷಣ ನೀಡಲಾಗುತ್ತದೆ.



**2. ಶಿಕ್ಷಣದ ಧ್ಯೇಯೋದ್ದೇಶಗಳು**

● ವಿದ್ಯಾರ್ಥಿಗಳನ್ನು ಕುರ್‌ಆನ್, ಸುನ್ನತ್ ಶಿಕ್ಷಣ ಪಾರಂಗತರಾಗಿ ಮಾಡುವುದು. ● ಸೆಕ್ಯುಲರ್ ವಿದ್ಯಾಭ್ಯಾಸವನ್ನು ನೀಡುವುದು. ಧಾರ್ಮಿಕ ದೂರದರ್ಶಿತ್ವ ಬೆಳೆಸುವುದು. ● ಧರ್ಮಸಂಸ್ಥಾಪನಾ ಕರ್ತವ್ಯ ನಿರ್ವಹಣೆಗಾಗಿ ಸಿದ್ಧಪಡಿಸುವುದು. ● ದೇವನ ನಿಷ್ಠದಾಸ ಮತ್ತು ದೇಶದ ಉತ್ತಮ ನಾಗರಿಕನಾಗಿ ಮಾಡುವುದು.



**ಸೌಲಭ್ಯಗಳು**

ವಿಶಾಲ ಕ್ಯಾಂಪಸ್, ಶಾಂತ ಸುಂದರ ಪರಿಸರದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ತರಬೇತಿ ಹಾಸ್ಟೆಲ್, ಮಸ್ಜಿದ್, ಲೈಬ್ರರಿ, ಕಂಪ್ಯೂಟರ್ ಲ್ಯಾಬ್, ಮಾರ್ಶಲ್ ಆರ್ಟ್ಸ್ ಕಲಿಕೆ, ಆಟೋಟಗಳಿಗೆ ವಿಶಾಲ ಮೈದಾನ, ಸಂದೇಶ ಪ್ರಚಾರ ಕಾರ್ಯಕ್ಕಾಗಿ ಲೇಖನ, ಭಾಷಣ ಅಭ್ಯಾಸ. ಎಲ್ಲ ರಂಗಗಳಿಗೂ ಯೋಗ್ಯ ಅನುಭವಿ, ಪರಿಶ್ರಮಿ ಹಾಗೂ ಸಹೃದಯಿ ಅಧ್ಯಾಪಕರು.



**ದಾಖಲಾತಿ ನಿಯಮಗಳು**

● ವಿದ್ಯಾರ್ಥಿಯ ವಯಸ್ಸು 11 ಮೀರಬಾರದು. ● 5ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು. ● ಕುರ್‌ಆನ್ ನೋಡಿ ಓದುವ ಅರ್ಹತೆ ಹೊಂದಿರಬೇಕು. ● ದಾಖಲಾತಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು.

**ಇನ್‌ಶಾ ಅಲ್ಲಾಹ್ ಈ ಕೆಳಗಿನ ಸ್ಥಳಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿರುವುದು:**

- ಮಂಗಳೂರು: 02-05-2010
- ಸಿಂಧನೂರು: 08-05-2010
- ಗುಲ್ಬರ್ಗಾ: 09-05-2010
- ಕೊಪ್ಪಳ: 10-05-2010
- ಮನ್ಸೂರ: 23-05-2010

ಈ ಎಲ್ಲ ಸ್ಥಳಗಳಲ್ಲಿ ಬೆಳಿಗ್ಗೆ ಗಂಟೆ 10:00ರಿಂದ ಸಂದರ್ಶನ ನಡೆಸಲಾಗುವುದು.

**ರಿಜಿಸ್ಟ್ರೇಶನ್ ಮತ್ತಿತರ ವಿವರಗಳಿಗಾಗಿ ಸಂಪರ್ಕಿಸಿರಿ.**

ಮುನವ್ವರ್ ಪಾಶಾ (ಪ್ರಾಂಶುಪಾಲರು) 9986846146; ತಾಹಿರ್ ಹುಸೈನ್ (ಕಾರ್ಯದರ್ಶಿ) 09845475006

Islamia Arabic College, Mansoora, Post Alur-573213, Hassan Dist, Karnataka
Ph: 08170-218320, 9341995959, E-mail: secmansoora@rediffmail.com
Website: www.iasmansoora.com

# ಕುರ್‌ಆನ್ ಅಧ್ಯಯನ 512

# ಅನ್ನಿಸಾ

## ವಚನಗಳು: 62

ಫಕೈಫ= ಹೇಗೆ (ಏನಾಗಿರಬಹುದು), ಇದಾ ಅಸಾಬತ್‌ಹುಮ್= ಅವರನ್ನು ಪೀಡಿಸಿದರೆ, ಮುಸೀಬತುನ್= ವಿಪತ್ತುಗಳು, ಬಿಮಾ ಕದ್ದಮತ್ ಐದೀಹಿಮ್= ಅವರ ಕೈಗಳು ಮಾಡಿರುವ, ಸುಮ್ಮ= ಆನಂತರ (ಆಗ), ಜಾಊಕ= ಅವರು ನಿಮ್ಮ ಬಳಿಗೆ ಬಂದರೆ, ಯಹ್‌ಲಿಫೂನ= ಅವರು ಆಣೆ ಹಾಕಿ ಹೇಳುವರು, ಬಿಲ್ಲಾಹಿ= ಅಲ್ಲಾಹನ ಹೆಸರಲ್ಲಿ, ಇನ್ ಅರದ್‌ನಾ= ನಾವು ಬಯಸಿಲ್ಲ, ಭಾವಿಸಿಲ್ಲ, ಇಲ್ಲಾ ಇಹ್ಸಾನನ್= ಒಳಿತಿನ ಹೊರತು, ವ ತೌಫೀಕನ್= (ಉಭಯ ಕಕ್ಷಿಗಳ ಪರಸ್ಪರ) ಸಾಮರಸ್ಯವನ್ನು.

**62. ಆದರೆ, ಸ್ವಕರಗಳಿಂದ ಮಾಡಿದ ವಿಪತ್ತುಗಳು ಪೀಡಿಸಿದಾಗ ಅವರ ಅವಸ್ಥೆ ಏನಾಗಿರಬಹುದು? ಆಗ ಅವರು ನಿಮ್ಮ ಬಳಿ ಬಂದು ಅಲ್ಲಾಹನ ಆಣೆಹಾಕಿ ಹೇಳುವರು, “ನಾವು ಒಳಿತಾಗಬೇಕು ಮತ್ತು ಉಭಯ ಕಕ್ಷಿಗಳಲ್ಲಿ ಸಾಮರಸ್ಯವಿರಬೇಕೆಂದು ಮಾತ್ರ ಬಯಸಿದ್ದೆವು.”**

62: ಇದು ಪ್ರವಾದಿಯವರ ಕಾಲದಲ್ಲಿ ಮದೀನದಲ್ಲಿದ್ದ ಗ್ರಂಥದವರು ಹಾಗೂ ಇತರ ಕಪಟ ವಿಶ್ವಾಸಿಗಳ ಪರಿಣಾಮಕ್ಕೆ ಸಂಬಂಧಿಸಿದ ಪ್ರವಚನವಾಗಿದೆ. ಜೀವನದ ವ್ಯವಹಾರಗಳ ಮೂಲಾಧಾರವಾಗಿರುವ ಗ್ರಂಥ ಮತ್ತು ಪ್ರವಾದಿಯವರನ್ನು ನಿರ್ಲಕ್ಷಿಸಿ ತಾಗೂ ತನ್ನು ಅವಲಂಬಿಸುವ ಧೋರಣೆಯು ಅವರಿಗೆ ಅತ್ಯಂತ ಪ್ರತಿಕೂಲವಾಗಲಿದೆಯೆಂದು ಇಲ್ಲಿ ತಿಳಿಸಲಾಗಿದೆ. ಅಂದು ಅವರು ಪ್ರವಾದಿಯವರ(ಸ) ಬಳಿಗೆ ಓಡಿಬಂದು ತಮ್ಮ ಆ ವರೆಗಿನ ವರ್ತನೆಗಳಿಗೆ ನಾನಾ ರೀತಿಯ ಸಮರ್ಥನೆ ಮತ್ತು ಕ್ಷಮಾಪಣೆಯನ್ನು ಹೇಳುತ್ತಲಿರುತ್ತಾರೆ.

ಇಲ್ಲಿ ಸೂಚಿಸಿದ ತಿರುಗೇಟು ಅಥವಾ ಪ್ರತಿಕೂಲ ಸ್ಥಿತಿಯು ಕ್ರಮೇಣ 2 ರೀತಿಯಲ್ಲಿ ಕಪಟ ವಿಶ್ವಾಸಿಗಳನ್ನು ಪೀಡಿಸಿತು. ಒಂದನೆಯದಾಗಿ ಅವರ ಕಪಟತೆಯ ಮುಖವಾಡವು ಕಳಚಿಬಿದ್ದು ಮುಸ್ಲಿಮರಿಗೆ ಅವರ ನಿಜ ಬಣ್ಣ ಗೋಚರಿಸಿತು. ಆರಂಭ ಕಾಲದಲ್ಲಿ ಪ್ರವಾದಿ ಮತ್ತು ಮುಸ್ಲಿಮರು ಕಪಟಿಗಳೊಡನೆ ಬಹಳ ಮೃದು ಧೋರಣೆಯನ್ನು ಹೊಂದಿದ್ದರು. ಮುನಾಫಿಕ್‌ರ ಅನೇಕ ಕುಕೃತ್ಯಗಳನ್ನು ಅವರು ನೋಡಿಲ್ಲವೆಂಬಂತೆ ನಟಿಸಿದರು. ಭಿನ್ನ



ಮತೀಯರನ್ನು ಸಂಘರ್ಷ ರಹಿತ ವಿಧಾನಗಳಿಂದ ಮನವೊಲಿಸಲು ಪ್ರವಾದಿಯವರು ಪ್ರಯತ್ನಿಸುತ್ತಿದ್ದರು. ಮುನಾಫಿಕರಿಗೆ ಯಹೂದಿಯರ ತೀವ್ರ ಬೆಂಬಲವಿತ್ತೆಂಬುದೂ ಈ ಧೋರಣೆಗೆ ಪ್ರೇರಕವಾಗಿತ್ತು. ಅನಂತರ ಮುನಾಫಿಕರ ವೈರತ್ವದ ಗೂಢತಂತ್ರಗಳು ನಿರ್ಲಕ್ಷಿಸಲಾಗದ ಅಪಾಯಕಾರಿ ಮಟ್ಟಕ್ಕೆ ತಲುಪಿದಾಗ ಮುಸ್ಲಿಮರು ಅವರೊಂದಿಗಿನ ತಮ್ಮ ಧೋರಣೆಯನ್ನು ಕಠೋರಗೊಳಿಸಿದರು. ಅನಂತರ ಕಪಟವೆಂದು ಶಂಕಿಸಬಹುದಾದ ರೀತಿಯಲ್ಲಿ ವರ್ತಿಸುವವರನ್ನು ತೀವ್ರ ವಿಚಾರಣೆ ನಡೆಸಲಾರಂಭಿಸಿದರು.

ಎರಡನೆಯದಾಗಿ ಮುನಾಫಿಕರ ರಕ್ಷಕರಾಗಿದ್ದ ಯಹೂದಿಯರ ಶಕ್ತಿ ಮತ್ತು ಪ್ರಭಾವವು ಕುಸಿದುದರಿಂದ ಮದೀನದಲ್ಲಿ ಅವರು ಅಸಹಾಯಕರಾದರು.

ಇಸ್ಲಾಮ್ ವಿರೋಧಿ ಗೂಢ ಕೃತ್ಯಗಳು ಪತ್ತೆ ಹಚ್ಚಲ್ಪಟ್ಟು, ವಿಚಾರಣೆಗೆ ಗುರಿಯಾಗಿ, ಯಹೂದಿಯರು ನೀಡುತ್ತಿದ್ದ ಬೆಂಬಲವು ನಿಷ್ಫಲವಾದಾಗ ಕಪಟ ವಿಶ್ವಾಸಿಗಳು ತಮ್ಮ ತಂತ್ರ ಬದಲಾಯಿಸಿದರು. ಅವರು ಪ್ರವಾದಿ(ಸ) ಮತ್ತು ಮುಸ್ಲಿಮರ ಬಳಿಗೆ ಹೋಗಿ ಆಣೆ ಹಾಕಿ ಹೇಳಿದರು, “ಅಲ್ಲಾಹನಾಣೆ, ನಾವು ಇಸ್ಲಾಮನ್ನು ಸೋಲಿಸಲು ಪ್ರಯತ್ನಿಸುತ್ತಿರಲಿಲ್ಲ. ಕುರ್‌ಆನ್ ಅಥವಾ ಪ್ರವಾದಿಯವರನ್ನು ನಿರ್ಲಕ್ಷಿಸುತ್ತಿರಲಿಲ್ಲ. ನಾವು ಸದುದ್ದೇಶದಿಂದ ವರ್ತಿಸುತ್ತಿದ್ದೆವು. ಮುಶ್ರಿಕರು, ಯಹೂದಿಯರು ಮತ್ತು ಮುಸ್ಲಿಮರ ಮಧ್ಯೆ ಸಾಮರಸ್ಯ ಬೆಳೆಸಿ ಸಂಧಾನ ಮಾಡಿಸುವುದೇ ನಮ್ಮ ಗುರಿಯಾಗಿತ್ತು. ಕೆಲವು ವಿಷಯಗಳಲ್ಲಿ ಅವರ ನಾಯಕರು ಮತ್ತು ಪುರೋಹಿತರನ್ನು ತೀರ್ಪುಗಾರರಾಗಿ ಅಂಗೀಕರಿಸುವುದರಿಂದ ಅವರನ್ನು ಇಸ್ಲಾಮಿಗೆ ನಿಕಟಗೊಳಿಸಿ ಹೊಂದಾಣಿಕೆಯಿಂದ ವರ್ತಿಸಲು ಅವರನ್ನು ಪ್ರೇರೇಪಿಸಬಹುದೆಂದು ನಾವು ಭಾವಿಸಿದೆವು. ಇದು ತಪ್ಪೆಂದಾದರೆ ನಾವು ಪುನರಾವರ್ತಿಸುವುದಿಲ್ಲ. ಆದ್ದರಿಂದ ದಯವಿಟ್ಟು ಅದಕ್ಕಾಗಿ ನಮ್ಮನ್ನು ದಂಡಿಸಬಾರದು”. ಘೋರ ಕಾಪಟ್ಯಕ್ಕೆ ಪ್ರಾಮಾಣಿಕ ಮತ್ತು ನಿಷ್ಕಳಂಕತೆಯ ಮುಖವಾಡ ತೊಡಿಸುವ ಈ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಬರಾಅತ್ ಅಧ್ಯಾಯದಲ್ಲಿ ಮುನಾಫಿಕರ ನೈಜ ಮುಖವನ್ನು ಎಲ್ಲಿಯೂ ಅಡಗಿಸಲಾಗದ ರೀತಿಯಲ್ಲಿ ಈ ಮುಖವಾಡವನ್ನು ಚಿಂದಿ ಮಾಡಲಾಗಿದೆ.

ಇಸ್ಲಾಮೀ ಸಮಾಜದ ಇದಿರಾಳಿಗಳೊಂದಿಗೆ ಔದಾರ್ಯ ಮತ್ತು ಸದ್ಭಾವನೆಯ ಧೋರಣೆಯನ್ನು ಅಂಗೀಕರಿಸಬೇಕೇ ಎಂಬ ಕುರಿತು ವ್ಯಕ್ತಿ ಅಥವಾ ಜನಸಾಮಾನ್ಯರ ಬದಲಾಗಿ ಸಾಮಾಜಿಕ ನಾಯಕರು ಅಥವಾ ಅಹ್ಲುಲ್ ಹಲ್ಲಿ ವಲ್‌ಅಖ್‌ದ್ ತೀರ್ಮಾನಿಸಬೇಕೆಂದು ಈ ವಚನವು ಸೂಚಿಸುತ್ತದೆ. ಮುನಾಫಿಕರು ಹೇಳಿದ ನೆವನಗಳಿಗೆ ಯಾವುದೇ ಗಮನ ನೀಡದಿರುವುದರಿಂದಲೇ ಅದು ವ್ಯಕ್ತವಾಗುತ್ತದೆ.

### ಕೇಳಿದಿರಾ ಕೇಳಿ (7ನೇ ಪುಟದಿಂದ)

ಕಾಕತಾಳೀಯವಾಗಿತ್ತು. ಆ ಕೂಡಲೇ ಆ ಸಹೋದರರು ಈತ ಕದ್ದರೆ ಆಶ್ಚರ್ಯವಿಲ್ಲ. ಇದಕ್ಕಿಂತ ಮುಂಚೆ ಇವನ ಅಣ್ಣ (ಯೂಸುಫ್) ಕೂಡಾ ಕದ್ದಿದ್ದಾನೆ ಎಂದರು. ಇದು ಯೂಸುಫ್‌ರನ್ನು ಕೋಪ ಬರಿಸಿತ್ತಾದರೂ ಅವರು ಅದನ್ನು ತೋರ್ಪಡಿಸಲಿಲ್ಲ.

ಇಂತಹ ಒಂದು ಅವಸ್ಥೆ ಬಾರದೆ ಇರುತ್ತಿದ್ದರೆ ಯೂಸುಫ್‌ರಿಗೆ ತಮ್ಮನನ್ನು ತಡೆದಿರಿಸಲು ಯಾವುದೇ ಸಮರ್ಥನೆಯಿರಲಿಲ್ಲ. ತಾನೇ ಅದನ್ನಿಟ್ಟದ್ದೆಂದು ಬಿನ್‌ಯಮೀನ್‌ರನ್ನು ಬಿಟ್ಟು ಬಿಡುತ್ತಿದ್ದರು. ಆದರೆ ಅವರನ್ನು ಅಲ್ಲೇ ತಡೆದಿರಿಸಬೇಕಾಗಿತ್ತು. ಆದ್ದರಿಂದ ಅವರು ಸತ್ಯವನ್ನು ಸಹೋದರರ ಮುಂದೆ ಬಹಿರಂಗಪಡಿಸಲಿಲ್ಲ. ಇದನ್ನೇ ಅಲ್ಲಾಹನು "ತನ್ನ ಯೋಜನೆಯ ಮೂಲಕ ಯೂಸುಫ್‌ರನ್ನು ಸಮರ್ಥಿಸಿದೆವು" ಎಂದು ಹೇಳಿರುವನು. ಅವರನ್ನು ಬಿಟ್ಟುಬಿಡುವಂತೆ ಹಾಗೂ ತನ್ನ ಪೈಕಿ ಒಬ್ಬನನ್ನು ಇರಿಸಿಕೊಳ್ಳುವಂತೆ ಅವರು ವಿನಂತಿಸಿದರೂ ಯೂಸುಫ್‌ರು ಒಪ್ಪಲಿಲ್ಲ. ಯಾರ ಸರಕಿನೊಳಗೆ ಅದು ಸಿಕ್ಕಿದೆಯೋ ಅವನನ್ನೇ ತಡೆದಿರಿಸುವೆವು ಎಂದು ಹೇಳಿದರು. ಇಲ್ಲೂ ಅವರು ಬಿನ್‌ಯಮೀನ್‌ರ ಮೇಲೆ ಸುಳ್ಳಾರೋಪ ಹೊರಿಸಲಿಲ್ಲ.

ಒಟ್ಟಿನಲ್ಲಿ ಯೂಸುಫ್‌ರ ಕತೆಯಲ್ಲಿ ಅವರ ಸತ್ಯತೆಗೆ ವಿರುದ್ಧವಾದ ಯಾವ ಅಂಶವೂ ಇರಲಿಲ್ಲವೆಂದು ಈ ಎಲ್ಲ ವಿವರಣೆಗಳಿಂದ ತಿಳಿದು ಬರುತ್ತದೆ. ಪ್ರವಾದಿಗಳ ಸತ್ಯತೆಯ ಬಗ್ಗೆ ಸಂಶಯ ತಾಳುವುದು ಪಾಪವಾಗಿದೆ.

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ಸಅದ್‌ರ ಮರಣ

**281.** ಆಯಿಶಾ(ರ) ಹೇಳುತ್ತಾರೆ- ಖಂದಕ ಯುದ್ಧದ ವೇಳೆ ಸಅದ್‌ರ(ರ) ಕೈಯ ನರಕ್ಕೆ ಪೆಟ್ಟಾಯಿತು. ಅದರಿಂದಾಗಿ ಪ್ರವಾದಿವರ್ಯರು ಅವರನ್ನು ಹತ್ತಿರದಲ್ಲೇ ಶುಶ್ರೂಷಿಸುತ್ತಿರಲು ಮಸೀದಿಯ ಹತ್ತಿರ ಡೇರೆ ಹಾಕಿಸಿದರು. ಆದರೆ ಜನರಿಗೇನೂ ಗಾಬರಿಯಾಗಲಿಲ್ಲ. ಮಸೀದಿಯಲ್ಲಿ ಗಿಫ್ಫಾರ್ ಗೋತ್ರದ ಇನ್ನೊಂದು ಡೇರೆಯಿತ್ತು. ಅದರಲ್ಲಿ(ಸಅದ್‌ರ) ರಕ್ತ ಹರಿಯುತ್ತಿತ್ತು. ಆಗ ಅವರು ಹೇಳಿದರು. ಡೇರೆಯವರೇ! ಇದೇನು ನಿಮ್ಮಲ್ಲಿಂದ ನಮ್ಮತ್ತ ರಕ್ತ ಹರಿಯುತ್ತಿದೆ." (ಜನರು ನೋಡಿದಾಗ) ಅವರ ಗಾಯದಿಂದ ರಕ್ತ ಹರಿಯುತ್ತಿತ್ತು. ಅದರಿಂದ ಡೇರೆಯಲ್ಲಿ ಅವರು ಮರಣ ಹೊಂದಿದರು.

## ದೀಪ

**282.** ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರ ಇಬ್ಬರು ಸಹಾಬಿಗಳು ಒಂದು ಕರಾಳ ರಾತ್ರಿಯಲ್ಲಿ ಅವರ ಬಳಿಯಿಂದ ಮರಳಿ ಹೋದರು. ಇಬ್ಬರ ಬಳಿಯಲ್ಲೂ ದೀಪದಂತಹ ವಸ್ತು ಇತ್ತು. ಇಬ್ಬರೂ ಬೇರ್ಪಟ್ಟಾಗ ಪ್ರತಿಯೊಬ್ಬನಲ್ಲೂ ಒಂದೊಂದಾಯಿತು. ಕೊನೆಗೂ ಅವರು ಮನೆಗೆ ತಲುಪಿದರು.

## ಸವಾರಿಯಲ್ಲಿ ತವಾಫ್

**283.** ಉಮ್ಮು ಸಲಮ(ರ) ಹೇಳುತ್ತಾರೆ- ನಾನು ಪ್ರವಾದಿವರ್ಯರಲ್ಲಿ ನನ್ನ ಕಾಯಿಲೆಯ ಬಗ್ಗೆ ತೋಡಿಕೊಂಡೆ. ಪ್ರವಾದಿ(ಸ) ಹೇಳಿದರು, "ಜನರ ಹಿಂದಿನಿಂದ ಸವಾರಿಯಲ್ಲಿ ತವಾಫ್ ಮಾಡು." ನಾನು ತವಾಫ್ ಮಾಡಿದೆ. ಆಗ ಪ್ರವಾದಿ(ಸ) ಅಲ್ಲಾಹನ ಭವನ(ಕಾಬಾ)ದ ಒಂದು ಮೂಲೆಯಲ್ಲಿ ನಮಾಝ್ ಮಾಡುತ್ತಿದ್ದರು ಮತ್ತು ಅತ್ತೂರ್ ಅಧ್ಯಾಯವನ್ನು ಪಠಿಸುತ್ತಿದ್ದರು.

## ಪ್ರವಾದಿಯ ಆಪ್ತ ಸಂಗಾತಿ

**284.** ಅಬೂಸಈದ್ ಖುದ್ರೀ(ರ) ಹೇಳುತ್ತಾರೆ- ಪ್ರವಾದಿ(ಸ) ಪ್ರವಚನ ನೀಡುತ್ತಾ ಹೇಳಿದರು, "ಅಲ್ಲಾಹನು ತನ್ನೋರ್ವ ದಾಸನಿಗೆ ಇಹಲೋಕವನ್ನು ಮತ್ತು ಅವನ ಬಳಿಯಲ್ಲಿರುವುದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ನೀಡಿದನು. ಅವನು ಅಲ್ಲಾಹನ ಬಳಿಯಲ್ಲಿರುವುದನ್ನು ಇಷ್ಟಪಟ್ಟನು." (ಇದನ್ನು ಕೇಳಿ) ಅಬೂಬಕರ್(ರ) ಅತ್ತರು. ಒಬ್ಬನಿಗೆ ಈ ಲೋಕವನ್ನು ಮತ್ತು ತನ್ನ ಬಳಿಯಲ್ಲಿರುವುದನ್ನು ಆಯ್ಕೆ ಮಾಡಲು ಸ್ವಾತಂತ್ರ್ಯ ನೀಡಿರುವಾಗ ಆತನು ಅಲ್ಲಾಹನ ಬಳಿಯಲ್ಲಿರುವುದನ್ನು ಇಷ್ಟಪಟ್ಟರೆ, ಈ ಮುದುಕನಿಗೇನಾಯಿತು. ಇವರೇಕೆ ಅಳುತ್ತಿದ್ದಾರೆ ಎಂದು ನಾನು ಮನದಲ್ಲೇ ಭಾವಿಸಿದೆ. ಆದರೆ ಅದು ಪ್ರವಾದಿ(ಸ) ಆಗಿರುವರೆಂದು ಅನಂತರ ತಿಳಿಯಿತು. ಅಬೂಬಕರ್(ರ) ನಮಗಿಂತ ಹೆಚ್ಚು ಬಲ್ಲವರಾಗಿದ್ದರು. (ಆದ್ದರಿಂದ ಪ್ರವಾದಿಯ ಅಂತ್ಯ ಸಮೀಪಿಸಿದೆಯೆಂದು ಅವರು ಗ್ರಹಿಸಿಕೊಂಡರು) ತರುವಾಯ ಪ್ರವಾದಿ(ಸ) ಹೇಳಿದರು, "ಅಬೂಬಕರ್(ರ) ಅಳಬೇಡಿರಿ. ನನ್ನ ಮೇಲೆ ಯಾರ ಒಡನಾಟ ಮತ್ತು ಹಣದ ಅತಿ ಹೆಚ್ಚು ಬಾದ್ಯತೆಯಿದೆಯೋ ಅದು ಅಬೂಬಕರ್ ಆಗಿರುವರು. ನಾನು ನನ್ನ ಸಮುದಾಯದ ಯಾರನ್ನಾದರೂ ಸ್ನೇಹಿತನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ. ಆದರೆ ಇಸ್ಲಾಮೀ ಸಹೋದರತೆ ಮತ್ತು ದಯೆ ಸಾಕು. ಅಬೂಬಕರ್‌ರ ದ್ವಾರದ ಹೊರತು ಮಸೀದಿಯ ಎಲ್ಲ ದ್ವಾರಗಳನ್ನು ಮುಚ್ಚಿ ಬಿಡಿರಿ."

**285.** ಇಬ್ನು ಅಬ್ಬಾಸ್(ರ) ಹೇಳುತ್ತಾರೆ- ಪ್ರವಾದಿ(ಸ) ಮರಣದ ಕಾಯಿಲೆ ಬಿದ್ದಾಗ ತಲೆಗೆ ಪಟ್ಟಿ ಕಟ್ಟಿ ಹೊರಟರು. ವೇದಿಕೆಯೇರಿ ಅಲ್ಲಾಹನನ್ನು ಸ್ತುತಿಸಿದ ಬಳಿಕ ಹೇಳಿದರು, "ಜನರ ಪೈಕಿ ನನ್ನ ಮೇಲೆ ಅಬೂಬಕರ್ ಬಿನ್ ಅಬೂ ಕುಹಾಫರಷ್ಟು ನಿಕಟತೆಯ ಮತ್ತು ಅವರ ಸೊತ್ತಿನ ಬಾಧ್ಯತೆಯಿರುವವರು ಯಾರೂ ಇಲ್ಲ. ನಾನು ಜನರ ಪೈಕಿ ಯಾರನ್ನಾದರೂ ಮಿತ್ರನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ. ಆದರೆ ಇಸ್ಲಾಮೀ ಸಹೋದರತೆಯು ಅದಕ್ಕಿಂತ ಮಿಗಿಲಾಗಿದೆ. ಅಬೂಬಕರ್‌ರ ಕಿಟಕಿಯ ಹೊರತು ನನ್ನ ದಿಕ್ಕಿರುವ ಮಸೀದಿಯ ಕಿಟಕಿಗಳನ್ನು ಮುಚ್ಚಿ ಬಿಡಿರಿ."

**286.** ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಪ್ರವಾದಿ(ಸ) ಮಕ್ಕಾಕ್ಕೆ ಬಂದಾಗ, ಉಸ್ಮಾನ್ ಬಿನ್ ತಲ್ಹರನ್ನು ಕರೆದರು. ಬಾಗಿಲು ತೆರೆದಾಗ ಪ್ರವಾದಿ(ಸ), ಬಿಲಾಲ್, ಉಸಾಮ ಬಿನ್ ಝೈದ್, ಉಸ್ಮಾನ್ ಬಿನ್ ತಲ್ಹ(ಕಾಬಾದೊಳಗೆ) ಪ್ರವೇಶಿಸಿದರು. ಪ್ರಥಮ ಬಾಗಿಲು ಮುಚ್ಚಲಾಯಿತು. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ಹೊರಬಂದರು. ನಾನು ಮುಂದೆ ಹೋಗಿ ಬಿಲಾಲ್‌ರನ್ನು ವಿಚಾರಿಸಿದಾಗ, ಅಲ್ಲಿ ನಮಾಝ್ ಮಾಡಿದರೆಂದು ಉತ್ತರಿಸಿದರು. ಎಲ್ಲಿ ಎಂದು ಕೇಳಿದಾಗ ಎರಡು ಕಂಬಗಳ ಮಧ್ಯೆ ಎಂದು ಹೇಳಿದರು. ಇಬ್ನು ಉಮರ್ ಹೇಳುತ್ತಾರೆ- ಅವರು ಎಷ್ಟು ರಕಅತ್ ನಮಾಝ್ ಮಾಡಿದರೆಂದು ಅವರಲ್ಲಿ ಕೇಳಲು ನನಗೆ ಮರೆತೇ ಹೋಯಿತು.

## ರಾತ್ರಿ ನಮಾಝ್

**287.** ಇಬ್ನು ಉಮರ್(ರ) ಹೇಳುತ್ತಾರೆ- ಪ್ರವಾದಿ(ಸ) ಮಿಂಬರ್(ವೇದಿಕೆ)ನ ಮೇಲಿದ್ದರು. ಒಬ್ಬ ವ್ಯಕ್ತಿ ಕೇಳಿದ, "ರಾತ್ರಿಯ ನಮಾಝ್‌ಗಳ ಕುರಿತು ತಮ್ಮ ಆದೇಶವೇನು?" ಪ್ರವಾದಿ(ಸ) ಹೇಳಿದರು, "ಎರಡು ರಕಅತ್ ಆಗಿರಬೇಕು. ಇನ್ನು ಬೆಳಗಾಗುವ ಆಶಂಕೆಯಿದ್ದರೆ ಒಂದು ರಕಅತ್ ನಿರ್ವಹಿಸಬೇಕು. ಇದು ಆ ನಿರ್ವಹಿಸಿದ ಎರಡು ರಕಅತ್‌ಗಳನ್ನು ವಿತ್ರ್(ಒಂಟಿ)ಯಾಗಿಸುವುದು." ಇಬ್ನು ಉಮ್ಮರ್(ರ) ಹೇಳುತ್ತಿದ್ದರು- ರಾತ್ರೆ ಯಲ್ಲಿ ಕೊನೆಯದಾಗಿ ವಿತ್ರ ನಿರ್ವಹಿಸಿರಿ. ಏಕೆಂದರೆ ಪ್ರವಾದಿವರ್ಯರು ಇದನ್ನೇ ಆದೇಶಿಸಿದ್ದಾರೆ.

# ಅಬೂಬಕರ್‌ರಿಂದ ಇಸ್ಲಾಮಿಗೆ ಪ್ರಯೋಜನ



**ಸಿದ್ದೀಕುಲ್ ಅಕ್ಬರ್ - 6**

ಇ.ಎನ್. ಇಬ್ರಾಹೀಮ್

## ಕುಟುಂಬ ಜೀವನ

ಯೌವನದ ಆರಂಭದಲ್ಲಿಯೇ ಅಬೂಬಕರ್ ಕೌಟುಂಬಿಕ ಜೀವನಕ್ಕೆ ಪ್ರವೇಶಿಸಿದರು. ಅಬ್ದುಲ್ ಉಝ್ಝಾರ ಮಗಳು ಕುತೈಲಾ ಅಬೂಬಕರ್‌ರ ಮೊದಲ ಪತ್ನಿಯಾಗಿದ್ದಾರೆ. ಅಸ್ಮಾ ಮತ್ತು ಅಬ್ದುಲ್ಲಾರಿಗೆ ಕುತೈಲಾ ತಾಯಿಯಾದರೆ, ಆ ಮೇಲೆ ಅಬೂಬಕರ್ ಉಮ್ಮು ರುಮಾನರನ್ನು ವಿವಾಹವಾಗಿದ್ದರು. ಆಯಿಶಾ ಮತ್ತು ಅಬ್ದುರ್ರಹ್ಮಾನ್‌ರವರು ರುಮಾನರಲ್ಲಿ ಜನಿಸಿದರು. ಮದೀನಾಕ್ಕೆ ವಲಸೆ ಹೋದ ಬಳಿಕ ಖಾರಿಜ್‌ರ ಮಗಳಾದ ಉಮ್ಮು ಹಬೀಬಾರನ್ನು ಅಬೂಬಕರ್ ವಿವಾಹವಾದರು. ಅವರಲ್ಲಿ ಉಮ್ಮು ಕುಲ್ಸೂಮ್ ಎಂಬ ಪುತ್ರಿ ಜನಿಸಿದರು. ಉಮೈಸ್‌ರ ಮಗಳು ಅಸ್ಮಾ, ಅವರ ಇನ್ನೋರ್ವ ಪತ್ನಿಯಾಗಿದ್ದಾರೆ. ಅಸ್ಮಾ ಜಅ್‌ಫರಿಬ್ನು ಅಬೂತಾಲಿಬ್‌ರ ವಿಧವೆಯಾಗಿದ್ದಾರೆ. ಜಅ್‌ಫರ್ ಮುಅತ್ತಾ ಯುದ್ಧದಲ್ಲಿ ವಧೆಗೀಡಾದ ನಂತರ ಸಂರಕ್ಷಣೆ ನೀಡುವುದಕ್ಕಾಗಿ ಅಬೂಬಕರ್ ಅಸ್ಮಾರನ್ನು ವಿವಾಹ ಮಾಡಿಕೊಂಡಿದ್ದರು. ಹೀಗೆ ನಾಲ್ವರು ಪತ್ನಿಯರು ಮತ್ತು ಆರು ಮಕ್ಕಳನ್ನು ಹೊಂದಿದ್ದ ಕುಟುಂಬ ಅಬೂಬಕರ್‌ರದಾಗಿತ್ತು.

## ದೃಢ ವಿಶ್ವಾಸಿ

ಅಬೂಬಕರ್ ಇಸ್ಲಾಮ್ ಸ್ವೀಕರಿಸಿದ್ದಾರೆ ನಿಜ. ಆದರೆ ಅದು ಅಷ್ಟು ದೊಡ್ಡ ವಿಶೇಷ ವಿಚಾರವಾಗಿದೆಯೇ? ಜಗತ್ತಿನಲ್ಲಿ ಎಷ್ಟೆಲ್ಲ ಜನರು ಇಸ್ಲಾಮ್ ಸ್ವೀಕರಿಸುವುದಿಲ್ಲ ಎಂಬಂಥ ಒಂದು ಸಂದೇಹ ಖಂಡಿತವಾಗಿಯೂ ಯಾರಲ್ಲಿಯೂ ಮೂಡಬಹುದು. ಆದರೆ ಅಬೂಬಕರ್‌ರ ಇಸ್ಲಾಮ್ ಸ್ವೀಕಾರದ ಪ್ರಾಮುಖ್ಯ ಮನನವಾಗಬೇಕಿದ್ದರೆ ಅಂದಿನ ಸಮಾಜದಲ್ಲಿ ಅವರಿಗಿದ್ದ ಸ್ಥಾನಮಾನ, ಪ್ರಭಾವ, ವ್ಯಕ್ತಿತ್ವ ಮತ್ತು ಅಂದಿನ ಜನರ ಸಾಮಾನ್ಯ ಸ್ಥಿತಿಗತಿಗಳು ಹಾಗೂ ಇಸ್ಲಾಮ್ ಸ್ವೀಕರಿಸಿದರೆ ಉದ್ಯೋಗಕ್ಕೆ ಬಾಧೆಯಾಗುವಂತಹ ಅಂದಿನ ಪ್ರತಿಕೂಲ ವಾತಾವರಣ ಇತ್ಯಾದಿ ಸಂಗತಿಗಳ ಕುರಿತು ಸ್ವಲ್ಪ ಅರ್ಥ ಮಾಡಿ ಕೊಳ್ಳುವುದು ಅವಶ್ಯಕವಾಗಿದೆ.

ವ್ಯಾಪಾರದಲ್ಲಿ ಅಬೂಬಕರ್‌ರು ಬಂಡವಾಳ ಹೂಡಿದ್ದು ನಲ್ವತ್ತು ಸಾವಿರ ಬೆಳ್ಳಿ ನಾಣ್ಯಗಳಾಗಿದ್ದುವೆಂದು ಈ ಮೊದಲು ಪ್ರಸ್ತಾವಿಸಲಾಗಿದೆಯಷ್ಟೇ. ವ್ಯಾಪಾರವನ್ನು ಬಲಪಡಿಸಿ ಅಪಾರ ಹಣ ಸಂಪಾದಿಸಿ ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿ ಪ್ರತಾಪಿಯಾಗಿ ಮೆರೆಯಲು ಅಬೂಬಕರ್‌ರಿಗೆ ಸಾಧ್ಯವಿತ್ತು. ಆದರೆ ಅಂದು ಸಮಾಜದಲ್ಲಿ ನೆಲೆಸಿದ್ದ ಸಾಮಾನ್ಯ ಪರಿಸ್ಥಿತಿಯ ವಿರುದ್ಧ ಈಜುವುದಕ್ಕೆ ಹೊರಟರೆ ಅದರಿಂದಾಗುವ ಅಪಾರ ನಾಶ-ದೋಷಗಳ ಬಗ್ಗೆ ಅಬೂಬಕರ್‌ರಿಗೆ ಸರಿಯಾದ ಅರಿವಿದೆ. ಜನರಿಗೆ ತಮ್ಮ ಹಳೆಯ ವಿಶ್ವಾಸಗಳು ಮತ್ತು ಆಚಾರ ಸಂಪ್ರದಾಯಗಳಲ್ಲಿ ಎಷ್ಟರ ಮಟ್ಟಿಗೆ ಬದ್ಧತೆ ರೂಢಮೂಲವಾಗಿತ್ತೆಂಬುದನ್ನು ಅವರು ಅರಿತಿದ್ದಾರೆ. ಹಿಂದೊಮ್ಮೆ ಊರವರು ಝೈದಿಬ್ನು ಅಮ್ರಿಬ್ನು ನುಫೈಲ್‌ರ ಮೇಲೆ ಕಠಿಣ ಧೋರಣೆಯನ್ನು ಕೈಗೊಂಡಿದ್ದರು. ಅದಕ್ಕೆ ಅವರು ಊರವರ ವಿಚಾರ ಮತ್ತು ಆಚಾರಗಳನ್ನು ವಿಮರ್ಶಿಸಿದ್ದು ಕಾರಣವಾಗಿತ್ತು.

ಓರ್ವ ವ್ಯಾಪಾರಿಯಾದುದರಿಂದ ಇಸ್ಲಾಮ್ ಸ್ವೀಕರಿಸಿದರೆ ತನಗೆ ಆ ಕ್ಷೇತ್ರದಲ್ಲಿ ನಷ್ಟವನ್ನು ಮಾತ್ರವೇ ಅನುಭವಿಸಬೇಕಾಗುತ್ತದೆ ಎಂಬುದು ಅಬೂಬಕರ್‌ರಿಗೆ ತಿಳಿದಿತ್ತು. ಇವೆಲ್ಲವೂ ಗೊತ್ತಿದ್ದೂ ಅವರು ಇಸ್ಲಾಮನ್ನು ಸ್ವೀಕರಿಸಿದರು. ಶ್ರೀಮಂತರ ಗೊಡ್ಡು ಸಂಪ್ರದಾಯದ ಕುರಿತು, ಸಮಾಜದ ಅತಿ ರೇಕಿಗಳ ಕುರಿತು ಅತೃಪ್ತಿ, ಆಕ್ರೋಶಗಳನ್ನೆಲ್ಲಾ ತನ್ನೊಳಗೆ ಅದುಮಿಟ್ಟುಕೊಂಡು ಪ್ರವಾದಿವರ್ಯರಿಗೆ(ಸ) ಯಾವಾಗಲಾದರೊಮ್ಮೆ ಸ್ವಲ್ಪ ಆರ್ಥಿಕ ಸಹಾಯವನ್ನೂ, ನೈತಿಕ ಬೆಂಬಲ ವನ್ನೂ ನೀಡಿ ಸಹಕರಿಸಿದ್ದರೆ ಅವರ ಮೇಲೆ ಯಾವ ಆಕ್ಷೇಪವೂ ಬರುತ್ತಿರಲಿಲ್ಲ. ಮಾತ್ರವಲ್ಲ, ಪ್ರವಾದಿಯವರ್ಯರಿಗೆ(ಸ) ಅದರಿಂದ ತೃಪ್ತಿಯೂ ಆಗುವ ಸಾಧ್ಯತೆಯಿತ್ತು. ಇಂತಹ ಎಲ್ಲ ಅವಕಾಶಗಳಿದ್ದರೂ ಇಸ್ಲಾಮ್ ಸ್ವೀಕಾರದಂತಹ ಸಾಹಸಕ್ಕೆ ಅವರು ಹೇಗೆ ಧೈರ್ಯ ಮಾಡಿದರು.

ಅದಕ್ಕೆ ಇನ್ನೇನು ಕಾರಣವಲ್ಲ. ಸಮಾಜದಲ್ಲಿ ಬದಲಾವಣೆ ನಡೆಯಬೇಕಾದರೆ ಸೊಂಟ ಮತ್ತು ತಲೆಯನ್ನು ಪಣವಾಗಿಟ್ಟು ಕಾರ್ಯರಂಗದಲ್ಲಿ ಧುಮುಕಬೇಕಾಗಿದೆ ಎಂಬುದನ್ನು ಅಬೂಬಕರ್ ಚೆನ್ನಾಗಿ ಅರಿತಿದ್ದಾರೆ. ಒಟ್ಟಿನಲ್ಲಿ ಅವರಿಗೆ ಒಳಿತಿನಲ್ಲಿ ರುವ ಆಸಕ್ತಿ, ಸತ್ಯದೊಂದಿಗೆ ಅವರು ಹೊಂದಿದ್ದ ಬದ್ಧತೆ, ನೈಜ ಪ್ರಭುವಿನೊಂದಿಗೆ ಅವರು ಹೊಂದಿದ್ದ ವಿಧೇಯತೆಗಳೆಲ್ಲವೂ ಒಟ್ಟು ಸೇರುವಾಗ ಅಲ್ಲಾಹನ ಕರೆ ಕೇಳಿಸಿಕೊಳ್ಳಲು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸಲು ಇಸ್ಲಾಮ್ ಎಂಬ ಹೊಸ ಧ್ವನಿಯ ಕಹಳೆಯನ್ನು ಊದುವವನಾಗಿ ಸೇರಿಕೊಳ್ಳಲು ಅವರು ಸ್ವಯಂತಾನೇ ಉತ್ಸುಕರಾಗಿ ಮುಂದೆ ಬಂದರು. ಆಂದೋಲನದ ಆರಂಭಿಕ ಘಟ್ಟದಲ್ಲಿ, ಅದು ಗೆಲ್ಲುವ ಸಾಧ್ಯತೆಯ ಕುರಿತು ಯಾವುದೇ ವಿಧದ ನಿರೀಕ್ಷೆಗೂ ಅವಕಾಶವಿಲ್ಲದ ಪರಿಸ್ಥಿತಿಯಲ್ಲಿ, ಅವರು ಅದಕ್ಕೆಲ್ಲ ಸಿದ್ಧರಾದುದೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದು ಅಬೂಬಕರ್‌ರ ಇಸ್ಲಾಮ್ ಸ್ವೀಕಾರದಿಂದ ಇಸ್ಲಾಮ್‌ಗೆ ಆದ ಪ್ರಯೋಜನವಲ್ಲವೇ?

## ಕರ್ಮಯೋಧ

ಅಬೂಬಕರ್ ಕೇವಲ ಓರ್ವ ವಿಶ್ವಾಸಿಯಾಗಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಾನು ಪ್ರವಾದಿಯವರೊಂದಿಗೆ(ಸ) ರಂಗಕ್ಕಿಳಿಯಲು ಬಯಸಿದರು. ಹೀಗೆ ತನಗೆ ಪರಿಚಯವಿರುವ ಉತ್ತಮ ವ್ಯಕ್ತಿಗಳೆಂದು ಅನ್ನಿಸುವ ಕೆಲವು ಯುವಕರನ್ನು ಅಬೂಬಕರ್ ಭೇಟಿಯಾಗಲು ತೀರ್ಮಾನಿಸಿದರು. ಅದರಲ್ಲಿ ಅಬೂ ಉಬೈದಾ, ಉಸ್ಮಾನಿಬ್ನು ಮಝ್‌ಊನ್, ಅಬ್ದುರ್ರಹ್ಮಾನಿಬ್ನು ಔಫ್, ಅರ್ಕಮಿಬ್ನು ಅಬಿಲ್ ಅರ್ಕಮ್, ಝುಬೈರಿಬ್ನುಲ್ ಅವ್ವಾಮ್, ತಲ್ಹತಿಬ್ನು ಉಬೈದಿಲ್ಲ, ಸಅದಿಬ್ನು ಅಬೀ ವಕ್ಕಾಸ್ ಮುಂತಾದ ಕೆಲವರು ಸೇರಿದ್ದಾರೆ.

ಕ್ರಮೇಣ ಅಬೂಬಕರ್‌ರಲ್ಲಿರುವ ವಿಶ್ವಾಸವು ಅಭೇದ್ಯವಾದ ಪ್ರೀತಿಯಾಗಿ ಬೆಳೆಯಿತು. ಅದು ಅಲ್ಲಾಹನೊಂದಿಗೆ, ಅವನ ಸಂದೇಶವಾಹಕರೊಂದಿಗೆ ಅಬೂಬಕರ್‌ರ ಗಾಢವಾದ ಪ್ರೀತಿಯಾಗಿತ್ತು. ಪ್ರವಾದಿ ವಚನಗಳು ಅವರಿಗೆ ಹೃದ್ಗತವಾಯಿತು. ಅದರ ಶ್ರವಣವು ಅಬೂಬಕರ್‌ರಿಗೆ ಮಧುಪಾನವಾಯಿತು. ಅಬೂಬಕರ್‌ರಿಗೆ ಜೀವನ ಒಂದು ವಿಷಯವೇ ಅಲ್ಲ. ಈಗ ಹಣವೂ ಪ್ರಶ್ನೆಯೇ ಅಲ್ಲ. ಅರ್ಪಣಾ ಪ್ರಜ್ಞೆ ಅಬೂಬಕರ್‌ರಿಗೆ(ರ) ಆತ್ಮವನ್ನು ತುಂಬಿಕೊಂಡಿದೆ. ತನ್ನ ಸಂಪತ್ತಿನ ಸಿಂಹಪಾಲನ್ನು ಇಸ್ಲಾಮಿ ಪ್ರಚಾರಕ್ಕೆ ಅಬೂಬಕರ್ ವಿನಿಯೋಗಿಸಿದರು. ಇಸ್ಲಾಮಿನಲ್ಲಿ ವಿಶ್ವಾಸವಿಟ್ಟರೆಂಬ ಕಾರಣಕ್ಕಾಗಿ ತೀವ್ರ ಅಗ್ನಿ ಪರೀಕ್ಷೆಗೀಡಾದ ಗುಲಾಮರ ವಿಮೋಚನೆಗೆ ತನ್ನ ಸಂಪತ್ತನ್ನು ಬಳಸಿದರು. ಅಬೂಬಕರ್‌ರಿಗೆ ಪ್ರಾಯ ಹೆಚ್ಚುತ್ತಿದೆ. ಆದರೆ ದೇವವಿಶ್ವಾಸ ಮಾತ್ರ ಯೌವನವನ್ನು ಪಡೆದುಕೊಳ್ಳುತ್ತಿದೆ.

## ಗುಲಾಮ ವಿಮೋಚನೆ

ಆಫ್ರಿಕಾದ ವ್ಯಕ್ತಿಯಾಗಿರುವ ಬಿಲಾಲ್‌ರು ಉಮಯ್ಯತಿಬ್‌ನು ಖಲಫ್‌ರ ಗುಲಾಮರಾಗಿದ್ದರು. ನವವಿಶ್ವಾಸಿ ಹೊಸದಾಗಿ ಇಸ್ಲಾಮನ್ನು ಸ್ವೀಕರಿಸಿದ್ದಾರೆ. ಅದಕ್ಕೆ ಪ್ರತಿಫಲವಾದರೋ? ಉಮಯ್ಯತ್‌ನಿಂದ ಚಾಟಿಯೇಟಿನ ದಂಡನೆ, ಹಿಂಸೆ, ಮರ್ದನಗಳನ್ನು ಬಿಲಾಲ್ ಅನುಭವಿಸಿದರು. ನಡು ಮಧ್ಯಾಹ್ನದ ಸಮಯದಲ್ಲಿ ಅಂಗಾತ ಮಲಗಿಸಿ, ಎದೆಯ ಮೇಲೆ ಭಾರವಾದ ಬಂಡೆಕಲ್ಲನ್ನು ಇಟ್ಟು ಬಿಲಾಲ್‌ರಿಗೆ ಹಿಂಸೆ ನೀಡಿರುವುದು. ಎರಡು ಕಡೆಯಲ್ಲಿ ಒಂಟೆಗಳನ್ನು ನಿಲ್ಲಿಸಿ ಬಿಲಾಲ್‌ರ ಕಾಲಿಗೂ ಒಂಟೆಗಳ ಕಾಲಿಗೂ ಕಟ್ಟಿ ಅವುಗಳು ಬಿಲಾಲ್‌ರನ್ನು ವಿರುದ್ಧ ದಿಕ್ಕಿಗೆ ಎಳೆಯುಂತೆ ಮಾಡಿ ಬಿಲಾಲ್‌ರು ನೋವು ಅನುಭವಿಸುವಂತೆ ಉಮಯ್ಯತ್ ಮಾಡುತ್ತಿದ್ದನು. ಈ ರೀತಿ ವಿಧ ವಿಧದ ನಾನಾ ಹಿಂಸೆಗಳನ್ನು ಅನುಭವಿಸಿದರೂ ಬಿಲಾಲ್‌ರು ಎಲ್ಲವನ್ನು ಸಹಿಸಿಕೊಂಡರು... ಅಂತಿಮವಾಗಿ ಅಬೂಬಕರ್ ಆ ಕರ್ಮ ಯೋಧನನ್ನು ಉಮಯ್ಯತ್‌ನ ಗುಲಾಮತ್ವದಿಂದ ಬೆಲೆ ತೆತ್ತು ಖರೀದಿಸಿ ಬಿಡುಗಡೆಗೊಳಿಸಿದರು. ಅಬೂಬಕರ್ ಹೀಗೆ ಮಾಡಿದ್ದು ಯಾವುದೇ ಭೌತಿಕ ಲಾಭವನ್ನು ಬಯಸಿಯಾಗಿತ್ತೇ? ಅಲ್ಲ, ಅಲ್ಲಾಹನ ಪ್ರೀತಿಯನ್ನು ಮಾತ್ರ ಬಯಸಿಯಾಗಿತ್ತು. ಅವರು ಗುಲಾಮತ್ವದ ನೊಗದಿಂದ ಖರೀದಿಸಿ ಬಿಡುಗಡೆಗೊಳಿಸಿದ ಗುಲಾಮ ಜನರು ಅನೇಕರಿದ್ದರು. ಅಬೂಬಕರ್ ತನ್ನ ಸಂಪತ್ತನ್ನು ವ್ಯಯಿಸಿ ಮಹಿಳೆಯರನ್ನು, ಮಕ್ಕಳನ್ನು ಕೂಡಾ ಬೆಲೆ ತೆತ್ತು ಖರೀದಿಸಿ ಬಿಡುಗಡೆಗೊಳಿಸಿದ್ದರು.

## ಚಾರಿತ್ರ್ಯದ ಅಸ್ತ್ರ

ವ್ಯಕ್ತಿಯು ಎಷ್ಟೇ ಒಂಟಿಯಾಗಿರಲಿ ತನ್ನ ವಿರೋಧಿಯನ್ನು ಜಯಿಸುವ ಒಂದು ಅಸ್ತ್ರವಂತು ಅವನ ಬಳಿ ಇದ್ದೇ ಇರುತ್ತದೆ. ಅದುವೇ ಚಾರಿತ್ರ್ಯದ ಅಸ್ತ್ರ. ಒಬ್ಬರು ವೈದ್ಯರಿದ್ದರು. ಒಂದು ದಿನ ತಮ್ಮ ಊರಿಗೆ ಹೋಗಿ ಬರುತ್ತಿದ್ದರು. ಊರಿನ ಕೆಲವು ಮಂದಿ ಅವರ ಶತ್ರುಗಳಾದರು. ಅವರು ಒಬ್ಬ ವ್ಯಕ್ತಿಗೆ ಕೆಲವು ಸಾವಿರ ರೂಪಾಯಿ ಕೊಟ್ಟು ವೈದ್ಯರನ್ನು ರಾತ್ರಿ ಊರಿಗೆ ಬರುವ ದಾರಿಯಲ್ಲಿ ಕೊಂದು ಹಾಕು ವಂತೆ ಸುಪಾರಿ ವಹಿಸಿದರು. ಅವನು ಹಣದಾಸೆಗೆ ಸಿದ್ಧವಾದ. ಊರ ಹೊರಗೆ ಸೇತುವೆಯ ಬಳಿ ಅವಿತು ಕುಳಿತ.



ಚಿಂತನೆ

ಇಬ್ರಾಹೀಮ್ ಸಈದ್

ವೈದ್ಯರು ಬಳಿ ಬಂದಾಗ ಅವರ ಮೇಲೆ ದಾಳಿ ಮಾಡಲು ಮುಂದಾದ.

ವೈದ್ಯರಿಗೆ ವಿಷಯ ತಿಳಿಯಿತು. ಅವರು ಹೇಳಿದರು, "ಸ್ವಲ್ಪ ತಡೆಯಿರಿ. ನಾನೊಂದು ವಿಷಯ ಹೇಳುತ್ತೇನೆ, ನೀವು ನಿಮ್ಮ ಚಿಕ್ಕ ಮಗು ವನ್ನು ಒಂದು ಬುಟ್ಟಿಯಲ್ಲಿಟ್ಟು ನನ್ನ ಬಳಿ ತಂದದ್ದು ನೆನಪಿದೆಯೇ? ಆ ಮಗು ಕಾಯಿಲೆ ಯಿಂದ ನರಳುತ್ತಿತ್ತು. ನಿನ್ನ ಬಳಿ ಚಿಕಿತ್ಸೆಗೆ ದುಡ್ಡಿರಲಿಲ್ಲ. ನಾನು ನಿಮ್ಮ ಮಗುವಿಗೆ ಉಚಿತವಾಗಿ ಚಿಕಿತ್ಸೆ ನೀಡಿದ್ದೆ. ಗುಣವಾಯಿತು. ನಾನು ಅಂದು ನಿಮಗೆ ಮಾಡಿದ ಆ ಉಪಕಾರಕ್ಕೆ ಇದು ನೀವು ಸಲ್ಲಿಸುತ್ತಿರುವ ಕೃತಜ್ಞತೆಯೇ?" ಇದನ್ನು ಕೇಳಿದ ಕೂಡಲೇ ಆ ವ್ಯಕ್ತಿ ತನ್ನ ಕತ್ತಿಯನ್ನು ಎಸೆದು ಬಿಟ್ಟು ವೈದ್ಯನ ಕಾಲಿಗೆ ಬಿದ್ದನು. "ನೀವು ಸತ್ಯ ಹೇಳಿದ್ದೀರಿ. ನಾನು ಹಣದಾಸೆಗೆ ನಿಮ್ಮನ್ನು ಕೊಲ್ಲಲು ಮುಂದಾಗಿದ್ದೆ. ನಾನು ಇನ್ನೆಂದೂ ಇಂತಹ ನೀಚ ಕೆಲಸಕ್ಕೆ ಇಳಿಯಲಾರೆ. ನನ್ನನ್ನು ಕ್ಷಮಿಸಿ ಬಿಡಿ. "ಒಂದು ಪ್ರಾಣಿಯನ್ನು ಯಾವುದೇ ನೈತಿಕ ಪುರಾವೆ ಆಕ್ರಮಣದಿಂದ ತಡೆಯಲಾರದು. ಆದರೆ ಮನುಷ್ಯನನ್ನು ಆಕ್ರಮಣದಿಂದ ತಡೆಯಲು ಒಂದು ನೈತಿಕ ಪುರಾವೆ ಸಾಕು. ಅದು ನೈಜ ಪುರಾವೆಯಾಗಿರಬೇಕು. ಕೇವಲ ಮಾತಿನ ಕಂತೆಯಲ್ಲ.

ನೀವು ಸನ್ಮಾರ್ಗವನ್ನು ಮೆಚ್ಚಿದರೆ
ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

# ರೇಷ್ಮೆ ಹುಳದಿಂದ ಪ್ರಯೋಜನ

**ದೇವಾಸ್ತಿತ್ವದ ದೃಷ್ಟಾಂತಗಳು-30**

ಇಮಾಮ್ ಗಝ್ಝಾಲಿ



## ರೇಷ್ಮೆ ಹುಳ

ಅತ್ಯದ್ಭುತವಾಗಿರುವ ರೇಷ್ಮೆಹುಳ ಮತ್ತು ಅದರಲ್ಲಿ ಅಲ್ಲಾಹನು ಸೃಷ್ಟಿಸಿರುವ ವಿಸ್ಮಯಕಾರಿ ಹಾಗೂ ಅವುಗಳನ್ನು ನೋಡುವಾಗ ದೇವಸ್ಮರಣೆಯನ್ನು ಜಾಗೃತಗೊಳಿಸುವ ವಿಷಯಗಳ ಬಗ್ಗೆ ಆಲೋಚಿಸಿರಿ. ರೇಷ್ಮೆಹುಳವು ಕೇವಲ ಮಾನವನ ಹಿತ ಮತ್ತು ಒಳಿತಿಗಾಗಿ ಸೃಷ್ಟಿಸಲಾದ ಜೀವಿಯಾಗಿದೆ. ಅದು ತನ್ನ ದೇಹದಿಂದ ರೇಷ್ಮೆ ನೂಲು ಸೃಷ್ಟಿಸುತ್ತದೆ. ಅರ್ಥಾತ್, ರೇಷ್ಮೆ ಹುಳದ ಮೊಟ್ಟೆಗಳು ಕಾವು ದೊರೆತು ಬಿರಿಯುತ್ತವೆ. ಅವುಗಳಿಂದ ಹುಳಗಳು ಹೊರಬರುತ್ತವೆ.

ಈ ಹುಳವು ಹಿಪ್ಪೆ ನೇರಳೆ ಎಲೆಗಳಿಗೆ ವರ್ಗಾವಣೆಯಾಗುತ್ತದೆ. ಹುಳವು ಆ ಎಲೆ ತಿಂದು ಬೆಳೆಯುತ್ತದೆ. ಬೆಳವಣಿಗೆ ಪೂರ್ಣವಾದರೆ ಕೊಕೂನ್‌ಗಳು ನಿರ್ಮಾಣವಾಗುತ್ತವೆ. ಕೊಕೂನ್ (ರೇಷ್ಮೆಹುಳದ ಗೂಡು) ಸಿದ್ಧವಾದೊಡನೆ ಹುಳದ ಜೀವನ ಕೊನೆಯಾಗುತ್ತದೆ. ಅನಂತರ ಅದು ಕೊಕೂನ್‌ನ ಒಳಗೆ ನಿರ್ಜೀವ ವಸ್ತುವಾಗುತ್ತದೆ.

ಪರಿಪಾವನನಾದ ಸೃಷ್ಟಿಕರ್ತನು ಅದರ ವಂಶದ ಉಳಿವಿಗಾಗಿ ಏರ್ಪಡಿಸಿರುವ ಸಂತಾನೋತ್ಪಾದನಾ ಕ್ರಮವು ಅತಿ ವಿಚಿತ್ರವಾಗಿದೆ. ರೇಷ್ಮೆ ನೂಲು ಸಿದ್ಧವಾದೊಡನೆ ರೇಷ್ಮೆ ಹುಳದ ಜೀವನ ಧರ್ಮ ಕೊನೆಗೊಳ್ಳುವುದಾದರೂ ಅಲ್ಲಾಹನು ಅದರ ದೇಹವನ್ನು ಸುಮಾರು ನೊಣ ಅಥವಾ ಹಾತೆಯಂಥ ಪ್ರಾಣಿರೂಪವಾಗಿ ಮಾರ್ಪಡಿಸುತ್ತಾನೆ. ರೂಪಾಂತರಗೊಂಡ ಆ ಜೀವಿಗಳು ಬಾಹ್ಯ ನೋಟದಲ್ಲಿ ಗಂಡು ಮತ್ತು ಹೆಣ್ಣು ಪ್ರತ್ಯೇಕಿಸಿ ತಿಳಿಯಲಾರದ ರೀತಿಯಲ್ಲಿ ಒಂದೇ ಜಾತಿಯಾಗಿರುತ್ತದೆ. ಆದರೆ ಗಂಡು ಹೆಣ್ಣಿನ ಮೇಲೆ ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತದೆ. ಆ ಕೂಡಲೇ ಹೆಣ್ಣು ಗರ್ಭಿಣಿಯಾಗುತ್ತದೆ. ಮೊಟ್ಟೆಯಿರಿಸುತ್ತದೆ. ಜೀವಿ ಹಾರಿ ಹೋಗುತ್ತದೆ. ಹೀಗೆ ಅದರ ಕಾರ್ಯಭಾರ ಪೂರ್ಣವಾಗುತ್ತದೆ. ಆ ಮೂಲಕ ಅದು ರೇಷ್ಮೆ ಹುಳದ ಮೊಟ್ಟೆಗಳನ್ನು ಉತ್ಪಾದಿಸುತ್ತದೆ. ಒಂದು ನಿರ್ದಿಷ್ಟ ಗಿಡದ ಎಲೆಯನ್ನು ತಿನ್ನುವಂತೆ ಈ ರೇಷ್ಮೆ ಹುಳಗಳನ್ನು ಯಾರು ಪ್ರೇರೇಪಿಸಿದರೆಂದು ಆಲೋಚಿಸಿರಿ. ದೇಹದ ಸುತ್ತಲೂ ರೇಷ್ಮೆಯ ಕೋಶ ನಿರ್ಮಿಸಿ ಅದರೊಳಗೆ ವಾಸಿಸಲುಕಲಿಸಿದವರಾರು? ಕೊನೆಗೆ ರೂಪಾಂತರಗೊಳಿಸಿ ಅದಕ್ಕೆ ರೆಕ್ಕೆ ನೀಡುವವರಾರು? ಆ ಸ್ಥಿತಿಯಲ್ಲಿ ಅವು ಜೋಡಿಯಾಗಿ ಸಂತಾನೋತ್ಪಾದನೆಯಾಗುವುದಷ್ಟೆ. ಹಳೆಯ ರೂಪದಲ್ಲಿಯೇ ಉಳಿದಿದ್ದರೆ ಜೋಡಿಗಳಿಗೆ ಸಂಗಮಿಸಿ ಸಂತಾನೋತ್ಪಾದನೆ ಸಾಧ್ಯವಾಗುತ್ತಿರಲಿಲ್ಲ. ಈ ಹುಳಗಳಿಂದ ಅಲ್ಲಾಹನು ಮಾನವರಿಗೆ ದಯಪಾಲಿಸಿರುವ ಅನುಗ್ರಹಗಳ ಬಗ್ಗೆ ನಾವು ಆಲೋಚಿಸಬೇಕು. ಇದು ತಯಾರಿ ಸುವ ರೇಷ್ಮೆ ನೂಲಿಗೆ ಬಹಳ ಬೆಲೆಯಿದೆ. ಅದ ರಿಂದ ಜನರು ಧಾರಾಳ ಹಣ ಸಂಪಾದಿಸುತ್ತಾರೆ. ಸುಂದರ ಬಟ್ಟೆಗಳನ್ನು ನಿರ್ಮಿಸಲಾಗುತ್ತದೆ. ಸೂಕ್ಮ ಮತ್ತು ಸಣ್ಣ ಕೀಟದಲ್ಲಿರುವ ಅದ್ಭುತಗಳನ್ನು ಗಮನಿಸಿರಿ. ಅಲ್ಲಾಹನ ನಿರ್ಮಾಣ ಕೌಶಲ್ಯ ಮತ್ತು ತಂತ್ರಗಾರಿಕೆಯು ಅದರಲ್ಲಿ ಪ್ರತಿಬಿಂಬಿಸುತ್ತದೆ. ಮೃತರನ್ನು ಪುನಃ ಜೀವಂತಗೊಳಿಸಿ ಶಿಥಿಲವಾದ ಎಲುಬುಗಳನ್ನು ಪೂರ್ವ ಸ್ಥಿತಿಗೆ ತರುವುದಕ್ಕೆ ಅದರಲ್ಲಿ ಸೇರಿಸಿರುವ ದೃಷ್ಟಾಂತ ಮತ್ತು ಸಾಕ್ಷ್ಯಗಳನ್ನು ನೋಡಿರಿ. ಆತನು ಎಷ್ಟೊಂದು ಪರಿಶುದ್ಧನು! ಅತ್ಯುನ್ನತ ಮತ್ತು ಅತಿಗಂಭೀರನಾದ ಆತನ ವಿನಾ ದೇವನಿಲ್ಲ.

## ನೊಣ

ಇನ್ನು ನೊಣ ಮತ್ತು ಆಹಾರ ಸಂಪಾದನೆಗಾಗಿ ಅವುಗಳಿಗೆ ನೀಡಲಾಗಿರುವ ಉಪಾದಿ ಗಳನ್ನು ನೋಡಿರಿ. ಆಹಾರಗಳಿರುವ ಸ್ಥಳಗಳಿಗೆ ತಲುಪಲಿಕ್ಕಾಗಿ ಅವುಗಳಿಗೆ ಎರಡು ರೆಕ್ಕೆಗಳನ್ನು ಸೃಷ್ಟಿಸಲಾಗಿದೆ. ಅಪಾಯ ಮತ್ತು ವೈರಿಗಳಿಂದ ಪಾರಾಗಲು ರೆಕ್ಕೆಗಳಿಂದ ಸಹಾಯವಾಗುತ್ತದೆ. ನೊಣಗಳಿಗೆ ರೆಕ್ಕೆಗಳ ಹೊರತು ಆರು ಕಾಲುಗಳಿವೆ. ನಿಲ್ಲಲು ನಾಲ್ಕು ಕಾಲುಗಳು ಸಾಕಾಗುತ್ತವೆ. ಉಳಿದ ಎರಡು ಕಾಲುಗಳಿಂದ ದೇಹದಲ್ಲಿ ಧೂಳು ಅಂಟಿದರೆ ಶುಚಿಗೊಳಿಸುತ್ತದೆ. ರೆಕ್ಕೆಗಳು ಮೃದುವಾಗಿರುವುದರಿಂದ ಕೊಳೆ ಅಂಟಿದರೆ ಹಾರಲು ಸಾಧ್ಯವಿಲ್ಲ. ಕಣ್ಣುಗಳಿಗೆ ರೆಪ್ಪೆಗಳಿಲ್ಲದಿರುವುದರಿಂದ ನೊಣಗಳಿಗೆ ಧೂಳು ನಿವಾರಿಸುವುದು ಅನಿವಾರ್ಯವಾಗಿದೆ. ನೊಣಗಳ ಕಣ್ಣುಗಳು ತಲೆಯಲ್ಲಿ ಉಬ್ಬಿಕೊಂಡಿವೆಯಷ್ಟೆ. ಮಾನವನಿಗೆ ಸಂಬಂಧಿಸಿರುವ ಮತ್ತು ಹಲವೊಮ್ಮೆ ಮಾನವನಿಂದ ನಾಶವಾಗುವ ನೊಣದಂತಹ ಸಣ್ಣ ಕ್ರಿಮಿಕೀಟಗಳನ್ನು ಸೃಷ್ಟಿಸುವ ಮೂಲಕ ಇಹಲೋಕದ ನಶ್ವರತೆಯನ್ನು ಅಲ್ಲಾಹನು ಮಾನವರಿಗೆ ಮನವರಿಕೆ ಮಾಡಿಸು ತ್ತಾನೆ. ಇದು ಇಹವನ್ನು ತುಚ್ಛವಾಗಿ ಕಂಡು ಅದ ರಿಂದ ಬೀಳ್ಕೊಡುವುದನ್ನು ಗಂಭೀರವೆಂದು ಪರಿಗಣಿಸಬಾರದೆಂಬ ದರ್ಶನವೂ ಅದರಲ್ಲಿ ಮಾನವರಿಗಿದೆ.

ಕೆಲವು ಕೀಟಗಳನ್ನು ಗಮನಿಸಿರಿ. ನೀವು ಸ್ಪರ್ಶಿಸಿದಾಗ ಅವು ಅಚೇತನ ಮತ್ತು ನಿಶ್ಚಲ ವಸ್ತುವಿನಂತೆ ತೆಪ್ಪಗಿರುತ್ತವೆ. ಸ್ವಲ್ಪ ಹೊತ್ತಿನ ಬಳಿಕ ಅವು ಮಿಸುಕಾಡುತ್ತವೆ. ಯಾಕೆಂದರೆ ಸಜೀವಿಗಳನ್ನು ಮಾತ್ರ ಪೀಡಿಸಲಾಗುವುದಷ್ಟೆ. ಅಚೇತನ ವಸ್ತುವಿನಂತೆ ಕುಳಿತರೆ ಕಲ್ಲು ಇತ್ಯಾದಿಗಳಂತೆ ನಿರ್ಲಕ್ಷಿಸಲಾಗುತ್ತದೆ.

ಹದ್ದುಗಳು, ಆಮೆಯನ್ನು ಗಮನಿಸಿದ್ದೀರಾ; ಆಮೆಯು ಕಲ್ಲಿನಂತೆ ಕಠಿಣವಾಗಿದೆಯಷ್ಟೆ. ತಿನ್ನುವ ಯಾವ ಅವಕಾಶವೂ ಗೋಚರಿಸಲಾರದು. ಆದರೆ ಹದ್ದು ಆಮೆಯನ್ನು ಉಗುರಿನಲ್ಲಿ ಬಿಗಿ ಹಿಡಿದು ಹಾರಿ ಹೋಗುತ್ತದೆ. ಬಹಳ ಎತ್ತರದಿಂದ ಬಂಡೆಗೆ ಅಥವಾ ಗಟ್ಟಿನೆಲಕ್ಕೆ ಎಸೆಯುತ್ತದೆ. ಅಪಘಾತದಿಂದ ಹೊರಕವಚವು ಛಿದ್ರವಾಗುತ್ತದೆ. ಹೀಗೆ ಹದ್ದು ಅದನ್ನು ತಿನ್ನುತ್ತದೆ. ನೋಡಿರಿ, ವಿಶೇಷ ಬುದ್ಧಿ ಮತ್ತು ವಿಚಾರಶಕ್ತಿಯಿಲ್ಲದೆ ಹದ್ದುಗಳಿಗೆ ಸ್ವಂತ ಆಹಾರ ಹುಡುಕುವ ಉಪಾಯ ಹೇಗೆ ಹೊಳೆಯಿತು?

ಕಾಗೆಯನ್ನು ನೋಡಿರಿ: ಅದೊಂದು ಅಪ್ರಿಯ ಜೀವಿಯಾಗಿರುವುದರಿಂದ ಅದರ ಸಹಜ ಸ್ವಬಾವದಲ್ಲಿಯೇ ಆತ್ಮ ರಕ್ಷಣೆಯ ತಂತ್ರವನ್ನು ನಿರ್ಮಿಸಲಾಗಿದೆ. ಅದಕ್ಕೆ ತನ್ನ ವೈರಿಗಳ ಬಗ್ಗೆ ಅದೃಶ್ಯ ಜ್ಞಾನವಿರುವಂತೆ ಭಾಸವಾಗುತ್ತದೆ. ಮರಿಗಳ ರಕ್ಷಣೆಗಾಗಿ ಗುಪ್ತ ಮತ್ತು ಸುರಕ್ಷಿತ ಸ್ಥಳಗಳಲ್ಲಿ ಗೂಡುಕಟ್ಟುತ್ತವೆ. ಇದು ಅದರ ಸಹಜ ಸ್ವಭಾವವಾಗಿದೆ, ಕಾಗೆಯು ಜೋಡಿಯ ಜತೆ ಕಾಣಿಸುವುದು ಬಹಳ ಅಪರೂಪ. ಬುದ್ಧಿ ಮತ್ತು ವಿವೇಕವಿರುವ ಮಾನವರೊಡನೆ ಕಾಗೆಯ ವರ್ತನೆಯು ಬುದ್ಧಿಯಿಲ್ಲದ ಇತರ ಜೀವಿಗಳೊಂದಿಗಿನ ವರ್ತನೆಗಿಂತ ಭಿನ್ನವಾಗಿದೆ. ಅದು ಜಾನುವಾರುಗಳ ಮೇಲೆ ಕುಳಿತುಕೊಳ್ಳುತ್ತದೆ. ಒಂಟೆಗಳ ದೇಹದಿಂದ ಮಾಂಸ ಕುಕ್ಕಿ ತಿನ್ನುತ್ತವೆ. ಪ್ರಾಣಿಗಳು ವಿಸರ್ಜಿಸುತ್ತಿರುವಾಗಲೇ ಕಾಗೆಯು ಆ ಕಾಷ್ಠವನ್ನು ತಿನ್ನುತ್ತದೆ. ಹೊಟ್ಟೆ ತುಂಬಿದರೆ ಆಹಾರವನ್ನು ಅಡಗಿಸಿ ಮತ್ತೆ ಬಂದು ತಿನ್ನುತ್ತದೆ. ಕಾಗೆಗೆ ಈ ಸ್ವಭಾವ ಮತ್ತು ವಿಶಿಷ್ಟ ರೀತಿಯನ್ನು ಅಲ್ಲಾಹನ ಹೊರತು ಬೇರೆ ಯಾರೂ ನೀಡಿಲ್ಲ. ಯಾಕೆಂದರೆ, ವಿಶೇಷ ಬುದ್ಧಿ ಮತ್ತು ವಿಚಾರ ಶಕ್ತಿಯಿಲ್ಲದ ಕಾಗೆಗೆ ಇವುಗಳನ್ನು ಸ್ವತಃ ಕಂಡು ಹಿಡಿಯಲು ಸಾಧ್ಯವಿಲ್ಲವಷ್ಟೆ.

# ಇನ್ಶೂರೆನ್ಸ್ ವಿಧಗಳು

**ಇಸ್ಲಾಮೀ ಬ್ಯಾಂಕಿಂಗ್-40**

✍ ಮುಹಮ್ಮದ್ ಫರ್ಝ್ಲ

ಪಾಲಿಸಿಯ ಕಾಲಾವಧಿ ಪೂರ್ಣಗೊಂಡ ಬಳಿಕವೂ ಒಬ್ಬನು ಬದುಕಿರುತ್ತಾನೆಂದಾದರೆ, ಕೆಳಗೆ ವಿವರಿಸಲಾದ ರೀತಿಯಲ್ಲಿ ಅವನಿಗೆ ಹಣವು ದೊರೆಯುವುದು. ಪಾಲಿಸಿಯಲ್ಲಿರುವ ಒಟ್ಟು ಪ್ರೀಮಿಯಂ ಮೊತ್ತದಿಂದ ಪಾಲಿಸಿಯ ಮಾಲಕನ ಅಕೌಂಟಿಗೆ ಹಾಕಲಾದ ಮೊತ್ತವೂ ಈ ಕಾಲಾವಧಿಯಲ್ಲಿ ಅದರಿಂದ ಆಗಿರುವ ಲಾಭವೂ ಮಾತ್ರವಲ್ಲ ಪಾಲಿಸಿ ಮಾಲಕನ ವಿಶೇಷ ಅಕೌಂಟಿನಿಂದ ನಷ್ಟ ಪರಿಹಾರ ಕೊಟ್ಟ ಬಳಿಕ ಉಳಿದಿರುವ ಹಣವೂ ಆತನಿಗೆ ಲಭಿಸುವುದು. ವಿಶೇಷ ಅಕೌಂಟಿನಲ್ಲಿ ಹಣ ಉಳಿತಾಯವಾಗಿಲ್ಲವಾದರೆ ಅದು ಲಭಿಸಲಾರದು.

ಕಾಲಾವಧಿ ಪೂರ್ತಿಯಾಗುವ ಮೊದಲು ಪಾಲಿಸಿಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಿದರೆ, ಪಾಲಿಸಿ ಮಾಲಕನು ಅಕೌಂಟಿಗೆ ಹಾಕಿರುವ ಹಣ ಮತ್ತು ಅದರಿಂದಾದ ಲಾಭ ದೊರಕುವುದು. ಆದರೆ ವಿಶೇಷ ಅಕೌಂಟಿಗೆ ಹಾಕಿರುವ ಮೊತ್ತ ಮಾತ್ರ ವಾಪಸು ನೀಡಲಾಗುವುದಿಲ್ಲ.

ಪಾಲಿಸಿ ಮಾಲಕರಿಗೆ ಪ್ರಯೋಜನ ಮಾಡಿ ಕೊಡುವುದಕ್ಕಾಗಿ ಇನ್ಶೂರೆನ್ಸ್ ಕಂಪೆನಿಯು ಇಸ್ಲಾಮೀ ಬ್ಯಾಂಕಿನ ಸಹಯೋಗದಲ್ಲಿ ಅಥವಾ ಸ್ವತಂತ್ರವಾದ ಇತರ ಯೋಜನೆಗಳನ್ನು ಕೂಡಾ ರೂಢಿಗೆ ತರಬಹುದಾಗಿದೆ. ಇದಕ್ಕೆ ಮಲೇಶ್ಯದಲ್ಲಿ 'ಇಸ್ಲಾಮಿಕ್ ಬ್ಯಾಂಕ್ ಮಲೇಶ್ಯ' ಇದರೊಂದಿಗೆ ಸೇರಿ ರೂಪಿಸಿರುವ ಹೌಸಿಂಗ್ ಯೋಜನೆ ಒಂದು ಉದಾಹರಣೆಯಾಗಿದೆ. family thank full mortage ಎಂದು ಇದನ್ನು ಹೆಸರಿಸಲಾಗಿದೆ. ಬ್ಯಾಂಕ್‌ನ ಮೂಲಕ ಮನೆಯನ್ನು ಪಡೆದುಕೊಂಡವರು ಈ ಯೋಜನೆಗೆ ಸೇರಬೇಕಾಗಿದೆ. ಒಂದು ನಿಗದಿತ ಮೊತ್ತದ ಪಾಲಿಸಿಯನ್ನು ಪಡೆದುಕೊಂಡಿದ್ದು ಆ ನಂತರ ಅದರ ಮಾಲಕನು ಮೃತನಾದರೆ, ಇನ್ನೇನಾದರೂ ಸಂಭವಿಸಿ ಬ್ಯಾಂಕಿಗೆ ಪಾವತಿಸಬೇಕಾಗಿರುವ ಮೊತ್ತವನ್ನು ಪಾವತಿಸಲು ಅಸಾಧ್ಯವಾದರೆ, ಬ್ಯಾಂಕಿಗೆ ಬಾಕಿಯಾಗಿರುವ ಹಣವನ್ನು ಇನ್ಶೂರೆನ್ಸ್ ಕಂಪೆನಿಯು ತುಂಬುವುದು. ಈ ಪಾಲಿಸಿಯ ಮೊತ್ತವನ್ನು ವಿಶೇಷ ಅಕೌಂಟಿನಲ್ಲಿರಿಸಲಾಗುವುದು. ಪಾಲಿಸಿ ಮಾಲಿಕನು ಕಾಲಾವಧಿಯ ಬಳಿಕವೂ ಬದುಕಿರುವನೆಂದಾದರೆ, ಅವನು ಪಾಲಿಸಿಗೆ ಹೂಡಿದ ಮೊತ್ತ ಮತ್ತು ಅದರಿಂದಾದ ಲಾಭ ಪಾಲಿಸಿಯ ಮಾಲಕನಿಗೆ ದೊರೆಯುವುದು.

ಇದಲ್ಲದೆ ಗ್ರೂಫ್ ಫ್ಯಾಮಿಲಿ ಪಾಲಿಸಿಗಳು ಮತ್ತು ಗ್ರೂಪ್ ಫ್ಯಾಮಿಲಿ ತಕಾಫುಲ್ ಹೊಸ್ಪಿಟಲೈಝೆಸನ್ ಆಂಡ್ ಸರ್ಜಿಕಲ್ ಪ್ಲಾನ್ ಎಂಬ ಯೋಜನೆ ಕೂಡಾ ಮಲೇಶ್ಯಾದಲ್ಲಿ ಜಾರಿಯಲ್ಲಿದೆ. ಲಾಭ ನಷ್ಟ ಪಾಲುಗಾರಿಕೆ ಎಂಬ ಮುದಾರಬ ಆಧಾರದಲ್ಲಿ ಇವು ಕಾರ್ಯ ಪ್ರವೃತ್ತವಾಗಿವೆ. ಸಾಮಾನ್ಯವಾಗಿ ಒಂದು ವರ್ಷ ಕಾಲಾವಧಿಯಲ್ಲಿರುವ ಈ ಯೋಜನೆಯಲ್ಲಿ ಆಸ್ಪತ್ರೆ, ಆಪರೇಶನ್ ಮುಂತಾದುದರ ವೆಚ್ಚಗಳನ್ನು ಭರಿಸಲಾಗುವುದು. ಈ ಯೋಜನೆಯಲ್ಲಿ ಸೇರಿರುವ ಅದರ ಸದಸ್ಯರು ಈ ಜವಾಬ್ದಾರಿಕೆಯನ್ನು ಹೊರಲು ಒಪ್ಪಿಕೊಂಡಿರುತ್ತಾರೆ.

ವಿವಿಧ ಕುಟುಂಬ ಇನ್ಶೂರೆನ್ಸ್ ಯೋಜನೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

*ಹತ್ತು ವರ್ಷದಿಂದ ನಲ್ವತ್ತು ವರ್ಷ ಕಾಲಾವಧಿಯ ಇನ್ಶೂರೆನ್ಸ್ ಯೋಜನೆಗಳು.

*ಕುಟುಂಬ ಇನ್ಶೂರೆನ್ಸ್ ಯೋಜನೆಯೊಂದಿಗೆ, ರೂಪಿಸಿರುವ ಅನಾರೋಗ್ಯಕ್ಕಾಗಿರುವ ಆಸ್ಪತ್ರೆ ಖರ್ಚು ಮತ್ತುಅಂಗವಿಕಲತೆಗಾಗಿರುವ ಉಪ ಕರಾರುಗಳು.

*ಕುಟುಂಬ ಇನ್ಶೂರೆನ್ಸ್ ಪಾಲಿಸಿಯೊಂದಿಗೆ, ಜಾರಿಗೆ ತಂದಿರುವ ಫ್ಯಾಮಿಲಿ ರೈಡರ್ ಯೋಜನೆ family rider plan

* ಮನೆ ಮತ್ತು ಇತರ ವಸ್ತುಗಳನ್ನು ಖರೀದಿಸುವುದಕ್ಕಾಗಿ ಸಹಾಯಕ ಇನ್ಶೂರೆನ್ಸ್ ಯೋಜನೆಗಳು Family Mortage plan

* ಶಿಕ್ಷಣಕ್ಕಾಗಿ ಬಳಕೆಯಾಗುವ ಕುಟುಂಬ ಇನ್ಶೂರೆನ್ಸ್

# ಟಾಮಿ, ಟೈಗರ್ ಹಾಸಿಗೆಯಲ್ಲಿ, ಹೆತ್ತವರು ನೆಲದಲ್ಲಿ!



ಒಂದೂರಿನಲ್ಲಿ ತಾಯಿ ಮತ್ತು ಮಗ ವಾಸವಾಗಿದ್ದರು. ಬಡವರಾದ ಅವರ ಜೀವನವು ಅತ್ಯಂತ ದುಸ್ತರವಾಗಿತ್ತು. ಆ ತಾಯಿಯು ಕೂಲಿ ಕೆಲಸ ಮಾಡಿ ಮಗನನ್ನು ಸಾಕಿದಳು. ಹಾಗೆ ಆ ಮಗನು ವಿದ್ಯಾವಂತನಾಗಿ ಯೌವನಕ್ಕೆ ತಲುಪಿದಾಗ ಅವನಿಗೆ ಒಂದು ಹುಡುಗಿಯ ಪರಿಚಯವಾಗುತ್ತದೆ. ಕೊನೆಗೆ ಆ ಪರಿಚಯವು ಪ್ರೇಮಕ್ಕೆ ತಿರುಗುತ್ತದೆ. ತನ್ನನ್ನು ಮದುವೆಯಾಗಲು ಅವನು ಅವಳಲ್ಲಿ ವಿನಂತಿಸುತ್ತಾನೆ. ಆಗ ಅವಳು ಒಂದು ಬೇಡಿಕೆ ಅವನ ಮುಂದಿರಿಸುತ್ತಾಳೆ, “ನನಗೆ ನಿನ್ನ ತಾಯಿಯ ಹೃದಯವನ್ನು ನೀಡಬೇಕು ಹಾಗಾದರೆ ಮಾತ್ರ ನಿನ್ನನ್ನು ಮದುವೆಯಾಗುವೆನು.” ಹಾಗೆ ಅವನು ಮನೆಗೆ ಬಂದು ತಾಯಿಯನ್ನು ಕೊಲೆಮಾಡುತ್ತಾನೆ. ನಿನ್ನೆಯೋ ಮೊನ್ನೆಯೋ ಪರಿಚಯವಾದ ಹುಡುಗಿಗಾಗಿ ಜನ್ಮವಿತ್ತ ತಾಯಿಯನ್ನೇ ಮರೆಯುತ್ತಾನೆ. ಪ್ರೇಯಸಿಯನ್ನು ಮದುವೆಯಾಗುವ ಆತುರದಿಂದ ಆ ತಾಯಿಯ ಹೃದಯವನ್ನು ಜೋಪಾನವಾಗಿ ಹಿಡಿದು ಓಡುತ್ತಾನೆ. ಹೀಗೆ ಓಡುವಾಗ ಎಡವಿ ಬಿದ್ದು ಕೈಯಲ್ಲಿದ್ದ ತಾಯಿಯ ಹೃದಯವು ಕೆಳಗೆ ಬೀಳುತ್ತದೆ. ಅವನು ಬಿದ್ದಲ್ಲಿಂದ ಎದ್ದು ಹೃದಯವನ್ನು ಮೇಲೆತ್ತಲು ಹೋದಾಗ ಅದು ಕೇಳುತ್ತದೆ, “ಏನಾಯ್ತು ಮಗನೇ, ನಿನಗೆ ನೋವಾಯ್ತಾ?”

ಇದು ಒಂದು ಕಾಲ್ಪನಿಕ ಕಥೆಯಾದರೂ ಇದರಲ್ಲಿ ತಾಯಿಯ ಮನಸ್ಸನ್ನು ಮಾರ್ಮಿಕವಾಗಿ ಚಿತ್ರೀಕರಿಸಲಾಗಿದೆ. ಮಕ್ಕಳ ಮೇಲಿರುವ ತಾಯಿಯ ಪ್ರೀತಿಯನ್ನು ಈ ಕಥೆಯಲ್ಲಿ ಅಳೆಯಲಾಗಿದೆ. ಇಂದಿನ ಯುಗದಲ್ಲಿ ತಾಯಿಯು ಅನುಭವಿಸುವ ವೇದನೆಗಳ ಪ್ರತೀಕವಾಗಿದೆ ಈ ಕಥೆ.

‘ಉಪ್ಪಿಗಿಂತ ರುಚಿ ಇಲ್ಲ. ತಾಯಿಗಿಂತ ಬಂಧುವಿಲ್ಲ’ ಎಂಬ ಗಾದೆ ಮಾತು ಅತ್ಯಂತ ಅರ್ಥಗರ್ಭಿತವಾದುದಾಗಿದೆ. ಮನುಷ್ಯರ ಮಧ್ಯೆ ಇರುವ ಸಂಬಂಧಗಳಲ್ಲಿ ಅತ್ಯಂತ ಉನ್ನತವೂ ಪವಿತ್ರವೂ ಆದ ಬಂಧವಾಗಿದೆ ತಾಯಿ ಮಕ್ಕಳ ಅನುಬಂಧ. ಅದಕ್ಕೆ ಸರಿಸಾಟಿಯಾದ ಸಂಬಂಧಗಳು ಜಗತ್ತಿನಲ್ಲಿ ಬೇರೆ ಕಾಣಲು ಸಾಧ್ಯವಿಲ್ಲ. ‘ತಾಯಿ’ ಎಂಬ ಎರಡಕ್ಷರದ ಪದದಲ್ಲಿ ಹಲವಾರು ಭಾವನೆಗಳು ಅಡಕವಾಗಿವೆ. ತಾಯಿ ಇಲ್ಲದ ಜೀವನವು ದುಃಖ-ದುಮ್ಮಾನಗಳ ಆಗರವಾಗಿರುತ್ತದೆ.

ಒಬ್ಬ ಮನುಷ್ಯನ ಜೀವನದಲ್ಲಿ ಮುಖ್ಯ ಪಾತ್ರ ವಹಿಸುವುದು ತಾಯಿಯಾಗಿದ್ದಾಳೆ. ತಾಯಿಯ ಗುಣ-ನಡತೆಗಳಿಗೆ ಅನುಸಾರವಾಗಿ ಓರ್ವ ಮನುಷ್ಯನ ಜೀವನವು ರೂಪುಗೊಳ್ಳುವುದು. ಒಂದು ಮಗುವನ್ನು ತಾಯಿಯು ಬೆಳೆಸುವಾಗ ಅವಳ ಸ್ವಭಾವವನ್ನು ಕಂಡು ಮಗು ಕಲಿತುಕೊಳ್ಳುತ್ತದೆ. ತಾಯಿಯು ಮಗುವಿಗೆ ಎದೆಹಾಲುಣಿಸುವಾಗ ಆ ತಾಯಿಯು ಕೇವಲ ಹಾಲನ್ನು ಮಾತ್ರವಲ್ಲ ನೀಡುವುದು, ಬದಲಾಗಿ ತನ್ನ ಭಾವನೆಗಳ ಜೊತೆ ಸ್ವಭಾವಗಳನ್ನೂ ವರ್ಗಾಯಿಸುತ್ತಾಳೆ. ತಾಯಿಯಾದವಳು ವಿದ್ಯಾವಂತೆಯಾಗಿದ್ದರೆ ಅವಳ ಮಕ್ಕಳು ವಿದ್ಯಾವಂತರಾಗುತ್ತಾರೆ. ಓರ್ವ ಸ್ತ್ರೀಯು ವಿದ್ಯೆ ಕಲಿತರೆ ಇಡೀ ಕುಟುಂಬ ವಿದ್ಯೆ ಕಲಿತಂತೆ. ತಾಯಿಯು ಒಂದು ಪಾಠ ಶಾಲೆಯಾಗಿದ್ದಾಳೆ. ಒಂದು ಮಗುವಿನ ಮೊದಲ ಗುರು ಕೂಡಾ ತಾಯಿಯೇ.

ಒಂದು ಮಗುವಿನ ಬೆಳವಣಿಗೆಯಲ್ಲಿ ಅತ್ಯಂತ ಹೆಚ್ಚು ಪ್ರಭಾವ ಬೀರುವುದು ತಾಯಿಯಾಗಿದ್ದಾಳೆ. ಮಗುವು ತನ್ನ ಮನಸ್ಸನ್ನು ತೆರೆದಿಡುವುದು ತಾಯಿಯ ಮುಂದೆ. ತನ್ನ ಮನಸ್ಸಿನಲ್ಲಿರುವ

**ಮ ಹಿ ಳಾ ವೇ ದಿ ಕೆ**

ಇಮ್ತಿಯಾಝ್ ಪೆರ್ಲ

ಬಯಕೆಗಳನ್ನೂ, ಭಾವನೆಗಳನ್ನೂ ತಾಯಿಯೊಂದಿಗೆ ಹಂಚಿಕೊಳ್ಳುತ್ತದೆ. ತಂದೆಯು ಈಡೇರಿಸಬೇಕಾದಂತಹ ಬೇಡಿಕೆಗಳನ್ನು ತಂದೆಯಲ್ಲಿ ಹೇಳದೆ ತಾಯಿಯ ಮುಖಾಂತರ ಈಡೇರಿಸಿಕೊಳ್ಳುತ್ತದೆ. ತಂದೆಯನ್ನು ಹೆದರುವ ಮಗುವು ತಾಯಿಯ ಮಡಿಲಲ್ಲಿ ಮುದುಡಿಕೊಳ್ಳುತ್ತದೆ. ತಂದೆಯ ಕುರಿತ ಭಯವು ಎಂದೆಂದಿಗೂ ಮಗುವಿನ ಮನಸ್ಸಿನಲ್ಲಿ ಉಳಿದುಕೊಳ್ಳುತ್ತದೆ. ಆದರಿಂದಾಗಿ ತಾಯಿಯು ಮಗುವಿಗೆ ಅನ್ಯೋನ್ಯವಾಗುವುದು.

ಹೆತ್ತವರು ಮಗುವಿಗೆ ಪ್ರೀತಿ ನೀಡುತ್ತಿರಬೇಕು. ಮಕ್ಕಳು ಎಷ್ಟೇ ದೊಡ್ಡವರಾದರೂ ತಂದೆ ತಾಯಿಯ ಪ್ರೀತಿಯನ್ನು ಬಯಸುತ್ತಿರುತ್ತಾರೆ. ಅದನ್ನು ಅವರು ನಿಷೇಧಿಸಬಾರದು. ಮಕ್ಕಳಿಗೆ ಮನೆಯಲ್ಲಿ ಪ್ರೀತಿ ಲಭಿಸದಿದ್ದರೆ ಅವರ ನಿಷ್ಕಳಂಕ ಮನಸ್ಸು ಅದನ್ನು ಮನೆಯ ಹೊರಗೆ ಹುಡುಕಲು ಪ್ರಾರಂಭಿಸುತ್ತದೆ. ಮನೆಯಲ್ಲಿ ಪ್ರೀತಿ ವಂಚಿತರಾದ ಮಕ್ಕಳು ಹೊರಗೆ ಮೋಹನ ಕುಮಾರನಂಥ ವ್ಯಕ್ತಿಗಳ ಮೋಹಪಾಶಕ್ಕೆ ಬಲಿಯಾಗುತ್ತಾರೆ. ಕೊನೆಗೆ ಪತ್ರಿಕೆಗಳಲ್ಲಿ ಪರಾರಿಯ ವಿವಿಧ ವಾರ್ತೆಗಳು ಪ್ರಕಟಗೊಳ್ಳುತ್ತವೆ.

ಇಂದು ಹೆತ್ತವರನ್ನು ಅತ್ಯಂತ ಕೀಳಾಗಿ ಕಾಣಲಾಗುತ್ತದೆ. ಹೆತ್ತು ಸಾಕಿ ಸಲಹುವಾಗ ಆಗುವ ಕಷ್ಟವು ಹೆತ್ತವರಿಗೆ ಮಾತ್ರ ಗೊತ್ತು. ಮಕ್ಕಳು ಬೆಳೆದು ದೊಡ್ಡವರಾಗಿ ಉದ್ಯೋಗಸ್ಥರಾದಾಗ, ತಮ್ಮ ಪತ್ನಿ ಮಕ್ಕಳೊಂದಿಗೆ ಬೇರೆಯೇ ಮನೆ ಕಟ್ಟಿ ಜೀವಿಸುವಾಗ ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸುವವರಿದ್ದಾರೆ. ‘ಟಾಮಿ, ಟೈಗರ್’ ಎಂದೆಲ್ಲಾ ಮುದ್ದು ಮುದ್ದಾದ ಹೆಸರಿನಿಂದ ಕರೆಯಲ್ಪಡುವ ನಾಯಿಮರಿಗಳು ಅವರ ಶಯನ ಗೃಹಗಳಲ್ಲಿ ಹಾಸಿಗೆಯ ಮೇಲೆ ಬೆಚ್ಚಗೆ ಮಲಗುವಾಗ ಹೆತ್ತವರು ಮಾತ್ರ ವೃದ್ಧಾಶ್ರಮಗಳಲ್ಲಿ ಸೊಳ್ಳೆಗಳಿಗೆ ಆಹಾರವಾಗುತ್ತಾ ನಿದ್ದೆ ಹತ್ತಿರ ಸುಳಿಯದೆ ಮಗ್ಗುಲು ಬದಲಾಯಿಸುತ್ತಿರುತ್ತಾರೆ. ಮಗುವು ಹಗಲೆಲ್ಲಾ ನಿದ್ರಿಸಿ ರಾತ್ರಿ ಎದ್ದು ಅಳಲು ಪ್ರಾರಂಭಿಸುತ್ತದೆ. ಆಗ ತಾಯಿಗೆ ನಿದ್ರಿಸಲು ಸಾಧ್ಯವಾಗವುದಿಲ್ಲ. ಅದೇ ಮಗುವು ದೊಡ್ಡದಾದ ಮೇಲೆ, ತಾಯಿ ಸಹಿಸಿದ ಎಲ್ಲಾ ತ್ಯಾಗಗಳೂ ಕಷ್ಟ-ಕಾರ್ಪಣ್ಯಗಳೂ ಅದರ ಮುಂದೆ ನಗಣ್ಯವಾಗುತ್ತದೆ.

ಹೀಗೆಲ್ಲಾ ಸಂಭವಿಸಲು ಕಾರಣ ಮಕ್ಕಳ ನೈತಿಕ ವಿದ್ಯಾಭ್ಯಾಸದ ಕೊರತೆಯಾಗಿದೆ. ಹೆತ್ತವರು ಮಕ್ಕಳಿಗೆ ಕಲಿಸುವಾಗ ಅದು ಕೇವಲ ಲೌಕಿಕಕ್ಕೆ ಸೀಮಿತವಾಗಿರಬಾರದು. ಬದಲಾಗಿ ಲೌಕಿಕ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣವನ್ನೂ ಕಲಿಸಿಕೊಟ್ಟರೆ ಅಂಥ ಮಕ್ಕಳು ಸಮಾಜಕ್ಕೆ ಉಪಕಾರಿಯಾಗಬಹುದು. ಕೇವಲ ಲೌಕಿಕ ಶಿಕ್ಷಣ ಮಾತ್ರ ಕಲಿತು ದೊಡ್ಡ ಉದ್ಯೋಗಿಗಳಾದವರಿಗೆ ತಮ್ಮನ್ನು ಹೆತ್ತ ಮುದಿ ಜೀವವು ಕಣ್ಣಿಗೆ ಕಸವಾಗಿ ಗೋಚರವಾಗುತ್ತದೆ.

ಇಸ್ಲಾಮ್ ತಾಯಿಗೆ ಅತ್ಯಂತ ಮಹತ್ತರವಾದ ಸ್ಥಾನ ಕಲ್ಪಿಸಿದೆ. **(12ನೇ ಪುಟಕ್ಕೆ)**

# ವಿಚ್ಛೇದನ ಅರೋಚಕ

**ಕುಟುಂಬ ಒಂದು ಅಧ್ಯಯನ-25**

ಡಾ। ಫಝ್ಲುರ್ರಹ್ಮಾನ್ ಫರೀದಿ

ಲಿಂಗಾಧಾರಿತ ಭೇದಭಾವಗಳನ್ನು ಕೊನೆಗೊಳಿಸುವುದಕ್ಕೆ ಇಸ್ಲಾಮ್ ಹೆಣ್ಮಕ್ಕಳೊಂದಿಗೆ ಉತ್ತಮವಾಗಿ ವರ್ತಿಸುವ ಆದೇಶವನ್ನು ನೀಡಿದೆ. ಕುಫ್ರ್ ಮತ್ತು ಶಿರ್ಕ್ (ವಾಸ್ತವಿಕವಾದ ಏಕದೇವನನ್ನು ನಿರಾಕರಿಸುವುದು ಮತ್ತು ದೇವನೊಂದಿಗೆ ಇತರ ಸಹಭಾಗಿಗಳನ್ನು ಸೇರಿಸುವುದು)ನಂತಹ ಅಜ್ಞಾನಜನ್ಯ ಸಮಾಜದಲ್ಲಿ ಹೆಣ್ಮಗುವನ್ನು ಜೀವಂತವಾಗಿ ಮಣ್ಣಿನಲ್ಲಿ ಹೂಳಲಾಗುತ್ತಿತ್ತು. 1,500 ವರ್ಷಗಳಿಗಿಂತ ಮುಂಚೆ ಅರೇಬಿಯಾದಲ್ಲಿ ಇದು ರೂಢಿಯಲ್ಲಿತ್ತು.

ಇಂದಿನ ವೈಜ್ಞಾನಿಕ ಯುಗದಲ್ಲಿ ಅಲ್ಟ್ರಾಸೌಂಡ್‌ನ ಮೂಲಕ ಲಿಂಗ ತಪಾಸಣೆ ನಡೆಸಿ ಹೆಣ್ಣು ಶಿಶುವನ್ನು ಅಬಾರ್ಶನ್ ನಡೆಸಿ ಹತ್ಯೆಗೈಯಲಾಗುತ್ತಿದೆ. ಅಂದರೆ ಇಂದಿನ ನಮ್ಮ ಭೌತಿಕವಾದಿ ಸಮಾಜದಲ್ಲಿ ಹೆಣ್ಮಗು ಹುಟ್ಟುವುದಕ್ಕೆ ಅವಕಾಶ ನೀಡುವುದಿಲ್ಲ. ಬದಲಾಗಿ ಹೊಟ್ಟೆಯೊಳಗೆ ಸಾಯಿಸಲಾಗುತ್ತಿದೆ. ಇಸ್ಲಾಮ್ ಈ ಕ್ರೂರ ಹತ್ಯೆಯನ್ನು ನಿಷೇಧಿಸಿ, ಹೆಣ್ಣುಗಂಡಿನ ಸಮಾನ ಬದುಕುವ ಹಕ್ಕನ್ನು ಮತ್ತು ಅವಳಿಗೂ ಬೆಳೆದು ದೊಡ್ಡವಳಾಗುವ ಅವಕಾಶ ನೀಡುತ್ತದೆ. ಮಾನವೋದ್ಧಾರಕರಾದ ಅಂತ್ಯ ಪ್ರವಾದಿ ಮುಹಮ್ಮದ್‌ರವರು(ಸ) ಈ ರೀತಿ ಹೇಳಿದ್ದಾರೆ,

“ಯಾವುದೇ ವ್ಯಕ್ತಿಗೆ ಹೆಣ್ಮಗು ಹುಟ್ಟಿದ್ದು ಅವನು ಅದನ್ನು ಜಾಹಿಲಿಯ್ಯತ್‌ನ ಪದ್ಧತಿಯಂತೆ ಜೀವಂತವಾಗಿ ಹೂಳದಿದ್ದರೆ ಮತ್ತು ಅವಳನ್ನು ತುಚ್ಛವೆಂದು ಬಗೆಯದಿದ್ದರೆ ಮತ್ತು ಗಂಡು ಮಗುವಿಗೆ ಹೆಣ್ಮಗುವಿಗಿಂತ ಹೆಚ್ಚಿನ ಆದ್ಯತೆ ಕೊಡದಿದ್ದರೆ ಅಲ್ಲಾಹನು ಇಂತಹ ವ್ಯಕ್ತಿಗೆ ಸ್ವರ್ಗ ಪ್ರವೇಶವನ್ನು ನೀಡುವನು.” (ಅಬೂದಾವೂದ್)

“ನಿರಾಶ್ರಿತ ಮಗಳು (ತಲಾಕ್‌ಗೊಳಗಾದವಳು ಅಥವಾ ಮದುವೆ ಆಗದಿರುವವಳ) ಪಾಲನೆ-ಪೋಷಣೆ ಅತ್ಯುತ್ತಮ ಸದಕಾ(ದಾನ)ವಾಗಿದೆ.”

“ಯಾರಾದರೂ ಮೂವರು ಹೆಣ್ಮಕ್ಕಳು ಮತ್ತು ಮೂವರು ಸಹೋದರಿಯರ ಪಾಲನೆ ಪೋಷಣೆ ಮಾಡಿ ಅವರಿಗೆ, ಶಿಕ್ಷಣ-ತರಬೇತಿಗೆ ವ್ಯವಸ್ಥೆ ಮಾಡಿ, ಅವರೊಂದಿಗೆ ಕರುಣೆಯಿಂದ ವರ್ತಿಸಿದರೆ ಅಂತಹ ವ್ಯಕ್ತಿಗೆ ಅಲ್ಲಾಹನು ಸ್ವರ್ಗವನ್ನು ನೀಡುವನು.”

ನೆನಪಿರಲಿ, ಯಾರ ಬಳಿ ಒಬ್ಬಳು ಅಥವಾ ಇಬ್ಬರು ಹೆಣ್ಮಕ್ಕಳಿದ್ದು ಅವರೊಂದಿಗೆ ಉತ್ತಮವಾಗಿ ವರ್ತಿಸಿದರೆ ಅವರಿಗೂ ಸ್ವರ್ಗದ ಸುವಾರ್ತೆಯಿದೆ. ಆದರೆ ನಮ್ಮ ಭಾರತ ದೇಶದಲ್ಲಿ ಪ್ರತಿ ವರ್ಷ ಲಕ್ಷಾಂತರ ಭ್ರೂಣಹತ್ಯೆ ಶ್ರೀಮಂತರು ಬಡವರೆಂಬ ಭೇದಭಾವವಿಲ್ಲದೆ ಸರಾಗವಾಗಿ ನಡೆಯುತ್ತಿದೆ. ಆದ್ದರಿಂದಲೇ ಇಂದು ಗಂಡು ಹೆಣ್ಣಿನ ಸರಾಸರಿ ಅನುಪಾತದಲ್ಲಿ ಕೊರತೆ ಕಂಡುಬರುತ್ತಿದೆ. ಹೆಣ್ಣು ಶಿಶು ಭ್ರೂಣಹತ್ಯೆಯನ್ನು (Female Foeticide) ಎಂದು ಕರೆಯಲಾಗುತ್ತಿದೆ.

ಇಸ್ಲಾಮ್ ಸಮಾಜದಲ್ಲಿ ಗಂಡು ಹೆಣ್ಣಿನ ಹಕ್ಕುಗಳ ಜೊತೆಗೆ ಕರ್ತವ್ಯವನ್ನು ಕೂಡಾ ವಿವರಿಸಿದೆ ಮತ್ತು ನ್ಯಾಯಾಧಾರಿತ ಕಾನೂನನ್ನು ಕೂಡಾ ಮಾಡಿದೆ. ಬರೇ ಭಾಷಣಗಳಿಗೆ ಇದು ಸೀಮಿತವಾಗಿರಬಾರದೆಂದು ಅದು ತಾಕೀತು ಮಾಡಿ ಸಮಾಜದಲ್ಲಿ ಅದನ್ನು ರೂಢಿಗೆ ತರುವಂತೆ ತನ್ನ ಅನುಯಾಯಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದೆ.

ಇಸ್ಲಾಮ್ ಅದನ್ನು ದಾಂಪತ್ಯ ಜೀವನದಿಂದ ಆರಂಭಿಸುತ್ತದೆ. ಯಾಕೆಂದರೆ ಮದುವೆಯ ನಂತರ ಸಮಾಜದ ನವ ನಿರ್ಮಾಣ ಆರಂಭಗೊಳ್ಳುತ್ತದೆ. ನಿಕಾಹನ್ನು ರದ್ದು ಪಡಿಸುವ ಹಕ್ಕನ್ನು ಗಂಡಿನಂತೆ ಹೆಣ್ಣಿಗೂ, ಹೆಣ್ಣಿನಂತೆ ಗಂಡಿಗೂ ಇಸ್ಲಾಮ್ ಅನುಮತಿಸಿದೆ. ಈ ಪ್ರಕಾರ ಮದುವೆಯ ನಂತರ ಯಾವುದೇ ಕಾರಣದಿಂದ ಗಂಡು ಹೆಣ್ಣಿನ ನಡುವೆ ಹೊಂದಾಣಿಕೆಯಾಗದೆ ದೊಡ್ಡ ಬಿರುಕು ಸಂಭವಿಸಿದರೆ ವಿಚ್ಛೇದನ ಮಾಡಿಕೊಳ್ಳಬಹುದಾಗಿದೆ. ಗಂಡು ತಲಾಕ್ ನೀಡಬಹುದೆಂಬಂತೆ ಹೆಣ್ಣು ಖುಲಾ ನೀಡಬಹುದಾಗಿದೆ. ವಿಚ್ಛೇದನ ಅತಿ ಕನಿಷ್ಠ ನಡೆಯಬೇಕೆಂದು ಇಸ್ಲಾಮಿೂ ಆಶಯುವಾಗಿದೆ. ವಿಚ್ಛೇದನಕ್ಕೆ ಇಸ್ಲಾವ್ ಅನುಮತಿಸಿದರೂ ಅದನ್ನು ಆರೋಚಕ ವಿಚಾರವೆಂದು ತಿಳಿಸಿದೆ.

## ಬಾಲಪಂಕ್ತಿ



ಜಿ.ಎಮ್.



# ಆತುರದಿಂದ ಅಪಾಯ

ಹಕ್ಕಿಗಳಲ್ಲಿ ನಾನೇ ದೊಡ್ಡವನು. ಅತೀ ಎತ್ತರದಲ್ಲಿ ಹಾರಲು ನಾನು ಶಕ್ತನೆಂಬ ಜಂಬ ಗಿಡುಗನಲ್ಲಿ ತುಂಬಿಕೊಂಡಿತ್ತು.

ಒಮ್ಮೆ ಗಿಡುಗ ಹಾರುತ್ತಾ ಹೋಗುತ್ತಿರುವಾಗ ಹೊಳೆ ಬದಿಯಲ್ಲಿ ಮೊಸಳೆಗಳಿರುವುದನ್ನು ನೋಡಿ ಹತ್ತಿರ ಹೋಯಿತು. ಅಲ್ಲಿನ ದೃಶ್ಯ ನೋಡಿ ಬೆರಗಾಯಿತು.

ಒಂದು ಮೊಸಳೆ ಬಾಯಿ ತೆರೆದಿತ್ತು. ಅದರೊಳಗೆ ಸಣ್ಣ ಗಿಳಿಯೊಂದು ಕುಳಿತು ಕುಕ್ಕಿ ತಿನ್ನುತ್ತಿತ್ತು. ಗಿಳಿಯನ್ನು ಮೊಸಳೆ ತಿನ್ನುತ್ತದೆಂದೇ ಗಿಡುಗ ಬಾವಿಸಿತು.

ಆದರೆ ಹಾಗಾಗಲಿಲ್ಲ. ಅದು ಕುಕ್ಕಿ ತಿನ್ನುತ್ತಲೇ ಇತ್ತು. ಇಷ್ಟು ಸಣ್ಣ ಗಿಳಿಯೊಂದು ಮೊಸಳೆಯನ್ನು ತಿನ್ನಬಹುದಾದರೆ ಅದಕ್ಕಿಂತ ಎಷ್ಟೋ ಪಟ್ಟು ಬಲಿಷ್ಟನಾದ ನಾನು ನಿಂತು ನೋಡುವುದೇ ಛೇ! ಎನ್ನುತ್ತಾ ಮೊಸಳೆಯ ಹತ್ತಿರ ಹೋಯಿತು. ಗಿಳಿಯನ್ನು ಓಡಿಸಿತು. ನಂತರ ಮೊಸಳೆಯ ಬಾಯಲ್ಲಿ ಕುಳಿತು ಕೊಕ್ಕಿನಿಂದ ಕುಕ್ಕಿ ತಿನ್ನಲು ಆರಂಭಿಸಿತು.

ನೋವು ಸಹಿಸಲಾಗದೆ ಮೊಸಳೆ ಬಾಯಿಯನ್ನು ಮುಚ್ಚಿತು. ಕಂಗಾಲಾದ ಗಿಡುಗ ಹಾರಿ ತಪ್ಪಿಸಿಕೊಂಡರೂ ಕಾಲಿಗೆ ಗಾಯವಾಗಿತ್ತು.

"ಬದುಕಿದೆಯಾ" ಜೀವ ಎಂದು ಹಾರಿದ ಗಿಡುಗ ಒಂದು ಮರದ ಕೊಂಬೆಯಲ್ಲಿ ಕುಳಿತಿತ್ತು. ಆಗ ಗಿಡುಗ ಓಡಿಸಿದ ಗಿಳಿ ಹತ್ತಿರ ಬಂತು. ಗಿಡುಗ ಸೋತು ಹೋದವನಂತೆ ದಯನೀಯವಾಗಿ ಗಿಳಿಯನ್ನೊಮ್ಮೆ ನೋಡಿತು. ಆಗ ಗಿಳಿ, "ನಾನು ಮೊಸಳೆಯ ಹಲ್ಲುಗಳನ್ನು ಶುಚಿಗೊಳಿಸುತ್ತಿದ್ದೆ. ಅದರ ಹಲ್ಲಿನ ಎಡೆಯಲ್ಲಿ ತುಂಬಿದ ಕ್ರಿಮಿ ಕೀಟಗಳನ್ನು ಕುಕ್ಕಿ ತಿನ್ನುತ್ತಿದ್ದೆ. ಆದರೆ ನೀನು ಮಾಡಿದ್ದಾದರೂ ಏನು? ಇದೊಂದೂ ತಿಳಿಯದೆ ಮೊಸಳೆಯನ್ನೇ ಕುಕ್ಕಿದೆ. ಅದು ಸುಮ್ಮನಿರುತ್ತದಾ?" ಎಂದು ಕೇಳಿತು.

ಗಿಳಿಯ ಉತ್ತರದಿಂದ ಗಿಡುಗವು ಯಾವುದೇ ವಿಷಯದಲ್ಲಿ ಆಲೋಚಿಸದೆ ಅವಸರದಿಂದ ಮುನ್ನಡೆದರೆ ಅಪಾಯ ಖಚಿತ ಎಂಬುದು ಮನದಟ್ಟಾಯಿತು.

## ಅರಬಿ ಸುಡೊಕು 60

| | | | | | |
|---|---|---|---|---|---|
| ج | ت | ب | | | |
| ا | | | ت | | |
| ح | | | ث | | |
| | | ث | | | ح |
| | | ج | | | ت |
| | | | ج | ا | ث |

ಅರಬಿ ಸುಡೊಕು 59ರ ಉತ್ತರ

| | | | | | |
|---|---|---|---|---|---|
| ب | ح | ا | ج | ت | ث |
| ث | ج | ت | ح | ب | ا |
| ح | ا | ث | ب | ج | ت |
| ت | ب | ج | ث | ا | ح |
| ج | ت | ح | ا | ث | ب |
| ا | ث | ب | ت | ح | ج |

**ಆಟದ ನಿಯಮ:**
ಖಾಲಿ ಜಾಗದಲ್ಲಿ 'ا' ನಿಂದ 'ح' ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

## ಕ್ವಿಝ್

1. ಇರಾನ್‌ನ ಭಾಷೆ ಯಾವುದು?
2. ಇರಾನ್‌ನ ರಾಜಧಾನಿ ಯಾವುದು?
3. ಇರಾನ್‌ನ ಪ್ರಮುಖ ಉದ್ಯೋಗ ಯಾವುದು?
4. ಇರಾನ್‌ನಲ್ಲಿ ಒಟ್ಟು ಎಷ್ಟು ಗಲ್ಲಿಗಳಿವೆ?
5. ಇರಾನ್‌ನ ಪ್ರಮುಖ ನಗರಗಳು ಯಾವುವು?
6. ಇರಾನ್‌ನ ಪ್ರಮುಖ ನದಿಗಳು ಯಾವುವು?
7. ಇರಾನ್‌ನ ಸಮಯ ವ್ಯತ್ಯಾಸವೆಷ್ಟು?
8. ಇರಾನ್‌ನ ಕರೆನ್ಸಿ ಯಾವುದು?
9. ಇರಾನ್‌ನ ಪ್ರಮುಖ ಬೆಳೆಗಳು ಯಾವುವು?
10. ಇರಾನ್‌ನ ಹಿಂದಿನ ಹೆಸರೇನು?

**ಮುಹಮ್ಮದ್ ಅಝ್ಮಲ್ ಕಸ್ಬಾಬೆಂಗ್ರೆ**

**ಉತ್ತರ:** 1) ಪರ್ಷಿಯನ್ 2) ಟೆಹ್ರಾನ್ 3) ಆಯಿಲ್, ಪೆಟ್ರೋಲಿಯಮ್ 4) 16,48,000 5) ಜೌಮ್, ಅಸ್ತಫಾನ್, ತಬ್ರೀಝ್ 6) ಖರನ್, ಕರುನ್ 7) ಭಾರತದ ಸಮಯಕ್ಕಿಂತ 2:00 ಘಂಟೆ ಹಿಂದೆ. 8) ರಿಯಾಲ್ 9) ಗೋಧಿ, ತರಕಾರಿಗಳು 10) ಪರ್ಷಿಯಾ

## ಗತ್ತಿನ ಎತ್ತು

ಓರ್ವ ರೈತನ ಬಳಿಯಲ್ಲಿ ಅನೇಕ ಸಾಕು ಪ್ರಾಣಿಗಳಿದ್ದುವು. ಕೋಣ, ಎಮ್ಮೆ, ಎತ್ತು, ದನ, ಆಡು ಮುಂತಾದ ಪ್ರಾಣಿಗಳ ಜೊತೆಗೆ ಮೊಲ ಕೂಡಾ ಇತ್ತು.

ಹೀಗಿರುವಾಗ ಒಮ್ಮೆ ಮೊಲ ಎತ್ತಿನ ಜೊತೆ ಗೆಳೆತನ ಬೆಳೆಸಲು ಬಯಸಿತು. ಬಯಕೆಯನ್ನು ಎತ್ತಿನ ಮುಂದೆ ಹೇಳಿತು.

ಎತ್ತು ಜೋರಾಗಿ ನಗುತ್ತಾ, "ಹ!ಹ!ಹ! ನಿನ್ನ ಯೋಚನೆ ಪರವಾಗಿಲ್ಲ. ನಾನು ಸರಿಯಾಗಿ ಉಸಿರು ಬಿಟ್ಟರೆ ಹಾರಿ ಹೋಗುವ ನಿನ್ನೊಡನೆ ಗೆಳೆತನವಾ? ಯಾರ ಮುಂದೆಯೂ ತಲೆ ತಗ್ಗಿಸದವನು ನಾನು. ಅಂತಹವರೊಂದಿಗೆ ಮಾತ್ರ ನನ್ನ ಗೆಳೆತನ..." ಎಂದು ಅಹಂಕಾರದಿಂದ ಹೇಳಿತು.

ಎತ್ತಿನ ಅಹಂಕಾರ ಮತ್ತು ಅವಹೇಳನದಿಂದ ಮೊಲಕ್ಕೆ ತುಂಬಾ ಬೇಸರವಾಯಿತು. ಅದು ಏನೂ ಮಾತಾಡದೆ ಹೋಯಿತು.

ಕೆಲವು ದಿನಗಳ ನಂತರ ಓರ್ವನ ಜೊತೆ ರೈತನು ಹಟ್ಟಿಗೆ ಆಗಮಿಸಿದನು. ಆತನು ಮಾಂಸ ಮಾಡುವ ಕಸಾಯಿಯಾಗಿದ್ದ. ಆತನ ಸೊಂಟದಲ್ಲಿ ಸಿಲುಕಿಸಿದ ಕತ್ತಿ ನೋಡಿ ಮೊಲಕ್ಕೆ ಇವನಾರೆಂದು ತಿಳಿಯಿತು.

"ಇದಾಗಬಹುದು ಕಡಿಮೆಯೆಂದರೆ ಒಂದು ಕ್ವಿಂಟಾಲ್ ಮಾಂಸ ಸಿಗಬಹುದು" ಎನ್ನುತ್ತಾ ಕಸಾಯಿ ಎತ್ತನ್ನು ತೋರಿಸಿದ. ರೈತ ಎತ್ತನ್ನು ಕಸಾಯಿಗೆ ಮಾರಿದ.

ಕೊರಳಿಗೆ ಹಗ್ಗದ ಉರುಳು ಹಾಕಿ ಎತ್ತನ್ನು ಕಸಾಯಿಖಾನೆಗೆ ಕೊಂಡು ಹೋಗುವುದು ನೋಡಿ ಮೊಲಕ್ಕೆ ಅಳು ಬಂತು. ನೋಡಿರಿ... ನಾನೇ ದೊಡ್ಡವನೆಂದು ಬೀಗಿದ ಎತ್ತಿನ ಅವಸ್ಥೆ ಕೊನೆಗೆ ಏನಾಯಿತೆಂದು.

ಸಲ್ವಾನ್

## ಟಾಮಿ, ಟೈಗರ್ ಹಾಸಿಗೆಯಲ್ಲಿ...

(11ನೇ ಪುಟದಿಂದ)

ತಾಯಿಯೊಂದಿಗಿರುವ ಹಕ್ಕು ಮತ್ತು ಬಾಧ್ಯತೆಗಳ ಕುರಿತು ಸುಂದರವಾಗಿ ವಿವರಿಸಿಕೊಟ್ಟಿದೆ. ಒಮ್ಮೆ ಪ್ರವಾದಿಯವರಲ್ಲಿ(ಸ) ವಿಚಾರಿಸಲಾಯಿತು, "ಅತೀ ಹೆಚ್ಚು ಗೌರವಕ್ಕೆ ಪಾತ್ರರು ಯಾರು?" ಆಗ ಪ್ರವಾದಿ(ಸ)ರು ಹೇಳಿದರು. "ನಿನ್ನ ತಾಯಿ." "ಮತ್ತೆ ಯಾರು?" ಪ್ರವಾದಿ(ಸ) ಹೇಳಿದರು, "ನಿನ್ನ ತಾಯಿ." ಅದೇ ಪ್ರಶ್ನೆಯನ್ನು ಮತ್ತೆ ಕೇಳಲಾಯಿತು. ಆಗಲೂ ಪ್ರವಾದಿ(ಸ) ಹೇಳಿದರು, "ನಿನ್ನ ತಾಯಿ." ನಾಲ್ಕನೇ ಬಾರಿಯೂ ಅದೇ ಪ್ರಶ್ನೆಯನ್ನು ಕೇಳಿದಾಗ ಪ್ರವಾದಿ(ಸ) ಹೇಳಿದರು, "ನಿನ್ನ ತಂದೆ." ಎಂದು. ಈ ಪ್ರವಾದಿ ವಚನದಲ್ಲಿ ತಾಯಿಯ ಗೌರವದ ಕುರಿತು ಪ್ರಸ್ತಾಪಿಸಲಾಗಿದೆ. 'ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ' ಎಂದು ಘೋಷಿಸುತ್ತಾ ತಾಯಿಯ ಸೇವೆಗೆ ಪ್ರೋತ್ಸಾಹ ನೀಡಿದರು.

ಕುರ್‌ಆನಿನಲ್ಲಿ ಅಲ್ಲಾಹನ ಆರಾಧನೆಯ ನಂತರ ಪ್ರಸ್ಥಾಪಿಸಿದ್ದು ಹೆತ್ತವರೊಂದಿಗಿನ ಸದ್ವರ್ತನೆಯ ಕುರಿತಾಗಿದೆ. "ನಿಮ್ಮ ಪ್ರಭು ಹೀಗೆ ವಿಧಿಸಿಬಿಟ್ಟಿದ್ದಾನೆ. ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯಾರಾಧನೆಯನ್ನೂ ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿ ಇದ್ದರೆ ಅವರ ಬಗ್ಗೆ ಚಕಾರವೆತ್ತಬೇಡಿರಿ. ಮತ್ತು ಅವರನ್ನು ಜರೆಯಬೇಡಿರಿ ಅವರೊಂದಿಗೆ ಗೌರವಪೂರ್ವಕವಾಗಿ ಮಾತನಾಡಿರಿ." ಇದು ಕುರ್‌ಆನಿನ ಆಜ್ಞೆಯಾದರೂ ಇದನ್ನು ಪಾಲಿಸದವರು ಎಷ್ಟೋ ಮಂದಿ ಇದ್ದಾರೆ. ಸ್ವರ್ಗ ಪ್ರಾಪ್ತಿಯ ಅವಕಾಶವನ್ನು ಅಲ್ಲಾಹನು ತಾಯಿಯ ಮೂಲಕ ನೀಡಿದ್ದರೂ ನರಕ ಗಳಿಸುವ ಕೆಲಸದಲ್ಲಿ ನಿರತರಾಗಿದ್ದಾರೆ.

ತಾಯಿಯ ಮನಸ್ಸನ್ನು ಎಂದೂ ನೋಯಿಸಬಾರದು. ತಾಯಿ ಮನ ನೊಂದು ಪ್ರಾರ್ಥಿಸಿದರೆ ಆ ಪ್ರಾರ್ಥನೆಯು ಸ್ವೀಕರಿಸಲ್ಪಡುವುದು, ಅವಳು ಶಪಿಸಿದರೆ ಆ ಶಾಪವು ಫಲಿಸುವುದು. ಪ್ರವಾದಿಯವರ(ಸ) ಕಾಲದಲ್ಲಿ ಓರ್ವ ವ್ಯಕ್ತಿ ಮರಣಾಸನ್ನನಾದ ಸಂದರ್ಭ ಆ ವ್ಯಕ್ತಿಗೆ ಕಲಿಮ ಉಚ್ಚರಿಸಲು ಸಾಧ್ಯವಾಗುವುದಿಲ್ಲ. ತನ್ನ ಜೀವನ ಕಾಲದಲ್ಲಿ ಸತ್ಕರ್ಮವೆಸಗುತ್ತಿದ್ದ ವ್ಯಕ್ತಿಗೆ ಈ ದುಃಸ್ಥಿತಿ ಬರಲು ಕಾರಣವೇನು ಎಂದು ವಿಚಾರಿಸಿದಾಗ ತಾಯಿಯ ಮನನೋಯಿಸಿದಕ್ಕಾಗಿ ಶಪಿಸಲ್ಪಟ್ಟ ವಿಚಾರವು ತಿಳಿಯುತ್ತದೆ. ಆಗ ಪ್ರವಾದಿ(ಸ) ತಮ್ಮ ಸಂಗಡಿಗರೊಂದಿಗೆ ಕಟ್ಟಿಗೆ ತಂದು ಆ ವ್ಯಕ್ತಿಯನ್ನು ಸುಡಲು ಹೇಳುತ್ತಾರೆ. ಇದನ್ನು ತಿಳಿದ ಆ ತಾಯಿಯು ಅವನನ್ನು ಕ್ಷಮಿಸುತ್ತಾಳೆ. ಹಾಗೆ ಆ ವ್ಯಕ್ತಿಯು ಕಲಿಮ ಉಚ್ಚರಿಸಿ ಮರಣ ಹೊಂದುತ್ತಾನೆ. ಈ ಘಟನೆಯು ತಾಯಿಯ ಮನಸ್ಸನ್ನು ಸೂಚಿಸುತ್ತದೆ. 'ಹೆತ್ತಮ್ಮನಿಗೆ ಹೆಗ್ಗಣ ಮುದ್ದು' ಎಂಬಂತೆ, ಮಕ್ಕಳು ಎಷ್ಟೇ ಕಷ್ಟ ಕೊಡುತ್ತಿದ್ದರೂ ತಾಯಿಗೆ ಅವರ ಮೇಲೆ ಪ್ರೀತಿ ಇದ್ದೇ ಇರುತ್ತದೆ. ಆದ್ದರಿಂದ ತಾಯಿಯ ಮುಖಾಂತರ ನಾವೆಲ್ಲರೂ ಸ್ವರ್ಗದ ಹಕ್ಕುದಾರರಾಗಬೇಕಾಗಿದೆ. ಈ ನಿಟ್ಟಿನಲ್ಲಿ ಯಾವ ತ್ಯಾಗವನ್ನೂ ಸಹಿಸಬೇಕಾಗಿದೆ.

**ಕಥೆ**



# ಅಪಾರ್ಥ

**✍ ಉಮ್ಮುಕುಲ್ಸೂಮ್, ಪಕ್ಕಲಡ್ಕ**

**ನ**ಯನಗಳು ದಿಗಂತವನ್ನು ದಿಟ್ಟಿಸುತ್ತಿದ್ದರೂ ಮನ ಭಾವುಕತೆಯಿಂದ ನರಳುತ್ತಿತ್ತು. ಬೇಡ ಬೇಡವೆಂದರೂ ನೆನಪುಗಳು ಸಮುದ್ರದ ಅಲೆಗಳಂತೆ ಮುನ್ನುಗ್ಗಿ ಬರುತ್ತಲೇ ಇತ್ತು.

ಹೆಗಲ ಮೇಲೆ ಕೈಯೊಂದು ಬಿದ್ದಾಗ ಬೆಚ್ಚಿ ಹಿಂದಿರುಗಿದ ಬಶೀರ್ ಸೋದರತ್ತೆಯ ಕಣ್ಣುಗಳು ತನ್ನ ಮುಖವನ್ನೆಲ್ಲಾ ಪರೀಕ್ಷಿಸುತ್ತಿರುವಂತೆ ಭಾಸವಾಯಿತು.

"ಹೋಗಪ್ಪಾ... ಇನ್ನು ಕೊರಗಿ ಕೊಂಡಿರುವುದರಲ್ಲಿ ಏನರ್ಥವಿದೆ. ಹೋಗು... ಕೋಣೆಗೆ ಹೋಗು" ಎಂದು ಶಾಂತಚಿತ್ತರಾಗಿ ನುಡಿದ ಅತ್ತೆಯ ಮಾತು ತನಗೆ ಕೇಳಿಸಲಿಲ್ಲವೇನೋ ಎಂಬಂತೆ ಇದ್ದು ಬಿಟ್ಟವನನ್ನು ಪುನಃ ಎಚ್ಚರಿಸುವಂತೆ, "ಬಶೀರ್... ಹೋಗು, ಮಕ್ಕಳೆಲ್ಲಾ ಆಗಲೇ ಮಲಗಿ ಬಿಟ್ಟರು. ಗಂಟೆ ಹನ್ನೊಂದಾಗ್ತಾ ಬಂತು" ಎಂಬ ಅತ್ತೆಯ ಮಾತಿಗೆ ಎದುರಾಡದೆ ದೀರ್ಘ ನಿಟ್ಟುಸಿರೊಂದನ್ನು ಚೆಲ್ಲಿ ಒಳ ನಡೆದ.

ಕೋಣೆಯಲ್ಲೆಲ್ಲಾ ಮಲ್ಲಿಗೆಯ ಕಂಪು ಪಸರಿಸಿತ್ತು. ಮಂಚದ ಮೂಲೆಯಲ್ಲಿ ನವ ವಧುವಾಗಿ ಕುಳಿತ ಸುಮಯ್ಯಳತ್ತ ನೋಟ ಹರಿಯಿತು. ಸರಳವಾದ ಅಲಂಕಾರದಲ್ಲಿದ್ದಳು. ತಾಹಿರಾಳಷ್ಟು ಸೌಂದರ್ಯವತಿಯಲ್ಲದಿದ್ದರೂ ತೆಗೆದು ಹಾಕುವಂತಿರಲಿಲ್ಲ.

ತಾಹಿರಾಳ ನೆನಪು ಮೂಡುತ್ತಿರುವಂತೆ ಮನಸ್ಸು ಭಾರವಾಗ ತೊಡಗಿತು. ಏಳೆಂಟು ವರ್ಷಗಳ ಹಿಂದೆ ನವ ವಧುವಾಗಿ ಕುಳಿತ ತಾಹಿರಾಳ ಭಂಗಿ ಮನಸ್ಸಿನಲ್ಲಿ ಪಡಿಮೂಡ ತೊಡಗಿತು. ಲಜ್ಜೆಯೇ ಮೈವೆತ್ತಂತೆ ಕುಳಿತ ತಾಹಿರಾ ಅದೆಷ್ಟು ಬೇಗ ನನ್ನ ಮನೆ ಮನ ಬೆಳಗಿದ್ದಳು. ನಮ್ಮ ದಾಂಪತ್ಯವೆಂಬ ಸುಂದರ ಹೂದೋಟದಲ್ಲಿ ಮೂರು ಕುಸುಮಗಳರಲಿ ಕಂಪನ್ನು ಬೀರುತ್ತಿರುವಾಗಲೇ ತಾಹಿರಾ ಇಹಲೋಕ ತ್ಯಜಿಸಿದ್ದಳು.

ಮೈ ಮನ ಗೆದ್ದ ಮನದನ್ನೆ ಇನ್ನಿಲ್ಲವೆಂಬ ನೋವು ಒಂದೆಡೆಯಾದರೆ ಪುಟ್ಟ ಮಕ್ಕಳ ಪಾಲನೆಯ ಹೊಣೆ ಮತ್ತೊಂದೆಡೆ...

ಕಛೇರಿ ದುಡಿತ, ಮನೆಕೆಲಸ, ಮಕ್ಕಳ ಕೆಲಸ ನಿಭಾಯಿಸಲು ಹೆಣಗಾಡುತ್ತಿರುವುದನ್ನು ನೋಡಲಾರದೆ ಸೋದರತ್ತೆ ಮರುಮದುವೆಯಾಗುವಂತೆ ಒತ್ತಾಯಿಸುತ್ತಲೇ ಇದ್ದರು. ಮೊದಮೊದಲು ಅವರ ಬಲವಂತಕ್ಕೆ ಮಣಿಯದಿದ್ದರೂ ನಂತರ ಒಪ್ಪಿಕೊಳ್ಳಲೇಬೇಕಾಯ್ತು.

ಪತಿಯನ್ನು ಕಳೆದುಕೊಂಡು ವಿಧವೆಯಾಗಿದ್ದ ಅನಾಥೆಯನ್ನು ಮದುವೆಯಾದರೆ ಆಕೆಯ ಬಾಳೂ ಬೆಳಗಬಹುದು... ತನ್ನ ಸಮಸ್ಯೆಯೂ ಬಗೆಹರಿಯಬಹುದೆಂಬ ದೂರಾಲೋಚನೆಯಿಂದಲೇ ತನ್ನ ಒಪ್ಪಿಗೆ ತಿಳಿಸಿದ್ದ.

ಮುಖದಲ್ಲಿ ಯಾವ ಭಾವವೂ ಇಲ್ಲದೆ ಶಿಲೆಯಂತೆ ಕುಳಿತವಳನ್ನು ಕಂಡು ಆಕೆಯ ಕೈ ಹಿಡಿಯಲೆಂಬಂತೆ ಬಾಗಿದ...

"ನೋಡಿ ನನಗೀಗ ಯಾವುದೂ ಇಷ್ಟವಿಲ್ಲ. ನನ್ನವರ ನೆನಪಿನಿಂದ ನಾನಿನ್ನೂ ಹೊರ ಬಂದಿಲ್ಲ. ಕೆಲವು ದಿವಸ ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡ್ತೀರಾ... ಪ್ಲೀಸ್..." ಎಂದು ಕೇಳಿ ಕೊಂಡಾಗ ಬಶೀರ್‌ಗೆ ಖೇದವಾಯಿತು.

ನಾನು ವಿಧುರ. ಆಕೆ ವಿಧವೆ. ಇಬ್ಬರ ಮನದಲ್ಲೂ ತಾಕಲಾಟ ತಾಂಡವವಾಡುವುದು ಸಹಜವೇ. ನನಗಾದರೂ ಮದುವೆಯಾಗಬೇಕೆಂಬ ಹಂಬಲವಿರಲಿಲ್ಲ. ಈ ಮಕ್ಕಳಿಗೋಸ್ಕರವೇ... ತಾನೀಗ ಯೋಚನೆಯ ಗುಂಗಿನಿಂದ ಹೊರ ಬರುತ್ತಾ ಸುಮಯ್ಯಳತ್ತ ದಿಟ್ಟಿಸ ತೊಡಗಿದ. ಆಕೆ ಕೂಡ ಏನೋ ಯೋಚಿಸುತ್ತಿರುವಂತಿದ್ದಳು.

"ಸರಿ, ನಿನ್ನಿಷ್ಟದಂತೆ ಆಗಲಿ, ನಮ್ಮಿಬ್ಬರ ಮನಸ್ಥಿತಿ ಈಗ ಸರಿಯಿಲ್ಲ. ಆದರೆ ಒಂದು ಮಾತು" ಎನ್ನುತ್ತಾ ಮೌನವಾದ. ಆಕೆ ಏನು ಎಂಬಂತೆ ತಲೆಯನ್ನು ತುಸು ಎತ್ತಿ ದಿಟ್ಟಿಸಿದಳು.

ಬಶೀರ್ ಉಗುಳು ನುಂಗುತ್ತಾ... "ನನ್ನ ಮಕ್ಕಳಿಗೆ ಮಲತಾಯಿಯಾಗಿ ಅಂದರೆ ಚಿಕ್ಕಮ್ಮನಾಗಿ ಇರ್ತಿ ತಾನೇ?" ಎಂದು ಸಹಜವಾಗಿ ಅಷ್ಟೇ ಶಾಂತವಾಗಿ ಕೇಳಿದ.

ಆಕೆಯ ಮುಖ ಇದ್ದಕ್ಕಿದ್ದಂತೆ ವಿವರ್ಣವಾಗತೊಡಗಿತು. ಆಕೆ ಕೋಪದಿಂದ ಏದುಸಿರು ಬಿಡುವಾಗ ಬುಸುಗುಡುವ ನಾಗರ ಹಾವಿನಂತೆ ಭಾಸವಾಗ ತೊಡಗಿತು. ಧೈರ್ಯ ತಂದುಕೊಂಡು ಆಕೆಯತ್ತ ದಿಟ್ಟಿಸಿದಾಗ ಕಣ್ಣುಗಳು ಕೆಂಡದುಂಡೆಗಳಂತೆ ಕೆಂಪಾಗಿ ಅಷ್ಟೇ ತೀಕ್ಷ್ಣವಾಗಿದ್ದವು.

ತನ್ನ ಮಾತಿನಿಂದ ಆಕೆಗೆ ಕ್ರೋಧವುಕ್ಕಿದ್ದು ಕಂಡು ಅಲ್ಪಸ್ವಲ್ಪ ಇದ್ದ ಭರವಸೆ ನಿರೀಕ್ಷೆಗಳೆಲ್ಲಾ ಮಣ್ಣು ಪಾಲಾದಂತೆ ಕುಸಿಯ ತೊಡಗಿತು. ಭಾರವಾದ ಹೆಜ್ಜೆಗಳನ್ನಿಡುತ್ತಾ... ಸಾವರಿಸಿಕೊಂಡು ನಿಧಾನಕ್ಕೆ ಕಾಲೆಳೆಯುತ್ತಾ, ಕಿಟಕಿ ಬಳಿ ಸಾಗಿದೆ. ಹೊರಗಿನ ಗಾಢ ಕತ್ತಲೆಯನ್ನು ದಿಟ್ಟಿಸುತ್ತಿರುವಾಗ... ತನ್ನ ಬಾಳು ಕೂಡಾ ಹೀಗೆಯೇ ಕತ್ತಲೆಯೆನಿಸಿತು. ತನ್ನದು ಪರ್‍ವಾಗಿಲ್ಲ. ತನ್ನ ಮಕ್ಕಳದು" ತನ್ನ ಮಕ್ಕಳಿಗೆ ಮಲತಾಯಿ ಕಾಟ ಬೇಡವೆಂದೇ... ಮದುವೆಯಾಗದೇ ಉಳಿಯಲು ನಿರ್ಧರಿಸಿದ್ದು. ಇನ್ನು ತನ್ನ ಮಕ್ಕಳು ಈಕೆಯ ಕೈಯಲ್ಲಿ ನರಳಬೇಕಾಯಿತಲ್ಲ... ಹೊಟ್ಟೆಗೆ ಕೊಳ್ಳಿಯಿಟ್ಟಂತಾಯಿತು. ತನ್ನ ಮತ್ತು ತಾಹಿರಾಳ ಪ್ರೀತಿಯ ಕಾಣಿಕೆಯಾದ ಈ ಮಕ್ಕಳ ಅವಸ್ಥೆ... ಯೋಚಸುತ್ತಲೇ ಭಯವಾಯಿತು.

ತಾಹಿರಾ... ನನ್ನನ್ನು ಒಂಟಿಯಾಗಿಸಿ ಮಕ್ಕಳನ್ನು ತಬ್ಬಲಿಗಳನ್ನಾಗಿಸಿ ನೀನು ಹೋದೆಯಲ್ಲ. ಈಗ ನೋಡು ನಮ್ಮ ಸ್ಥಿತಿ. ಇನ್ನು ಈ ಮಕ್ಕಳು ಮಲತಾಯಿಯ ಹಿಡಿತದಲ್ಲಿ ಹಿಂಡಿ ಹಿಪ್ಪೆಯಾಗುವುದನ್ನು ನಾನು ಹೇಗೆ ಸಹಿಸಲಿ. ಬಶೀರ್‌ನ ಮನ ಮೌನವಾಗಿ ರೋದಿಸುತ್ತಿತ್ತು.

ನಾನು ಯಾಕಾದರೂ ಮದುವೆಯಾದೆನೋ ಎಂದು ಪದೇ ಪದೇ ಅನ್ನಿಸುತ್ತಿತ್ತು. ಹೆಣ್ಣು ದಿಕ್ಕಿಲ್ಲದ ಮನೆಯ ಅವ್ಯವಸ್ಥೆಯನ್ನು ಅನುಭವಿಸಿದವರಿಗೆ ಗೊತ್ತು. ಒಪ್ಪ ಓರಣವಿಲ್ಲದ ಕಸ ಮುಸುರೆ ತುಂಬಿ ತುಳುಕುವಂತಿರುವ ಮನೆಗೆ ಕಾಲಿಡುತ್ತಲೇ ಹೇಸಿಗೆಯೆನಿಸುತ್ತಿತ್ತು.

ಹಗಲಿಡೀ ದುಡಿದು ಬಳಲಿದ ದೇಹ ವಿಶ್ರಾಂತಿ ಬಯಸುತ್ತಿದ್ದರೂ ಸುಮ್ಮನೆ ಕೂರುವಂತಿರಲಿಲ್ಲ. ರಾತ್ರಿಯಡುಗೆ, ಮಕ್ಕಳ ಬಟ್ಟೆ ಬರೆಗಳ ಸ್ವಚ್ಛತೆ, ಪಾತ್ರೆ ಪಗಡೆಗಳ ಸ್ವಚ್ಛತೆ ಎಷ್ಟು ಮಾಡಿದರೂ ಮುಗಿಯದ ಕೆಲಸ. ಕೈ ಕಾಲು ಸೋತು ಹೋಗುವಷ್ಟು ಕೆಲಸ ಮಾಡಿದರೂ ಶಾಲೆಯಿಂದ ಕಂಪ್ಲೇಂಟ್, ಬಟ್ಟೆ ಬರೆ ಸ್ವಚ್ಛವಾಗಿಲ್ಲವಂತೆ ಎಂದು ಮಗನ ಅಳು ಮುಖ. ತಲೆ ಬಾಚಿದ್ದು ಸರಿಯಾಗಿಲ್ಲವೆಂದು ಮಿಸ್ ಬೈತಾರೆ. ಎಲ್ಲರ ಎದುರಲ್ಲಿ ನನಗೆಷ್ಟು ಅವಮಾನವಾಗ್ತಿದೆ ಎಂದು ಮಗಳ ದೂರು. ಚಿಕ್ಕ ಮಗಳ ತಲೆಯಲ್ಲಿ ಹೇನು ತುಂಬಿಕೊಂಡು ಪರಪರನೇ ಕೆರೆಯುವುದು ಕಾಣುವಾಗ ದುಃಖ ಉಕ್ಕಿ ಬರುತ್ತಿತ್ತು. ತಾಹಿರಾ ಇದ್ದಿದ್ದರೆ ಈ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಈ ಸಮಸ್ಯೆಗಳಿಗೆಲ್ಲಾ ಮುಕ್ತಿ ಸಿಗಬಹುದೆಂಬ ಆಶಾಕಿರಣ ಹೊಂದಿದ್ದುದರಿಂದಲೇ ಅಲ್ಲವೇ ಮರು ಮದುವೆಗೆ ಒಪ್ಪಿಗೆ ಇತ್ತದ್ದು. ಇಲ್ಲದಿದ್ದರೆ ನನ್ನ ತಾಹಿರಾಳ ಜಾಗದಲ್ಲಿ ಬೇರೆ ಯಾವ ಹೆಣ್ಣಿಗೂ ಸ್ಥಾನವಿರಲಿಲ್ಲ. ತಾಹಿರಾ... ತಾಹಿರಾ... ಎಂದು ಪರಿಸರವನ್ನು ಮರೆತು ಪುಟ್ಟ ಮಕ್ಕಳಂತೆ ಬಿಕ್ಕಳಿಸತೊಡಗಿದ.

ಛೇ... ನನ್ನ ಅಳು ನೋಡಿ ಆಕೆ ಏನೆಂದು ಕೊಳ್ಳುವಳೋ ಎಂದು ಸುಮಯ್ಯಳ ಇರುವನ್ನು ನೆನೆದು ಹಿಂದಿರುಗಿ ನೋಡಿದ. ಆಕೆಯನ್ನು ಅಲ್ಲಿ ಕಾಣದೇ ಇದ್ದಾಗ ಸಮಾಧಾನವಾಯಿತು. ಸದ್ಯ ನಾನು ಅಳುವುದನ್ನು ಆಕೆ ನೋಡಿಲ್ಲವಲ್ಲ. ನನ್ನ ದೌರ್ಬಲ್ಯ ಆಕೆಗೆ ಅರಿವಾಗುವುದು ಬೇಡ ಎಂದುಕೊಂಡು ಮುಖವನ್ನೆಲ್ಲಾ ಒರೆಸಿ ಸಹಜ ಸ್ಥಿತಿಯಲ್ಲಿರಲು ಪ್ರಯತ್ನಿಸಿದ.

ಅಷ್ಟು ಹೇಳಿದ್ದಕ್ಕೆ ಆಕೆಗೆ ಅಷ್ಟೊಂದು ಕೋಪ ಬಂದದ್ದು ಯಾಕಿರಬಹುದು ಬಹುಶಃ ಮಕ್ಕಳನ್ನು ನೋಡಿಕೊಳ್ಳಲು ನಾನು ಬಂದವಳಲ್ಲ ಎಂಬ ಭಾವನೆಯಿಂದ ಆಕೆ ಆ ರೀತಿ ವರ್ತಿಸಿದ್ದಿರಬೇಕು. ಇರಲಿ ನನ್ನ ಮಕ್ಕಳನ್ನು ಆಕೆ ಪ್ರೀತಿಸದಿದ್ದರೂ ಪರ್‍ವಾಗಿಲ್ಲ. ಪೀಡಿಸದಿದ್ದರೆ ಸಾಕು ಎಂದು ಮನದಾಳದಿಂದ ಪ್ರಾರ್ಥಿಸಿ ಮಲಗಲೆಂಬಂತೆ ಹಾಸಿಗೆಯತ್ತ ತೆರಳಿದ.

ಆಕೆ ಇನ್ನೂ ಬಂದಿಲ್ಲ ಎಂಬುದು ನೆನಪಾಗಿ ಬಾತ್‌ರೂಮಿಗೆ ಹೋಗಿರಬಹುದೆಂದು ತನ್ನನ್ನು ತಾನೇ ಸಮಾಧಾನ ಪಡಿಸಿಕೊಂಡು ಮುಸುಕೆಳೆದು ಮಲಗಲು ಪ್ರಯತ್ನಿಸಿದ. ನಿದ್ದೆ ಹತ್ತಿರ ಸುಳಿಯುತ್ತಿರಲಿಲ್ಲ. ಮನಸ್ಸು ಮರ್ಕಟದಂತಾಗಿತ್ತು.

ಆಕೆ ಇನ್ನೂ ಬಾರದಿದ್ದುದನ್ನು ಕಂಡು ಮುಸುಕು ಸರಿಸಿ ಎದ್ದು ಕುಳಿತು ಯೋಚಿಸ ತೊಡಗಿದ. ಆಕೆ ಎಲ್ಲಿಗೆ ಹೋಗಿರಬಹುದು? ನನ್ನ ಮಾತಿಗೆ ಕೋಪಗೊಂಡವಳು ಹಾಗೇ ಹೋಗಿದ್ದಿರಬಹುದೇ? ಅಲ್ಲ, ಈಗ ಈ ಅಪರಾತ್ರಿಯಲ್ಲಿ ಹೋದದ್ದಾದರೂ ಎಲ್ಲಿಗೆ ಎಂಬ ಜಿಜ್ಞಾಸೆಯೊಂದಿಗೆ ಆತಂಕವೂ ಸೇರಿಕೊಂಡಿತು.

ಬಾತ್‌ರೂಮ್, ಅಡುಗೆ ಕೋಣೆ, ಚಾವಡಿ ಎಲ್ಲಿಯೂ ಆಕೆಯ ಸುಳಿವಿರಲಿಲ್ಲ. ಮನಸ್ಸಿನ ಆತಂಕ ಬಲವಾಗ ತೊಡಗಿತು. ಮಕ್ಕಳ ಕೋಣೆಯಲ್ಲಿರಬಹುದೇ ಎಂಬ ಸಂಶಯ ಕಾಡಿದರೂ... ಅವಳ ಆಗಿನ ರೌದ್ರಾವತಾರದ ಮುಖ ನೆನಪಾದೊಡನೆ... ಇಲ್ಲ... ಅವಳು ಆ ಕೋಣೆಗೆ ತಪ್ಪಿಯೂ ಹೋಗಲಾರಳು ಎಂದೆನಿಸಿ ಸುಮ್ಮನಾದ. ಆದರೂ ಒಮ್ಮೆ ಇಣುಕಿ ಬರುವುದರಲ್ಲಿ ತಪ್ಪಿಲ್ಲವಲ್ಲ ಎಂದು ಅತ್ತ ಹೆಜ್ಜೆ ಹಾಕಿದ.

ಆ ದೃಶ್ಯ ಕಾಣುವಾಗ ಸ್ತಂಭೀಭೂತನಾದ. ನಾನು ನೋಡುತ್ತಿರುವುದು ಏನು? ಕನಸೊ ನನಸೊ ತಿಳಿಯದಂತಾಯಿತು. ಚಿಕ್ಕ ಮಕ್ಕಳನ್ನು ತಬ್ಬಿ ಹಿಡಿದು ಆಕೆ ಮಲಗಿದ್ದಳು. ಆಗ ನಾನು ಹೇಳಿದಾಗ ಕೆರಳಿದ ಸರ್ಪಿಣಿಯಂತಾಗಿದ್ದವಳು ಇವಳೇನಾ? ಎಂಬ ಸಂಶಯ ಕಾಡ ತೊಡಗಿತು.

ಆಕೆಯ ಕೈ ಮಗಳ ತಲೆಯನ್ನು ನೇವರಿಸುತ್ತಿರುವುದರಿಂದ ಆಕೆಗೆ ನಿದ್ದೆ ಬಂದಿಲ್ಲವೆಂದರಿವಾಯಿತು. ತನ್ನ ಇರುವನ್ನು ವ್ಯಕ್ತಪಡಿಸ ಲೆಂಬಂತೆ ತುಸು ಕೆಮ್ಮಿದ. ಬಡಬಡಿಸಿ ಎದ್ದವಳೇ ತಲೆವಸ್ತ್ರ ವನ್ನು ಸರಿಪಡಿಸಿಕೊಳ್ಳುತ್ತಾ ತಪ್ಪು ಮಾಡಿ ಸಿಕ್ಕಿ ಬಿದ್ದವಳಂತೆ ಒಂದು ಕಡೆ ತಲೆ ತಗ್ಗಿಸಿ ನಿಂತು ಬಿಟ್ಟಳು.

ಆತ ಅವಳ ಬಳಿ ಸಾಗಿ ಮೌನವಾಗಿ ದಿಟ್ಟಿಸ ತೊಡಗಿದ. ಆಕೆ ತಲೆ ಎತ್ತಿದಾಗ ಇಬ್ಬರ ಕಣ್ಣುಗಳೂ ಸಂಧಿಸಿದವು. ಆಕೆ ದೃಷ್ಟಿ ತಪ್ಪಿಸುತ್ತಾ, ತಲೆ ತಗ್ಗಿಸಿದಳು. ಆತ ಮೌನ ಮುರಿಯುತ್ತಾ ನಿಧಾನವಾಗಿ ಮಾತಿಗಾರಂಭಿಸಿದ, "ಆಗ ನಾನು ಹೇಳಿದ್ದಕ್ಕೆ ಅಷ್ಟೊಂದು ಕೋಪ ಬಂತಲ್ಲ. ಈಗ ನೋಡಿದರೆ..." ಮಾತು ನಿಲ್ಲಿಸಿದ.

"ಹೌದು ನೀವು ಹಾಗೆ ಹೇಳಿದರೆ ಈಗಲೂ ಕೋಪ ಬಂದು ಬಿಡುತ್ತದೆ. ಮತ್ಯಾಕೆ ಹಾಗೆ ಹೇಳಿದ್ದು ಚಿಕ್ಕಮ್ಮನಾಗಿ (ಮಲತಾಯಿಯಾಗಿ) ಇರು ಎಂದು? ನಾನು ಈ ಮಕ್ಕಳಿಗೆ ಚಿಕ್ಕಮ್ಮನಾಗಿ ಇರಲಿಕ್ಕೆ ಬಂದವಳಲ್ಲ. ಅಮ್ಮನಾಗಿ ಇರ್ಲಿಕ್ಕೆ ಬಂದವಳು. ನಾನು ಮರು ಮದುವೆಗೆ ಒಪ್ಪಿದ್ದೇ ಈ ಮಕ್ಕಳಿಗೋಸ್ಕರ"

ಆತನಿಗೆ ಸಂತೋಷದಿಂದ ಮಾತೇ ಹೊರಡದಂತಾಯಿತು. ಗರಬಡಿದಂತೆ ನಿಂತು ಬಿಟ್ಟ. ಆಕೆ ಮುಂದುವರಿಸುತ್ತಾ... ಮೊದಲು ಮರುಮದುವೆಗೆ ಒಪ್ಪದೇ ತಿರಸ್ಕರಿಸಿದ್ದೆ. ನಿಧಾನಕ್ಕೆ ಯೋಚಿಸಿದಾಗ ಈ ಮಕ್ಕಳ ಬಗ್ಗೆ ಚಿಂತೆಯಾಯಿತು. ನೀವು ಬೇರೆ ಯಾವಳನ್ನಾದರೂ ಮದುವೆಯಾದರೆ ಬಂದಾಕೆ, ಈ ಮಕ್ಕಳಿಗೆ ಮಲತಾಯಿಯಾಗಿ ಕಾಟ ಕೊಟ್ಟರೆ, ಈ ಮಕ್ಕಳು ಆಕೆಯ ಕೈಯಲ್ಲಿ ನಲುಗುವಂತಾದರೆ ಎಂಬ ಯೋಚನೆ ಬಂದದ್ದರಿಂದ ಈ ಮದುವೆಗೆ ಒಪ್ಪಿ ಕೊಳ್ಳಲೇ ಬೇಕಾಯ್ತು. ಯಾಕೆಂದರೆ ನಾನು ಕೂಡ ಬಾಲ್ಯದಲ್ಲಿ ಮಲತಾಯಿಯ ಹಿಡಿತದಲ್ಲೇ ಹಿಂಡಿ ಹಿಪ್ಪೆಯಾದವಳು. ನನ್ನ ಸ್ಥಿತಿ ಬೇರೆ ಯಾವ ಮಕ್ಕಳಿಗೂ ಬಾರದಿರಲಿ **(14ನೇ ಪುಟಕ್ಕೆ)**

## ಇಲ್ಲಿ ಶಿಕ್ಷೆ ಕತ್ತೆಗೆ

**(5ನೇ ಪುಟದಿಂದ)**

**ಕಬಳಿಕೆ ಏನು ಮಾಡಿದರೂ ಅವನನ್ನು ಹಿಡಿಯಲು, ಶಿಕ್ಷಿಸಲು ಸಾಕಷ್ಟು ಕಾಲಾವಧಿ ಇರುತ್ತದೆ. ರಾಷ್ಟ್ರಪತಿಗಳು, ರಾಜ್ಯಪಾಲರ ಅನುಮತಿಯೂ ಇದರಲ್ಲಿ ಕೆಲವರ ಮಟ್ಟಿಗೆ ಅಗತ್ಯವಿರುತ್ತದೆ. ಆದರೆ ಓರ್ವ ಜನ ಸಾಮಾನ್ಯನ ಮನೆಗೆ ಬುಲ್‌ಡೋಜರ್ ನುಗ್ಗಿಸಲು, ಕೊಳಚೆ ಪ್ರದೇಶ ನಿರ್ಮೂಲನೆಗೆ ಅಲ್ಲಿ ವಾಸಿಸುವವರನ್ನೇ ನಿರ್ಮೂಲನೆ ಮಾಡಲು, ಬೇಕಾಬಿಟ್ಟಿ ಸಿರಿವಂತರ ಅವೈಜ್ಞಾನಿಕ ಯೋಜನೆಗೆ ಅಡ್ಡಿ ಬರುವ ಬಡ ಹೋರಾಟಗಾರರನ್ನು ಟಾಡಾ, ಪೋಟಾ ಅಥವಾ ಅದಕ್ಕಿಂತಲೂ ಭೀಕರ ಕಾಯ್ದೆಗಳಲ್ಲಿ ಸಿಲುಕಿಸಿ ವರ್ಷಗಟ್ಟಲೆ ಜೈಲುವಾಸಿಯಾಗಲು ನಿಮಿಷಗಳು ಮಾತ್ರ ಸಾಕಾಗುತ್ತದೆ.**

**ಇದು ಕಾಣುತ್ತಿರುವ ವಾಸ್ತವ. ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳಲು ಇದು ಒಂದು ಕಾರಣವೆಂದಿನಿಸುವುದಿಲ್ಲವೇ?**

**ಈ ಬಡಜನರು 'ಉಗ್ರ'ರಾದರೆ ಅಚ್ಚರಿಯೇನು?**

# ವಿಮೆನ್ಸ್ ಪಿ.ಯು. ಕಾಲೇಜು: ಶೇ. 100 ಫಲಿತಾಂಶ


ಆಯಿಶಾ ಅತ್ತಹೂರ (553)


ಸಲ್‌ಮತ್ (541)


ಕುರ್ಶಿದ (528)


ತಸ್ರೀನ್ ಸಲಾಮ್ (524)


ಹಾಝುರಾ ನಗ್ಮ (522)


ಹುದಾ ಝ್ಯುಬ್ (514)


ಝುಲೈಕಾ ನಿಲೋಫರ್ (513)

ತೊಕ್ಕೊಟ್ಟು: ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿಮೆನ್ಸ್ ಇಸ್ಲಾಮಿಕ್ ಪಿ.ಯು. ಕಾಲೇಜ್ ಶೇ. 100 ಫಲಿತಾಂಶವನ್ನು ಪಡೆದಿದೆ. 88 ಮಂದಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು, 7 ಮಂದಿ ವಿಶಿಷ್ಟ ಶ್ರೇಣಿಯಲ್ಲಿ, 66 ಮಂದಿ ಪ್ರಥಮ, 14 ಮಂದಿ ದ್ವಿತೀಯ ಹಾಗೂ ಒಬ್ಬರು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

# ಹಿರಾ ಗರ್ಲ್ಸ್ ಹೈಸ್ಕೂಲ್: ಶೇ. 93 ಫಲಿತಾಂಶ

ತೊಕ್ಕೊಟ್ಟು: ಈ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬಬ್ಬುಕಟ್ಟೆಯ ಹಿರಾ ಗರ್ಲ್ಸ್ ಹೈಸ್ಕೂಲ್ ಶೇ. 93 ಫಲಿತಾಂಶ ಪಡೆದಿದೆ. 67 ಮಂದಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು, 3 ವಿದ್ಯಾರ್ಥಿನಿಯರು ವಿಶಿಷ್ಟ ಶ್ರೇಣಿಯಲ್ಲಿ, 39 ವಿದ್ಯಾರ್ಥಿನಿಯರು ಪ್ರಥಮ, 17 ವಿದ್ಯಾರ್ಥಿನಿಯರು ದ್ವಿತೀಯ ಹಾಗೂ 3 ವಿದ್ಯಾರ್ಥಿನಿಯರು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಈ ಸಾಧನೆಗೈದ ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

# ಪ್ರಶಸ್ತಿಗೆ ಅರ್ಜಿಗಳ ಆಹ್ವಾನ

ಮಂಗಳೂರು: ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ಸಲುವಾಗಿ ಎಸ್.ಐ.ಓ. ಮಂಗಳೂರು ನಗರ ಶಾಖೆಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕವನ್ನು ಗಳಿಸುವ ಜಿಲ್ಲೆಯ ಓರ್ವ ಮುಸ್ಲಿಮ್ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಗೆ ಮೌಲಾನ ಅಬ್ದುಲ್ ಗಫ್ಫಾರ್ ಪ್ರಶಸ್ತಿ ನೀಡಿ ಸನ್ಮಾನಿಸುತ್ತದೆ. ಪ್ರಶಸ್ತಿಯು ತಲಾ ರೂ. 2,500ನಗದು ಮತ್ತು ಪ್ರಶಸ್ತಿ ಪತ್ರ ಹೊಂದಿರುತ್ತದೆ.

ಅದೇ ರೀತಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಜಿಲ್ಲೆಯ ಓರ್ವ ವಿದ್ಯಾರ್ಥಿ ಹಾಗೂ ಓರ್ವ ವಿದ್ಯಾರ್ಥಿನಿಗೆ 'ಮರ್ಹೂಮ್ ಇಬ್ರಾಹೀಮ್ ಸಈದ್ ಪ್ರಶಸ್ತಿ' ನೀಡಿ ಸನ್ಮಾನಿಸಲಾಗುವುದು. ಪ್ರಶಸ್ತಿಯು ತಲಾ ರೂ.2,500 ನಗದು ಮತ್ತು ಪ್ರಶಸ್ತಿ ಪತ್ರ ಹೊಂದಿರುತ್ತದೆ.

ಆದ್ದರಿಂದ 2009-10ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಅಧಿಕ ಅಂಕಗಳನ್ನು ಪಡೆಯುವ ಎಲ್ಲಾ ಮಾಧ್ಯಮ (ಉರ್ದು, ಕನ್ನಡ, ಇಂಗ್ಲಿಷ್) ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ನಕಲು ಪ್ರತಿಯನ್ನು, ಶಾಲೆಯ ಮುಖ್ಯೋಪಾಧ್ಯಾಯರ ಧೃಢೀಕರಣ ಪತ್ರ ಹಾಗೂ ತಮ್ಮ ಸಂಪೂರ್ಣ ಸ್ವವಿಳಾಸದೊಂದಿಗೆ ಈ ಕೆಳಗಿನ ವಿಳಾಸಕ್ಕೆ ಜೂನ್ 10ರೊಳಗಾಗಿ ಕಳುಹಿಸಬೇಕೆಂದು ಕೋರಲಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ವಿಳಾಸ: ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಆಫ್ ಇಂಡಿಯಾ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ ಮಂಗಳೂರು- 575001**
**Ph: 0824-2422786, 9741636467**

# ಕವಿಗೋಷ್ಠಿ



ಬಳ್ಳಾರಿ: ಎಪ್ರಿಲ್ 24ರಂದು ಇಲ್ಲಿನ ಮಸ್ಜಿದ್ ಆವರಣದಲ್ಲಿ ಇದಾರ-ಎ-ಅದಬೆ ಇಸ್ಲಾಮಿಯ ವತಿಯಿಂದ 'ಗಗನಕ್ಕೇರುತ್ತಿರುವ ಬೆಲೆಗಳು' ಎಂಬ ವಿಷಯದಲ್ಲಿ ಕವಿಗೋಷ್ಠಿ ಜರಗಿತು. ಇದರಲ್ಲಿ 10 ಉರ್ದು ಕವಿಗಳು, 3 ಕನ್ನಡ ಕವಿಗಳು ಮತ್ತು ಓರ್ವ ಹಿಂದಿ ಕವಿ ಭಾಗವಹಿಸಿದ್ದರು. ಇದಾರ-ಎ-ಅದಬೆ ಇಸ್ಲಾಮಿ ಅಧ್ಯಕ್ಷರಾದ ಹೈದರ್ ಮಹಜರಿ ಸ್ವಾಗತಿಸಿದರು.

# ಅಪಾರ್ಥ

(13ನೇ ಪುಟದಿಂದ)

ಎನ್ನುವಾಗ ಆಕೆಯ ಕಣ್ಣಿನಲ್ಲಿ ನೋವು ಹೆಪ್ಪುಗಟ್ಟಿದ್ದು ಕಣ್ಣೀರ ಬಿಂದು ಧರೆಗುರುಳಲು ಹವಣಿಸುತ್ತಿರುವಂತಿತ್ತು.

ಛೇ... ಆಕೆಯ ಬಗ್ಗೆ ಅಪಾರ್ಥ ಮಾಡಿಕೊಂಡೆನಲ್ಲಾ ಎಂದಲುಬುತ್ತಾ ಆಕೆಯ ಬಳಿ ಸಾಗಿ ಆಕೆಯ ಕೈಯನ್ನಿಡಿಯುತ್ತಾ, "ನನ್ನನ್ನು ಕ್ಷಮಿಸು... ಇನ್ನು ಮುಂದೆ ನನ್ನ ಮಕ್ಕಳು ತಾಯಿಯಿಲ್ಲದ ತಬ್ಬಲಿಗಳಲ್ಲ... ನೀನೇ ಇನ್ನು ಮುಂದೆ ತಾಯಿ" ಎಂದಾಗ ಆಕೆಯ ಮುಖದಲ್ಲಿ ಪ್ರಜ್ವಲಿಸಿದ ಬೆಳಕನ್ನು ಕಂಡು ನನ್ನ ಮಕ್ಕಳು ಈಕೆಯ ಮಡಿಲಲ್ಲಿ ಅರಳಬಹುದೆಂಬ ಭರವಸೆ ಖಚಿತವಾಯಿತು. ಭಾರವಾಗಿದ್ದ ಹೃದಯ ಹೂವಿನಷ್ಟು ಹಗುರವಾಗಿದ್ದರಿಂದ ಹಿಡಿದ ಕೈಯನ್ನು ಮನಸಾರೆ ಚುಂಬಿಸಿದ.

# ಡಿಸ್ಟಿಂಕ್ಷನ್



ಮಂಗಳೂರು: ಇಲ್ಲಿನ ರೊಝಾರಿಯೋ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ವಿದ್ಯಾರ್ಥಿ ಆಸಿಫ್ ಸಲ್ಮಾನ್ ಅಹ್ಮದ್ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 567 (91%) ಅಂಕ ಪಡೆದು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಇವರು ಸನ್ಮಾರ್ಗ ಅಂಕಣಗಾರ ಮತ್ತು ಛಾಯಾಗ್ರಾಹಕರಾದ ಅಹ್ಮದ್ ಅನ್ವರ್ ಹಾಗೂ ಅನುಪಮ ಉಪಸಂಪಾದಕಿ ಶಹೀದಾ ಉಮರ್‌ರ ಪುತ್ರ.

# ರಜಾದಿನ ಶಿಬಿರ

ಕಡೂರು: ಎಪ್ರಿಲ್ 21 ಮತ್ತು 22ರಂದು ಜೆ.ಎ.ಸಿ. ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮ ನಡೆಯಿತು. ಶಿಬಿರದಲ್ಲಿ ಕುರ್‌ಆನ್ ಪಠಣ, ನಲತ್ ಮತ್ತು ಕ್ರೀಡಾ ಕೂಟ ನಡೆಯಿತು. ವಿಜಯಿಯಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮುಹಮ್ಮದ್ ರಿಯಾಝ್, 'ಪ್ರವಾದಿ ಜೀವನ ನಮಗೆ ಮಾದರಿ' ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಎಸ್.ಐ.ಓ. ಸ್ಥಾನೀಯ ಅಧ್ಯಕ್ಷ ಇಸ್ರಾರ್, ಡಾ| ಇಬ್ರಾಹೀಮ್ ನವೀದ್, ಶಾಹಿದ್, ಆಮಿರ್ ಹುಸೈನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮನ್ಸೂರಾ: ಶೇ. 100 ಫಲಿತಾಂಶ

ಹಾಸನ: ಮನ್ಸೂರಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 100% ಫಲಿತಾಂಶ ಪಡೆದಿರುತ್ತದೆ. ಇದರಲ್ಲಿ ಹನ್ನೆರಡು ಮಂದಿ ಪ್ರಥಮ ಶ್ರೇಣಿಯಲ್ಲಿ, 10 ಮಂದಿ ದ್ವಿತೀಯ ಹಾಗೂ 4 ಮಂದಿ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಒಟ್ಟು 26 ಮಂದಿ ಪರೀಕ್ಷೆಗೆ ಹಾಜರಾಗಿದ್ದರು.

Lead a healthy and nutritious life
LOSE OR GAIN WEIGHT
without leaving your daily favourite food
FOR FREE BODY FAT ANALYSIS AND COUNSELLING (at your doorstep)
Call: 09448417735, 09738994647
10-12-578, J.M. Road, Bunder, Mangalore- 575001

# ಇಸ್ಲಾಮಿ ರಜಾದಿನ ಶಿಬಿರ ಸಮಾರೋಪ




ತೊಕ್ಕೊಟ್ಟು: ಅಲ್ ಫುರ್ಕಾನ್ ಅರಬಿಕ್ ಇನ್‌ಸ್ಟಿಟ್ಯೂಟ್‌ನ ವತಿಯಿಂದ ಎಪ್ರಿಲ್ 19ರಿಂದ ಮೇ 5ರ ವರೆಗೆ ಬೇಸಿಗೆ ಇಸ್ಲಾಮಿ ರಜಾದಿನ ಶಿಬಿರವನ್ನು ಏರ್ಪಡಿಸಲಾಯಿತು. ಈ ಶಿಬಿರದಲ್ಲಿ ಕುರ್‌ಆನ್, ಹದೀಸ್, ಫಿಕ್ಹ್(ಕರ್ಮಶಾಸ್ತ್ರ) ಇಸ್ಲಾಮಿ ಇತಿಹಾಸ, ಪ್ರವಾದಿ ಜೀವನ, ಕುರ್‌ಆನ್ ಕಂಠಪಾಠ, ನೀತಿ ಪಾಠ, ವ್ಯಕ್ತಿತ್ವ ವಿಕಸನ, ಸ್ಟಡೀ ಮೆಥಡ್ ಹಾಗೂ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಮಂಗಳೂರಿನ ಶಾಸಕರಾದ ಯು.ಟಿ. ಕಾದರ್ ಶಿಬಿರದ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭದ ಉದ್ಘಾಟನೆಗೈದರು. ವೇದಿಕೆಯಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಮೌ| ಯಹ್ಯಾ ತಂಙಳ್ ಮದನಿ, ನಿರ್ದೇಶಕರಾದ ಮುಹಮ್ಮದ್ ಕುಂಞಿ, ಅಧ್ಯಕ್ಷರಾದ ಇಸ್ಹಾಕ್ ಕಲ್ಲಾಪು ಉಪಸ್ಥಿತರಿದ್ದರು. ಶಿಬಿರದಲ್ಲಿ ಒಟ್ಟು 130 ಮಕ್ಕಳು ಭಾಗವಹಿಸಿದ್ದರು. ಅಧ್ಯಾಪಕರಾದ ಆಸಿಫ್ ಇಕ್ಬಾಲ್ ಕಾರ್ಯಕ್ರಮ ನಿರೂಪಿಸಿದರು.

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8❖ ಸಂಚಿಕೆ: 9
❖ 1985 ಜೂನ್ 16 - 25

### ಹಗಲು ಸಿನೆಮಾ ನಿಷೇಧ

ದಿನ ಒಂದಕ್ಕೆ 240 ಮಾನವ ಕೆಲಸದ ಗಂಟೆಗಳು ಹಾಳಾಗುತ್ತಿವೆ. ಇದು ಕೇವಲ ರಾಜಧಾನಿ ಬೆಂಗಳೂರು ನಗರ ಒಂದರ ಪರಿಸ್ಥಿತಿ. ಇನ್ನು ದೇಶದಾದ್ಯಂತ ಎಷ್ಟು ಕೋಟಿ ಮಾನವ ದಿನಗಳು ಹಾಳಾಗುತ್ತವೋ? ನಮ್ಮ ಸಿನೆಮಾಗಳು ಮಾಡುತ್ತಿರುವ ಈ ವಿನಾಶ ವನ್ನು ಸಚಿವ ಜೆ.ಹೆಚ್. ಪಾಟೀಲ್ ಖಂಡಿಸಿದ್ದಾರೆ. ಶಾಲೆ-ಕಾಲೇಜುಗಳಲ್ಲಿ, ಮಳಿಗೆ-ಕಾರ್ಖಾನೆಗಳಲ್ಲಿ, ಹೊಲ-ಗದ್ದೆಗಳಲ್ಲಿ, ಕೋರ್ಟು-ಕಚೇರಿಗಳಲ್ಲಿ ದುಡಿಯ ಬೇಕಾದ ದೇಶದ ಪ್ರಜೆಗಳು ಟಿಕೇಟಿಗಾಗಿ ಕ್ಯೂ ನಿಲ್ಲುವುದಕ್ಕೆ ಹಾಗೂ ಸಿನೆಮಾ ನೋಡುವುದಕ್ಕೆ ವ್ಯಯಿಸುತ್ತಿರುವುದರ ಬಗ್ಗೆ ಅವರು ಸಹಜವಾಗಿಯೇ ಕಳವಳ ವ್ಯಕ್ತಪಡಿಸಿದ್ದಾರೆ.

(ಸಂಪಾದಕೀಯದಿಂದ)

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.
(ಕುರ್‌ಆನ್ 2:29)
Managing Partner
RAJA BRICKS & TILE INDUSTRIES
P.B. No. 34, Rajanagar, Sira Road,
Tumkur - 572 101. Karnataka, India
Ph: 0816 - 6531933/44/55, Fax: 0816 - 2211633

## ಶೈಕ್ಷಣಿಕ ಮಾಹಿತಿ ಕಾರ್ಯಾಗಾರ




**ಕಸ್ಬಾ ಬೆಂಗರೆ:** ಸ್ಥಾನೀಯ ಎಸ್.ಐ.ಓ. ವತಿಯಿಂದ ಮೇ 9ರಂದು ಇಲ್ಲಿನ ಸರಕಾರಿ ಹಿರಿಯ ಪ್ರೌಢ ಶಾಲಾ ವಠಾರದಲ್ಲಿ 'SSLC, PUC ನಂತರ ಮುಂದೇನು?' ಎಂಬ ವಿಷಯದಲ್ಲಿ 'ಶೈಕ್ಷಣಿಕ ಮಾಹಿತಿ ಕಾರ್ಯಾಗಾರ'ವನ್ನು ಹಮ್ಮಿಕೊಳ್ಳಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ ತೊಕ್ಕೋಟು ವುಮೆನ್ಸ್ ಕಾಲೇಜಿನ ಉಪನ್ಯಾಸಕಿ ಮರ್ಯಮ್ ಶಹೀರಾ ಮಾತಾಡಿ, "ಪ್ರಪ್ರಥಮವಾಗಿ ಅವತೀರ್ಣಗೊಳಿಸಿದ ಪವಿತ್ರ ಕುರ್‌ಆನಿನ ಐದು ಸೂಕ್ತಗಳಲ್ಲಿ ಅಲ್ಲಾಹನು ಯಾವುದೇ ಆರಾಧನಾ ಕರ್ಮಗಳನ್ನು ಪ್ರಸ್ತಾಪಿಸದೆ, ಶಿಕ್ಷಣದ ವಿಷಯವಾಗಿ 'ಇಕ್ರಅ್' ಅಂದರೆ 'ಓದಿರಿ' ಎಂದು ಪ್ರಾರಂಭಿಸಿದ್ದಾನೆ. ಪವಿತ್ರ ಕುರ್‌ಆನಿನ ಇನ್ನೂ ಅನೇಕ ಕಡೆಗಳಲ್ಲಿ ಅಲ್ಲಾಹನು "ನೀವೇನು ಯೋಚಿಸುವುದಿಲ್ಲವೇ? ನೀವು ಗ್ರಹಿಸುವುದಿಲ್ಲವೇ? ನೀವೇನು ಚಿಂತಿಸುವುದಿಲ್ಲವೇ? ಎಂದು ಪ್ರಶ್ನಿಸುವ ಮುಖಾಂತರ ಸತ್ಯವಿಶ್ವಾಸಿಗಳನ್ನು ವಿದ್ಯಾವಂತರನ್ನಾಗಲು ಪ್ರೇರೇಪಿಸಿದ್ದಾನೆ" ಎಂದು ಇಸ್ಲಾಮ್ ಶಿಕ್ಷಣಕ್ಕೆ ನೀಡಿರುವ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಮುಖ್ಯ ಉಪನ್ಯಾಸಕರಾಗಿ ಕಾರವಾರದಿಂದ ಆಗಮಿಸಿದ ಉದ್ಯೋಗ ವಿನಿಮಯ ಕೇಂದ್ರ ಇದರ ನಿವೃತ್ತ ಸಹಾಯಕ ನಿರ್ದೇಶಕರಾದ ಶ್ರೀ ಯು.ಎಂ.ಸಿರ್ಸಿಕರ್ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸುಗಳ ಬಗ್ಗೆ ಹಾಗೂ ಸರಕಾರದಿಂದ ಲಭ್ಯವಿರುವ ಸವಲತ್ತುಗಳ ಬಗ್ಗೆಯೂ ವಿವರವಾಗಿ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಐ.ಓ. ಪಶ್ಚಿಮ ವಲಯದ ಅಧ್ಯಕ್ಷರಾದ ಬ್ರ| ಅಶ್ಫಾಕ್ ಅಹ್ಮದ್ ವಹಿಸಿ ಸಮಾರೋಪ ನಡೆಸಿದರು. ಬ್ರ| ಅಬ್ದುಲ್ಲತೀಫ್ ಆಲಿಯಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಜ| ಅಬ್ದುಲ್ ಕರೀಮ್ ಸಾಬ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ನಿಧನ

● **ಮಂಗಳೂರು:** ಇಲ್ಲಿನ ಬಂದರ್‌ನ ಜುಮ್ಮಾ ಮಸೀದಿ ರಸ್ತೆಯಲ್ಲಿ ನಂದಿನಿ ಹಾಲು ವ್ಯಾಪಾರ ಮಾಡುತ್ತಿದ್ದ ದಿ| ಇದಿನಬ್ಬರವರ ಪುತ್ರ ಮುಹಮ್ಮದ್ ಶಫೀಕ್(52)ರವರು ಮೇ 16ರಂದು ಗುರುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಸಹಿತ ಈರ್ವರು ಪುತ್ರರು ಹಾಗೂ ಅಪಾರ ಬಂಧು-ಮಿತ್ರಾಧಿಗಳನ್ನು ಅಗಲಿದ್ದಾರೆ.



● **ಮಂಗಳೂರು:** ಇಲ್ಲಿನ ಬೀಬಿ ಅಲಾಬಿ ರಸ್ತೆಯ ನಿವಾಸಿ ದಿ| ಅಹ್ಮದ್ ಮಾಸ್ಟರ್‌ರವರ ಮಗ ನಿವೃತ್ತ ದೈಹಿಕ ಶಿಕ್ಷಕ ಮುಹಮ್ಮದ್ ಶರೀಫ್(70)ರವರು ಅನಾರೋಗ್ಯದಿಂದ ಮೇ 8ರ ಶುಕ್ರವಾರ ನಿಧನರಾದರು. ಮೃತರು ಪತ್ನಿ ಸಹಿತ ಮೂವರು ಪುತ್ರರು, ಈರ್ವರು ಪುತ್ರಿಯರನ್ನೂ ಅಪಾರ ಬಂಧು-ಬಾಂಧವರನ್ನೂ ಅಗಲಿರುತ್ತಾರೆ. ಮೃತರು ದ.ಕ. ಜಿಲ್ಲಾ ಫುಟ್‌ಬಾಲ್ ಎಸೋಸಿಯೇಶನ್ ಮತ್ತು ಗುಜರಿ ಹಾಗೂ ಕಬ್ಬಿಣ ವ್ಯಾಪಾರಸ್ಥರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು.

● **ಮಂಗಳೂರು:** ಇಲ್ಲಿನ ಮಂಜಲ್‌ಬೈಲ್‌ನ ನಿವಾಸಿಯಾಗಿದ್ದ ದಿ| ಪಿ.ಕೆ. ಹುಸೈನ್‌ರವರ ಪತ್ನಿ ಬೀಫಾತಿಮಾ (81) ಅವರು ಅಲ್ಪಕಾಲದ ಅಸ್ವಾಸ್ಥ್ಯದ ಬಳಿಕ ಮೇ 5ರಂದು ಕಂಕನಾಡಿಯ ತನ್ನ ಮಗಳ ಮನೆಯಲ್ಲಿ ನಿಧನರಾದರು. ಮೃತರು ಓರ್ವ ಪುತ್ರ ಹಾಗೂ ಜಮಾಅತ್ ಸದಸ್ಯೆ ಆಯಿಶಾ ನೂರ್ ಸಹಿತ ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

**ಮೃತರೆಲ್ಲರಿಗೂ ಅಲ್ಲಾಹನು ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಿ ಅನುಗ್ರಹಿಸಲಿ. (ಆಮೀನ್)**

## ಡಿಸ್ಟಿಂಕ್ಷನ್



**ಪುತ್ತೂರು:** ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಇಲ್ಲಿನ ಸೈಂಟ್ ಫಿಲೋಮಿನಾ ಹೈಸ್ಕೂಲ್‌ನ ವಿದ್ಯಾರ್ಥಿ ಮಿನ್‌ಹಾಜ್ ಅಹ್ಮದ್ 548 (88%) ಅಂಕಗಳೊಂದಿಗೆ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಎಸ್.ಐ.ಓ. ಸ್ಥಾನೀಯ ಅಧ್ಯಕ್ಷರಾಗಿರುವ ಇವರು ಹಮೀದ್ ಮತ್ತು ಶಂಶಾದ್ ದಂಪತಿಯ ಪುತ್ರ.

## ಬ್ಯಾರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

**ಬೆಂಗಳೂರು:** 2010-11ನೇ ಸಾಲಿನ ವಿವಿಧ ಕೋರ್ಸುಗಳಿಗೆ ಪ್ರವೇಶ ಬಯಸುವ ಬ್ಯಾರಿ ಸಮುದಾಯದ ಅರ್ಹ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಯೋಜನೆಯೊಂದನ್ನು ಬೆಂಗಳೂರಿನ 'ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್' ಹಮ್ಮಿಕೊಂಡಿದೆ. ಪಿ.ಯು.ಸಿ./ಪದವಿ/ಸ್ನಾತ್ತಕೋತ್ತರ/ಡಿಪ್ಲೊಮಾ/ನರ್ಸಿಂಗ್/ಫಾರ್ಮಸಿ ಹಾಗೂ ಇನ್ನಿತರ ವೃತ್ತಿ ಆಧಾರಿತ ಕೋರ್ಸುಗಳಿಗೆ ಸೇರಲಿಚ್ಛಿಸುವ, ಕನಿಷ್ಠ 60ಶೇಕಡಾದಷ್ಟು ಅಂಕ ಪಡೆದ ಬ್ಯಾರಿ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ. ಅಂಗವಿಕಲ/ಅನಾಥ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ನಿಗದಿತ ನಮೂನೆಯಲ್ಲೇ ಅರ್ಜಿ ಸಲ್ಲಿಸಬೇಕಾಗಿದ್ದು ಮೇ 20 ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಯನ್ನು www.bearyswelfareassociation.comನಿಂದ ಅಥವಾ asifmasoodm@rediffmail.comಗೆ ಇಮೇಲ್ ಮಾಡುವ ಮೂಲಕ ಅಥವಾ ಆಸಿಫ್ ಮಸೂದ್, ಎಫ್.ಎಫ್.4, ಶುಭೋದಯ ರೆಸಿಡೆನ್ಸಿ, ವಿಜಯ ಬ್ಯಾಂಕ್ ಹತ್ತಿರ, ಸಂಜಯ ನಗರ, ಬೆಂಗಳೂರು- 500094ನ್ನು ಸಂಪರ್ಕಿಸಿ ಪಡೆಯಬಹುದೆಂದು ದಿ ಬ್ಯಾರಿಸ್ ಮೆರಿಟ್ ಕಮ್ ಮೀನ್ಸ್ ಸ್ಕಾಲರ್ ಶಿಪ್ ಕಮಿಟಿಯ ಸಂಚಾಲಕ ಅತ್ತೂರು ಚೆಯ್ಯಬ್ಬ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**WANTED**

**B.A. Afzalul Ulema, GIO ಕಾರ್ಯಕರ್ತೆ. 5 ಅಡಿ ಎತ್ತರ ಆಕರ್ಷಕ ಮೈಬಣ್ಣದ ಯುವತಿಗೆ ಯೋಗ್ಯ ವರ ಬೇಕಾಗಿದೆ.**
**ಬರೆಯಿರಿ:**
**Box No: 223**
C/o. Sanmarga Weekly,
P.B. No. 16,
Mangalore - 575001

edusupport

# ಕನಸಿನ ಸಾಕ್ಷಾತ್ಕಾರ



**ಹಿರಾ ಫೌಂಡೇಶನ್ ಮಂಗಳೂರು**

**ಸ್ಥಾಪನೆ:- 2004ರಲ್ಲಿ ಸ್ಥಾಪನೆಗೊಂಡಿತು.**

**ಉದ್ದೇಶ:-**

● ಸಮುದಾಯದ ಯುವಕ-ಯುವತಿಯರು ಶಿಕ್ಷಣ ಗಳಿಸುವಂತೆ ಪ್ರೋತ್ಸಾಹಿಸುವುದು. ಅವರನ್ನು ಉನ್ನತ ವ್ಯಾಸಂಗ ಗಳಿಸುವಂತೆ ಪ್ರೋತ್ಸಾಹಿಸುವುದು. ● ಸಮೀಕ್ಷೆ ನಡೆಸಿ ಅರ್ಹ ಬಡ ಹಾಗೂ ಪ್ರತಿಭಾನ್ವಿತ ಮುಸ್ಲಿಮ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದು. ● ವಿಶೇಷವಾಗಿ ಮುಸ್ಲಿಮ್ ವಿದ್ಯಾರ್ಥಿನಿಯರಿಗೆ ಧಾರ್ಮಿಕ ಹಾಗೂ ಲೌಕಿಕ ಸಮನ್ವಯಿತ ಶಿಕ್ಷಣಗಳನ್ನು ನೀಡಲು ಪ್ರೋತ್ಸಾಹಿಸುವುದು.

**ಸ್ಕಾಲರ್‌ಶಿಪ್:-**

| | | | | | | |
|---|---|---|---|---|---|---|
| ಮೊತ್ತ | 1,41,000/- | 2,25,295/- | 2,29,790/- | 2,57,070/- | 3,23,015/- | 3,55,100/- |
| ವಿದ್ಯಾರ್ಥಿಗಳು | 75 | 109 | 140 | 162 | 190 | 160 |
| ವರ್ಷ | 2004 | 2005 | 2006 | 2007 | 2008 | 2009 |

**ಕಳೆದ 6 ವರ್ಷಗಳಲ್ಲಿ 873 ವಿದ್ಯಾರ್ಥಿಗಳಿಗೆ ಒಟ್ಟು ರೂ. 15,31,670/- ಸ್ಕಾಲರ್‌ಶಿಪ್ ನೀಡಲಾಗಿದೆ.**

**ಗುರಿ:-** ಪ್ರಸಕ್ತ ವರ್ಷ 250 ವಿದ್ಯಾರ್ಥಿಗಳಿಗೆ ರೂ. 6 ಲಕ್ಷ ಸ್ಕಾಲರ್‌ಶಿಪ್ ನೀಡುವ ಯೋಜನೆಯನ್ನು ಹಿರಾ ಫೌಂಡೇಶನ್ ಇಟ್ಟು ಕೊಂಡಿದೆ.

**ಮನವಿ:- ಸಹೋದರರೇ, ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಸಹಕಾರಿಯಾಗುವಂತೆ ನೀವು ಆದಷ್ಟು ಹೆಚ್ಚು ಧನ ಸಹಾಯವನ್ನು ಹಿರಾ ಫೌಂಡೇಶನ್‌ಗೆ ನೀಡಬೇಕೆಂದು ವಿನಂತಿಸುತ್ತೇವೆ. ಚೆಕ್ ಅಥವಾ ಡಿ.ಡಿಯನ್ನು 'Hira Foundation Mangalore' ಹೆಸರಲ್ಲಿ SB A/c. 01042200052512, Syndicate Bank, Mission Street, Mangalore ಬರೆಯಿರಿ.**

**ವಿದ್ಯಾದಾನ, ಫಲಪ್ರದ, ಪುಣ್ಯದಾಯಕ**

ತಮ್ಮ ಸಂಪತ್ತನ್ನು ಅಹೋರಾತ್ರಿ ರಹಸ್ಯವಾಗಿಯೂ, ಬಹಿರಂಗವಾಗಿಯೂ ಖರ್ಚು ಮಾಡುವವರ ಪ್ರತಿಫಲ ಅವರ ಪ್ರಭುವಿನ ಬಳಿ ಇದೆ. (ಪವಿತ್ರ ಕುರ್‌ಆನ್)

**HIRA FOUNDATION**

HIDAYATH CENTRE, BIBI ALABI ROAD, MANGALORE - 575 001 ☎: 2410358, 9901318820

ಅಲ್ಲಾಹನ ಸಂತುಷ್ಟಿಗಾಗಿ 'ಹಜ್ಜ್' ಮತ್ತು 'ಉಮ್ರಾ'ಗಳ ಸಂಕಲ್ಪ ಮಾಡಿದಾಗ ಅದನ್ನು ಪೂರ್ತಿಗೊಳಿಸಿರಿ. (ಪವಿತ್ರ ಕುರ್‌ಆನ್: 2:196)

International Travels
AIT

K.M. Haris, Abdul Samad

**Aysha INTERNATIONAL TRAVELS**

ಆಯಿಶಾ ಇಂಟರ್‌ನ್ಯಾಷನಲ್ ಟ್ರಾವೆಲ್ಸ್

**HAJ & UMRAH**
**Mangalore to Mangalore**
**UMRA PACKAGE 45,000/-***

**HAJ PACKAGE**
**First Class 1,85,000/-**
**Second Class 1,65,000/-**

*CONDITION APPLIED




• Domestic & International Air Tickets • Passport Service • Emigration • Visit Visa • Visa Clearence

Sadananda Towers Annex, 1st Floor, D-No. 2-2-62B7, City Bus Stand, Udupi-576101.
Ph: 0820-4294313 Fax: 0820-4294313 Mob: 9844970812, 9880172472
E-mail : haris_yachi@yahoo.com

Now @ Kankanady



Rifa
Burkha House
We CRAFT as per your Choice ...
Shop No. 220, Kunil Complex,
Kankanady, Mangalore
Ph. : 2434543
Cell : 94815 14543
94815 14541

To.______________________________

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಮೇ 16 – 22 / 1431 ಜುಮಾದಿಲ್ ಆಖರ್ 01 – 07

BIS 916 ಹಾಲ್‌ಮಾರ್ಕ್ ಚಿನ್ನಕ್ಕೆ ಮಂಗಳೂರಿಗಿಂತ ಅತ್ಯಂತ ಕಡಿಮೆ ದರ: ಕಾಸರಗೋಡು ಸುಲ್ತಾನ್‌ನಲ್ಲಿ
Sulthan GOLD INTERNATIONAL
ಮದುವೆಯ ಖರೀದಿಗೆ ವಿಶೇಷ ರಿಯಾಯಿತಿ.



KASARAGOD. Ph: 0499-220064, 223746

'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 11-05-2010 (Tuesday) & 13-05-2010 (Thursday)

# ದಾಳಿಕೋರರು ಇಸ್ರೇಲ್ ಯುವಕರೇ?

(ಮುಖಪುಟದಿಂದ)

ಸ್ವೀಕರಿಸಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ನಾರಿಮನ್ ಹೌಸ್‌ಗೆ ಅತಿ ಸಮೀಪದಲ್ಲಿರುವ ಕೋಲವಾಡದ ಆರ್ಝೂಬಾಯಿ ಕಟ್ಟಡದಲ್ಲಿ ಅನಾಮಿಕಾ ವಾಸಿಸುತ್ತಿದ್ದರು. ಅನಾಮಿಕಾ ತನ್ನ ಗೆಳತಿಯರಾಗಿರುವ ಸಾರಿಕಾ ಉಪಾಧ್ಯಾಯ, ಮಿನಾಕ್ಷಿ ದತ್ತಾನಿ ಎಂಬವರ ಜೊತೆಗೆ ಲಿಯೋಪೋರ್ಡ್ ಕೆಫೆಗೆ ನಿತ್ಯ ಸಂದರ್ಶಕರಾಗಿದ್ದರು. ರೂಢಿಯಂತೆ 2008 ನವೆಂಬರ್ 26ರಂದು ರಾತ್ರಿ ಅನಾಮಿಕಾ ಮತ್ತು ಗೆಳತಿಯರು ಲಿಯೋಪೋರ್ಡ್ ಕೆಫೆಯಲ್ಲಿ ಮಾತಾಡುತ್ತಿದ್ದಾಗ ಭಯೋತ್ಪಾದಕರು ಗ್ರೇನೇಡ್ ಎಸೆದರು ಮತ್ತು ಗುಂಡು ಹಾರಿಸಿದ್ದರು. ಈ ಆಕ್ರಮಣದಲ್ಲಿ ಅನಾಮಿಕಾರ ಹೊಟ್ಟೆಗೆ ಮೂರು ಗುಂಡುಗಳು ಮತ್ತು ಕಾಲುಗಳಿಗೆ ಗ್ರೇನೇಡ್‌ನ ಚೂರುಗಳು ನುಸುಳಿದ್ದವು. ಸಾರಿಕಾರ ಎಡಗೈಗೆ ಗುಂಡು ತಗುಲಿತ್ತು. ಸಾರಿಕಾರ ಶರೀರವಿಡೀ ಗ್ರೇನೆಡ್ ಚೂರುಗಳು ಚುಚ್ಚಿದ್ದವು. ಶಸ್ತ್ರಕ್ರಿಯೆಯ ಬಳಿಕ ಮರಳಿ ಜೀವವನ್ನು ಪಡೆದುಕೊಂಡ ನಂತರ ಅನಾಮಿಕಾ ಕೆಲವು ಸತ್ಯಗಳನ್ನು ಕೂಗಿ ಹೇಳುತ್ತಿದ್ದಾರೆ. ಆದರೆ ಪೊಲೀಸರು ಅದಕ್ಕೆ ಯಾವ ಬೆಲೆಯನ್ನೂ ನೀಡಿಲ್ಲ. ಮಾತ್ರವಲ್ಲ, ನಾರಿಮನ್ ಹೌಸ್‌ನಲ್ಲಿ ಭಯೋತ್ಪಾದಕರನ್ನು ನೋಡಿದ್ದೇನೆ ಎಂಬ ವಿಷಯವನ್ನು ಹೊರಗೆಲ್ಲ ಹೇಳಬಾರದೆಂದು ಅವರಿಗೆ ಬುದ್ಧಿವಾದ ಹೇಳಲಾಗಿತ್ತು.

ಭಯೋತ್ಪಾದನಾ ದಾಳಿ ನಡೆಯುವುದಕ್ಕೆ ಎರಡು ದಿವಸ ಮುಂಚೆ ಲಿಯೋಪೋರ್ಡ್ ಕೆಫೆಯ ಬಳಿಯಲ್ಲಿರುವ 'ಪಾನ್–ಸಿಗರೇಟ್' ಅಂಗಡಿಗೆ ಹೋಗುವಾಗ ನಾರಿಮಾನ್ ಹೌಸ್‌ನಿಂದ ನಾಲ್ಕು ಮಂದಿ ಅದೇ ಸುಂದರವಾದ ಬೈಕಿನಲ್ಲಿ ಹೊರಬರುವುದನ್ನು ನಾನು ನೋಡಿದ್ದೇನೆ ಎಂದು ತನ್ನ ಲೋವರ್ ಪರೇಲ್‌ನಲ್ಲಿರುವ ವಸತಿಯಲ್ಲಿ ಅನಾಮಿಕಾ ಮಾಧ್ಯಮಕ್ಕೆ ತಿಳಿಸಿದ್ದಾರೆ. ಭಯೋತ್ಪಾದನಾ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಅನಾಮಿಕಾರಿಗೆ ಪುನರ್ವಸತಿ ಸಂಬಂಧವಾಗಿ ಟಾಟಾ–ಲೋವರ್ ಪರೇಲ್‌ನ ಮನೆಯನ್ನು ಒದಗಿಸಲಾಗಿದೆ.

ಬೈಕ್‌ನ ಅಂದಚೆಂದವು ಅದರಲ್ಲಿ ಕೂತಿರುವವರನ್ನು ಗಮನಿಸುವುದಕ್ಕೆ ಕಾರಣವಾಗಿತ್ತು. ಅವು ಕಪ್ಪು ಮತ್ತು ಕೆಂಪು ಬಣ್ಣದ ಬಿ.ಎಂ.ಡಬ್ಲ್ಯೂ. ಬೈಕುಗಳಾಗಿದ್ದವು. ಆ ನಂತರದ ದಿವಸಗಳಲ್ಲಿ ಆ ಬೈಕನ್ನು ಮತ್ತು ಅದರ ಸವಾರರನ್ನು ನೋಡಿದ್ದೇನೆ. ಅವರಲ್ಲೊಬ್ಬ ಕಸಬ್ ಆಗಿದ್ದನು. ಅಂದು ಅವನು ಕೂದಲನ್ನು ಹಿಂದಕ್ಕೆ ಬಾಚಿಕೊಂಡಿದ್ದನು. ಕಪ್ಪು ಟೀಶರ್ಟ್, ನೀಲಿ ಕಾರ್ಗೋ ಪ್ಯಾಂಟ್ ಮತ್ತು ಸ್ಪೋರ್ಟ್ಸ್ ಶೂ ಧರಿಸಿದ್ದನು. ಅವನ ಜತೆ ಸುಂದರನಾದ ಇನ್ನೊಬ್ಬ ವ್ಯಕ್ತಿಯೂ ಇದ್ದನು. ಎರಡು ಭಾಗಗಳಿಗೆ ಕ್ರಾಪ್ ಬಾಚಿ ಅದರ ಮಧ್ಯದಲ್ಲಿ ಕೂದಲನ್ನು ಬಿಟ್ಟಿದ್ದನು. ಅವರ ಜೊತೆ ಸ್ವಲ್ಪ ವಯಸ್ಸಿನವನಾದ ವಿದೇಶಿ ವ್ಯಕ್ತಿಯೂ ಇದ್ದನು ಎಂದು ಅನಾಮಿಕಾ ವಿವರಿಸಿದ್ದಾರೆ.

ಘಟನೆ ನಡೆದ ದಿವಸ ಲಿಯೋಪೋರ್ಡ್ ಕೆಫೆಯಲ್ಲಿ ನಾವು ಕೂತಿದ್ದ ಮೇಜಿನ ಪಕ್ಕದಲ್ಲಿಯೇ ಆ ಸುಂದರ ಯುವಕನನ್ನು ನೋಡಿದೆ. ನನ್ನ ಮುಂದೆ ಸಾರಿಕಾ ಕೂತಿದ್ದಳು. ಸಾರಿಕಾಳ ಫೋಟೋವನ್ನು ತೆಗೆಯುವ ನೆಪ ಮಾಡಿ ಆ ಯುವಕನ ಫೋಟೋವನ್ನು ತೆಗೆದಿದ್ದೆ. ತಟ್ಟನೆ ಎಲ್ಲವೂ ಬದಲಾವಣೆಗೊಂಡಿತು. ಆ ಸುಂದರ ವ್ಯಕ್ತಿ ಬಗ್ಗಿ ತನ್ನ ಬ್ಯಾಗಿನಿಂದ ಏನನ್ನೋ ಹೊರಗೆ ತೆಗೆದು ಕೌಂಟರಿನೆಡೆಗೆ ಎಸೆದನು. ಅದು ಗ್ರೇನೇಡಾಗಿತ್ತು. ಆನಂತರ ಒಂದೇ ಸಮನೆ ಗುಂಡು ಹಾರಿಸಲಾಗಿತ್ತು. ಜೆ.ಜೆ. ಹಾಸ್ಪಿಟಲ್‌ನಲ್ಲಿ ಪ್ರಜ್ಞೆ ಬಂದಾಗ ಪೊಲೀಸರು ಜೀವ ಸಹಿತ ಬಂಧಿಸಿದ್ದ ಕಸಬ್‌ನನ್ನು ಅನಾಮಿಕಾ ಗುರುತು ಹಚ್ಚಿದ್ದಳು. ಘಟನೆ ನಡೆದ ದಿವಸ 10 ಭಯೋತ್ಪಾದಕರು ಸಮುದ್ರ ದಾಟಿ ಬಂದಿದ್ದಾರೆಂಬವಾದ ಸರಿಯಾಗಿರಬಹುದು. ಆದರೆ ಅದರಲ್ಲಿ ಲಿಯೋಪೋರ್ಡ್ ಕೆಫೆಯ ಧಾಳಿ ಮಾಡಿದವನು ಕಸಬ್ ಎನ್ನುವ ವಾದವನ್ನು ಸ್ವೀಕರಿಸಲಾಗದು. ನಾರಿಮನ್ ಹೌಸ್‌ನಲ್ಲಿ ಕಸಬ್ ಮತ್ತು ಮೂವರು ಮಾತ್ರವಲ್ಲ 30ಕ್ಕೂ ಅಧಿಕ ಮಂದಿ ಅಲ್ಲಿರಬಹುದು ಎಂದು ಅನಾಮಿಕ ಹೇಳುತ್ತಾರೆ. 25ನೇ ತಾರೀಕಿನಿಂದ ಬೆಳಿಗ್ಗೆ ನಾರಿಮನ್ ಹೌಸ್‌ನ ಎದುರು ಭಾಗದಲ್ಲಿರುವ ನಸ್ಸಿಖಾನ್‌ರ ಮನೆಗೆ ಹೋದಾಗ ನಾರಿಮನ್ ಹೌಸ್‌ನ ಟೆರೇಸ್‌ನಲ್ಲಿ ಯುವಕರು ವ್ಯಾಯಾಮ ನಡೆಸುವುದನ್ನು ನೋಡಿದ್ದೇನೆಂದು ಅನಾಮಿಕ ಹೇಳುತ್ತಾರೆ. ಸಾಮಾನ್ಯವಾಗಿ ನಾರಿಮನ್ ಹೌಸ್‌ಗೆ ಇಸ್ರೇಲಿಯರ ಹೊರತು ಬೇರಾರೂ ಹೋಗುವ ರೂಢಿಯಿಲ್ಲ. ಅವರು ಊರು ತಿರುಗಾಡಲು ಭಾರತಕ್ಕೆ ಬಂದಿರುವ ಇಸ್ರೇಲಿ ಯುವಕರಾಗಿರಬಹುದೆಂದು ಅಕ್ಕಪಕ್ಕದ ಮನೆಯವರು ಭಾವಿಸಿದ್ದರು.

ಚಾನೆಲ್ಲೊಂದರಲ್ಲಿ ತಾನು ಈ ವಿಚಾರವನ್ನು ಬಹಿರಂಗಪಡಿಸಿದ ಮೇಲೆ ಪೊಲೀಸರು ನನ್ನನ್ನು ವಿಚಾರಿಸಿದರೂ ಯಾವ ಪ್ರಯೋಜನವೂ ಆಗಿಲ್ಲ. ನನ್ನನ್ನು 2009ರ ನವೆಂಬರ್‌ನಲ್ಲಿ ಎರಡನೇ ಬಾರಿ ಪ್ರಶ್ನಿಸಲಾಯಿತು. ಅಡಿಶನಲ್ ಪೊಲೀಸ್ ಕಮಿಶನರ್ (ಕ್ರೈಮ್) ದೇವನ್ ಭಾರತಿಯವರ ನೇತೃತ್ವದಲ್ಲಿ ವಿಚಾರಣೆ ನಡೆಸಿದಾಗ ಹೆಚ್ಚು ಮಾಹಿತಿ ಹೇಳಿ ಪೊಲೀಸರನ್ನು ಕೆಟ್ಟದಾಗಿ ಚಿತ್ರೀಕರಿಸಬಾರದೆಂದು ದೇವನ್ ಭಾರತಿ ಹೇಳಿದರು. ಆಮೇಲೆ ನನಗೆ ಮನೋರೋಗವಾಗಿದೆ, ಪಬ್ಲಿಸಿಟಿಗೆ ಹಾತೊರೆಯುತ್ತಿದ್ದೇನೆ ಎಂದೆಲ್ಲ ಪ್ರಚಾರ ನಡೆಸಲಾಗಿದೆ. ಅಮ್ಮ ಮೀರಾ ದೇವಿ ಸೇರಿದಂತೆ ಮನೆ ಮಂದಿಯನ್ನು ಫೋನ್‌ನಲ್ಲಿ ಬೆದರಿಸುತ್ತಿದ್ದಾರೆಂದು ಅನಾಮಿಕಾ ಹೇಳುತ್ತಾರೆ. ಭಯೋತ್ಪಾದಕರನ್ನು ನೋಡಿದ್ದೇನೆ ಎಂದು ಹೇಳಿಯೂ ಅವರನ್ನು ಗುರುತಿಸುವ ಪರೇಡ್‌ಗೂ ಕರೆದಿಲ್ಲ. ಈ ಪ್ರಕರಣದಲ್ಲಿ ತನ್ನನ್ನು ಸಾಕ್ಷಿಯಾಗಿ ಮಾಡಿಲ್ಲವೆಂದು ಅನಾಮಿಕಾ ಹೇಳುತ್ತಿದ್ದಾರೆ.

## ಕಸಬ್‌ನನ್ನು ತಯಾರಿಸಿದ...

(ಮುಖಪುಟದಿಂದ)

ಜೈಲಿನಲ್ಲಿ ಕೊಳೆದು ನಂತರ ನಿರಪರಾಧಿಯೆಂದು ದೂಳು ಕೊಡವಿ ಎದ್ದು ಬಂದವರೂ ಇಲ್ಲಿದ್ದಾರೆ. ಉದಾ: ರಾಜಸ್ತಾನದ ಶಿಕರ್‌ಪುರದ ಮುಹಮ್ಮದ್ ಶಮೀಮ್ ಎಂಬ ವ್ಯಕ್ತಿ ಮಾಲೆಗಾಂವ್ ಸ್ಫೋಟದ ಆರೋಪಿಗಳ ಪಟ್ಟಿಯಲ್ಲಿ ಸೇರಿ 16 ದಿನ ಜೈಲಿನಲ್ಲಿ ಕಳೆಯಬೇಕಾಯಿತು. ಮಾನಸಿಕವಾಗಿಯೂ ದೈಹಿಕವಾಗಿಯೂ ಯಾತನೆ ಅನುಭವಿಸಬೇಕಾಯಿತು. ಇದೀಗ ಅಜ್ಮೀರ್ ಸ್ಫೋಟದ ರೂವಾರಿಗಳು ಯಾರೆಂಬುದು ಜನರಿಗೆ ಮನದಟ್ಟಾಗಿದೆ. ಆದರೆ ಇಂದಿಗೂ ಅದೆಷ್ಟೋ ಮಂದಿ ನಿರಪರಾಧಿಗಳು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಈ ಬಗ್ಗೆ ಕೆಲವೊಂದು ವರದಿಗಳು ಮಾತ್ರ ಹೊರಬರುತ್ತಿವೆ.

ಇಲ್ಲಿನ ಮಾಧ್ಯಮಗಳು ಕಸಬ್‌ನ ತೀರ್ಪು ತ್ವರಿತ ವೇಗದಲ್ಲಿ ಬಂದಿದೆ ಎಂದು ಸಂತಸ ವ್ಯಕ್ತಪಡಿಸಿದೆ. ಯಾವುದೇ ಪ್ರಕರಣದ ವಿಚಾರಣೆಯು ತ್ವರಿತಗತಿಯಲ್ಲಿ ತೀರ್ಮಾನ ಮಾಡಬೇಕಾದ ಅಗತ್ಯವಿದೆ. ತಾವು ಅಪರಾಧಿಗಳೋ ನಿರಪರಾಧಿಗಳೋ ಎಂದು ತೀರ್ಮಾನಿಸಲು ಉಳಿದಿರುವ ಅನೇಕ ಮಂದಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಈ ಬಗ್ಗೆ ನ್ಯಾಯಾಂಗ ವ್ಯವಸ್ಥೆಯು ಗಮನಹರಿಸಬೇಕಾದ ಅವಶ್ಯಕತೆಯಿದೆ.

**ಖದೀಜ ಮುಸ್ಲಿಮ್ ಲೇಡೀಸ್ ಹಾಸ್ಟೆಲ್**

ಕಳೆದ 7 ವರ್ಷಗಳಿಂದ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿರುವ ಮುಸ್ಲಿಮ್ ಮಹಿಳಾ ಹಾಸ್ಟೆಲ್‌ಗೆ ಸೇರಬಯಸುವವರಿಗೆ ಸದವಕಾಶ. ಸೇರಬಯಸುವ ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಕೂಡಲೇ ಸಂಪರ್ಕಿಸಿರಿ:

ನಮ್ಮಲ್ಲಿರುವ ಸೌಲಭ್ಯಗಳು

- ಸಸ್ಯಹಾರಿ ಹಾಗೂ ಮಾಂಸಹಾರಿ ಉಪಹಾರ
- ನಮಾಝ್ ಕೊಠಡಿ
- ಲಿಫ್ಟ್ ಸೌಲಭ್ಯ
- ಪ್ರತಿ ದಿನ ಖುರ್‌ಆನ್ ತರಗತಿ
- ಭಾನುವಾರ ಬೆಳಿಗ್ಗೆ ಎರಡು ಗಂಟೆಗಳ ಧಾರ್ಮಿಕ ತರಗತಿ
- ದಿನದ ಎಲ್ಲಾ ಸಮಯದಲ್ಲೂ ಸೆಕ್ಯೂರಿಟಿ ಸೌಲಭ್ಯ
- 24 ಗಂಟೆ ಪೂರ್ತಿ ಬಿಸಿ ನೀರಿನ ಸೌಕರ್ಯ ಲಭ್ಯ

ನಗರದ ಹೃದಯ ಭಾಗದಲ್ಲಿ

ಆಸಕ್ತರು ಕೂಡಲೇ ಸಂಪರ್ಕಿಸಿರಿ:

**Mob: 9844231535 / 0824-4277867, 4277868**

ಸಿಟಿಲೈಟ್ ಬಿಲ್ಡಿಂಗ್, 4ನೇ ಮಹಡಿ ಬಲ್ಮಠ ರೋಡ್, ಮಂಗಳೂರು

**ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್ | ಶಿಹಾಬ್ ಇಂಗ್ಲಿಷ್ ಮೀಡಿಯಂ ಸ್ಕೂಲ್**

ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ



ಪ್ರತೀ ವರ್ಷ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಅತ್ಯುತ್ತಮ ಶಾಲೆ.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.

ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
ಎಸ್. ಎಸ್. ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ ಕಂಪ್ಯೂಟರ್ ತರಬೇತಿ.
ಅರ್ಹತೆಗನುಸಾರ ವಿದ್ಯಾರ್ಥಿವೇತನ.
ಮಂಗಳೂರಿನಿಂದ 32 k.m. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.

ದಾಖಲಾತಿಗಾಗಿ ಸಂಪರ್ಕಿಸಿರಿ

ಚೇಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575 003. ಫೋನ್ : 0824 - 2440339 (0), 2495121(R)
ಇಮೈಲ್ : sheikhabdullah@email.com ಫ್ಯಾಕ್ಸ್ : 0824 - 4256762
ಮೊಬೈಲ್ : 98440 35786

ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್, ಅಡ್ಕ ಬಂದಿಯೋಡ್,
ಮಂಗಲಪಾಡಿ - 671 324 ಉಪ್ಪಳ, ಕಾಸರಗೋಡ್ ಜಿಲ್ಲೆ.
ಫೋನ್.: 04998 - 240222, 240333. ಫ್ಯಾಕ್ಸ್ : 240333
ವೆಬ್‌ಸೈಟ್ : www.shihabfoundation.org

Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. **Editor: A.K. Kukkila, CHIEF EDITOR: P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)